ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಫೆಬ್ರವರಿ 11, 2009 ರೂ. 12/-



ಮೈತ್ರಾದೇವಿ ಸಾವಿನ ಮರುತನಿಖೆ

ಗೋರಿಯಿಂದ …ದ್ದುಬಂದ ಪತ್ನಿ



ಕೀಚಕ ಸೇನೆ



ಲೋಕಸಭಾ ಚುನಾವಣೆ

ಟಿಕೆಟ್ ಭರಾಟೆ ಶುರು!


…ೀರಶೈವ …ಹಾಸಭಾದಲ್ಲಿ …ಡಕು



ಕೊಟ್ಟೋನು ಕೋಡಂಗಿ ಈಸ್ಕಂಡೋನು ಸಂಪಂಗಿ

ಒಬಾಮಾ ಕೊಟ್ಟ ಮಾತನ್ನು ಉಳಿಸಿಕೊಳ್ಳುತ್ತಾರೆಯೆ?

ವಿಶ್ವದ ಅತ್ಯಂತ ಬಲಿಷ್ಠ ರಾಷ್ಟ್ರ ಅಮೆರಿಕದ ಅಧ್ಯಕ್ಷ ಗಾದಿಗೇರಿರುವ ಬರಾಕ್ ಹುಸೇನ್ ಒಬಾಮಾ ಅವರ ಮೇಲೆ ವಿಶ್ವದಾದ್ಯಂತ ಹೊಸ ಬಗೆಯ ನಿರೀಕ್ಷೆಗಳು ಹುಟ್ಟಿಕೊಂಡಿವೆ. ಅದರಲ್ಲೂ ವಿಶೇಷವಾಗಿ ಮಧ್ಯ ಪ್ರಾಚ್ಯದ ಜನತೆ ಒಬಾಮಾ ಮೇಲೆ ಬಹಳಷ್ಟು ಭರವಸೆಗಳನ್ನು ಇಟ್ಟುಕೊಂಡಿದ್ದಾರೆ. ತಮ್ಮ ಅಧ್ಯಕ್ಷೀಯ ಚುನಾವಣೆಯ ಆರಂಭದಲ್ಲಿಯೇ ಒಬಾಮಾ ವಾಷಿಂಗ್ಟನ್‌ನಲ್ಲಿ "ನಾವು ಇಸ್ಲಾಮ್‌ನೊಂದಿಗೆ ಯುದ್ಧಕ್ಕಿಳಿಯುವುದಿಲ್ಲ, ತಮ್ಮ ಭವಿಷ್ಯಕ್ಕಾಗಿ ಹೋರಾಡುವ ಜನರೊಂದಿಗೆ ನಾವಿರುತ್ತೇವೆ" ಎಂದು ಹೇಳಿದ್ದರು. ಅಧ್ಯಕ್ಷಗಾದಿಗೇರಿದ ಮೇಲೆ ತಮ್ಮ ಮೊದಲನೇ ಮುಂಜಾನೆಯನ್ನು ಗ್ವಾಂಟನಾಮೋ ಕೊಲ್ಲಿಯಲ್ಲಿ ಕಳೆದ ಒಬಾಮಾ ಕೇವಲ ಒಂದು ನೂರು ದಿನಗಳಲ್ಲಿ ಪ್ರಮುಖ ಇಸ್ಲಾಮಿಕ್ ವೇದಿಕೆಯೊಂದಿಗೆ ಚರ್ಚಿಸುವುದಾಗಿ ಹೇಳಿದರು: ಇಸ್ಲಾಮಿಕ್ ಭಯೋತ್ಪಾದನೆಯ ವಿರುದ್ಧದ ತಮ್ಮ ಹೋರಾಟವನ್ನು ಪುನರ್‌ವ್ಯಾಖ್ಯಾನಿಸುವುದಾಗಿ ಪುನರುಚ್ಚರಿಸಿದರು: "ಮುಸ್ಲಿಮರು ನಮ್ಮ ಶತ್ರುಗಳಲ್ಲ" ಎಂದು ಸ್ನೇಹಹಸ್ತ ಚಾಚಿದರು. ಸಹಜವಾಗಿಯೇ ಇದು ಇಸ್ಲಾಮಿಕ್ ದೇಶಗಳ ಜನತೆಯಲ್ಲಿ ಹೊಸ ನಿರೀಕ್ಷೆಗಳನ್ನು ಹುಟ್ಟಿಸಿದೆ.




ಈಗ ಅವರ ಮುಂದಿರುವ ಸವಾಲೆಂದರೆ ಇಷ್ಟೊಂದು ನಿರೀಕ್ಷೆಗಳನ್ನು, ಭರವಸೆಗಳನ್ನು ಹುಸಿಯಾಗದಂತೆ ನೋಡಿಕೊಳ್ಳುವುದು; ತಾವೇ ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಹೆಣಗಾಡುವುದು. ಇನ್ನೂ ನೇರವಾಗಿ ಹೇಳಬೇಕೆಂದರೆ ಅಮೆರಿಕ ಕಳೆದ ಅರ್ಧ ಶತಮಾನದಲ್ಲಿ ಅನುಸರಿಸಿಕೊಂಡು ಬಂದಿರುವ ವಿದೇಶಾಂಗ ನೀತಿಯನ್ನು - ಅದರಲ್ಲೂ ನಿರ್ದಿಷ್ಟವಾಗಿ ಮಧ್ಯಪ್ರಾಚ್ಯಕ್ಕೆ ಸಂಬಂಧಿಸಿದ ವಿದೇಶಾಂಗ ನೀತಿಯನ್ನು - ತಲೆಕೆಳಗಾಗಿ ಮಾಡುವುದು! ಒಬಾಮಾರಿಂದ ಅದು ಸಾಧ್ಯವೆ ಎಂಬ ಪ್ರಶ್ನೆ ಸಹಜವಾಗಿ ಕಾಡುತ್ತದೆ. ಏಕೆಂದರೆ, ಅಮೆರಿಕವನ್ನು ಮುನ್ನಡೆಸುತ್ತಿರುವುದು ಕೇವಲ ಅದರ ಅಧ್ಯಕ್ಷನಲ್ಲ, ಬದಲಿಗೆ ಇಡೀ ಪ್ರಪಂಚದ ಮೇಲೆ ಆಧಿಪತ್ಯ ಸಾಧಿಸಲು ಹೊರಟಿರುವ ದೈತ್ಯ ಕಂಪನಿಗಳೇ ಅಮೆರಿಕದ ನೀತಿಗಳೇನಾಗಿರಬೇಕು ಎಂಬುದನ್ನು ನಿರ್ಧರಿಸುತ್ತವೆ.

ಉದಾಹರಣೆಗಾಗಿ ಅಮೆರಿಕದ ಯುದ್ಧ ನೀತಿಯನ್ನೇ ನೋಡೋಣ. ಕಳೆದ ಒಂದು ನೂರು ವರ್ಷಗಳಲ್ಲಿ ಅಮೆರಿಕ ಒಂದು ನೂರಕ್ಕಿಂತಲೂ ಹೆಚ್ಚು ಬಾರಿ ಇತರ ದೇಶಗಳೊಂದಿಗೆ ಯುದ್ಧ ಮಾಡಿದೆ. ಇದನ್ನು ಈ ಅವಧಿಯಲ್ಲಿ ಅಧ್ಯಕ್ಷರಾಗಿದ್ದವರೆಲ್ಲರಿಗೂ ಯುದ್ಧ ಸನ್ನಿ ಹಿಡಿದಿತ್ತೆಂದು ವಿಶ್ಲೇಷಿಸುವುದು ಮೂರ್ಖತನವಾಗುತ್ತದೆ. ಅಮೆರಿಕದಲ್ಲಿ ಯುದ್ಧೋಪಕರಣಗಳನ್ನು ಉತ್ಪಾದಿಸುವ, ಯುದ್ಧ ವಿಮಾನ, ಹಡಗುಗಳನ್ನು ನಿರ್ಮಿಸುವ ಕೈಗಾರಿಕೆ ಅಗಾಧ ಪ್ರಮಾಣದಲ್ಲಿ ಬೆಳೆದು ನಿಂತಿದೆ. ಹೊಸ ಹೊಸ ಯುದ್ಧೋಪಕರಣಗಳನ್ನು ಉತ್ಪಾದಿಸುವುದಕ್ಕಾಗಿಯೇ ಈ ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದ ಬಂಡವಾಳ ಹೂಡಲಾಗಿದೆ. ಈ ಹೊತ್ತು ಅಮೆರಿಕದಲ್ಲಿ ಎಂತಹ ಪರಿಸ್ಥಿತಿ ನಿರ್ಮಾಣವಾಗಿದೆಯೆಂದರೆ, ಯುದ್ಧೋಪಕರಣಗಳನ್ನು ಉತ್ಪಾದಿಸುವ ಕಂಪನಿಗಳು ಬದುಕಬೇಕೆಂದರೆ ಅಮೆರಿಕ ನಿರಂತರವಾಗಿ ಇನ್ನಿತರ ದೇಶಗಳೊಂದಿಗೆ ಯುದ್ಧ ಮಾಡುತ್ತಲೇ ಇರಬೇಕು ಹಾಗೂ ಈ ಕಂಪನಿಗಳಿಂದ ಯುದ್ಧೋಪಕರಣಗಳನ್ನು ಖರೀದಿಸುತ್ತಲೇ ಇರಬೇಕು. ಆದರೂ ಆ ಕಂಪನಿಗಳ ಹಸಿವು ನೀಗುವುದಿಲ್ಲ. ಪ್ರಪಂಚದಲ್ಲಿ ಇನ್ನಿತರ ದೇಶಗಳೂ ಕೂಡ ಪರಸ್ಪರ ಯುದ್ಧ ಮಾಡುತ್ತಿರಬೇಕು ಅಮೆರಿಕದ ಕಂಪನಿಗಳು ಉತ್ಪಾದಿಸುವ ಯುದ್ಧೋಪಕರಣಗಳನ್ನು ಖರೀದಿಸುತ್ತಿರಬೇಕು. ಆಗ ಮಾತ್ರ ಈ ಕಂಪನಿಗಳು ಉಳಿದು ಬೆಳೆಯುವುದಕ್ಕೆ ಸಾಧ್ಯವಿದೆ. ಕಳೆದ ಒಂದೇ ವರ್ಷದಲ್ಲಿ ಅಮೆರಿಕವು ಸೌದಿ ಅರೇಬಿಯಕ್ಕೆ 20 ಬಿಲಿಯನ್ ಡಾಲರ್ ಮೌಲ್ಯದ ಶಸ್ತ್ರಾಸ್ತ್ರಗಳನ್ನು ಮಾರುವ ಒಪ್ಪಂದವೊಂದಕ್ಕೆ ಸಹಿ ಹಾಕಿದೆ. ಇಸ್ರೇಲ್‌ಗೆ 30 ಬಿಲಿಯನ್ ಡಾಲರ್ ಮೌಲ್ಯದ ಶಸ್ತ್ರಾಸ್ತ್ರ ಪೂರೈಸುವುದಾಗಿ ಒಪ್ಪಂದ ಮಾಡಿಕೊಂಡಿದೆ. ಇದಲ್ಲದೇ ವಿಶ್ವದಾದ್ಯಂತ ಅನೇಕ ದೇಶಗಳೊಂದಿಗೆ ತನ್ನ ಶಸ್ತ್ರಾಸ್ತ್ರ ಮಾರಾಟಕ್ಕಾಗಿ ಒಪ್ಪಂದ ಮಾಡಿಕೊಂಡಿದೆ. ಈಗ ಒಬಾಮಾ ಬೇರೆ ದೇಶಗಳೊಂದಿಗೆ ಯುದ್ಧ ಮಾಡುವುದನ್ನು ನಿಲ್ಲಿಸಿಬಿಡುತ್ತೇನೆಂದು ಹೇಳಿದರೂ, ಯುದ್ಧ ನಿರತ ಬೇರೆ ಬೇರೆ ದೇಶಗಳೊಂದಿಗೆ ಸಂಧಾನ ಮಾಡಿ ಶಾಂತಿ ನೆಲೆಸುತ್ತೇನೆ ಎಂದು ಹೇಳಿದರೂ ಅದಕ್ಕೆ ಈ ದೈತ್ಯ ಉದ್ಯಮಿಗಳು ಅವಕಾಶ ಕೊಡುತ್ತಾರೆಯೆ? ಹಾಗಾಗಿ ಯುದ್ಧವನ್ನಾಧರಿತ ಅಮೆರಿಕದ ವಿದೇಶಾಂಗ ನೀತಿಯನ್ನು ಒಮ್ಮಿಂದೊಮ್ಮೆಲೆ ಬದಲಿಸಿಬಿಡುವುದಕ್ಕೆ ಒಬಾಮಾರಿಂದ ಸಾಧ್ಯವಿಲ್ಲ.

ಇನ್ನೊಂದು ಉದಾಹರಣೆಯನ್ನು ನೋಡಿ. ಯುದ್ಧೋಪಕರಣ ತಯಾರಿಕಾ ಉದ್ಯಮದಂತೆಯೇ ಅಮೆರಿಕದಲ್ಲಿ ಬೃಹತ್ ಪ್ರಮಾಣದಲ್ಲಿ ಬೆಳೆದು ನಿಂತಿರುವ ಇನ್ನೊಂದು ಉದ್ಯಮ ಎಂದರೆ ನಿರ್ಮಾಣ ಉದ್ಯಮ. ಈ ಉದ್ಯಮದಲ್ಲಿ ತೊಡಗಿಸಿಕೊಂಡಿರುವ ಕಂಪನಿಗಳಿಗೀಗ ಅಮೆರಿಕದಲ್ಲಿ ಹೇಳಿಕೊಳ್ಳುವಂಥ ಕೆಲಸವೇನಿಲ್ಲ. ಹಾಗಾಗಿ ಅವೆಲ್ಲ ಈಗ ಬೇರೆ ಬೇರೆ ದೇಶಗಳಲ್ಲಿ ರಸ್ತೆ, ಸೇತುವೆ, ಡ್ಯಾಮ್, ನಗರ ನಿರ್ಮಾಣ ಮುಂತಾದ ಯೋಜನೆಗಳಲ್ಲಿ ಅಗಾಧ ಪ್ರಮಾಣದ ಹಣ ಹೂಡಿವೆ. ನಿಮಗೆ ನೆನಪಿರಬಹುದು 2002ರಲ್ಲಿ ಅಮೆರಿಕ ಇರಾಕ್ ಮೇಲೆ ಯುದ್ಧ ಮಾಡಿದ ನಂತರ ಅಮೆರಿಕದ ಬಾಂಬ್ ದಾಳಿಯಿಂದ ನಜ್ಜುಗುಜ್ಜಾಗಿದ್ದ ಇರಾಕ್‌ನ ಪುನರ್ ನಿರ್ಮಾಣದ ಗುತ್ತಿಗೆಯನ್ನು ಬೆಕ್ಟೆಲ್, ಹಲಿಬರ್ಟನ್‌ನಂಥ ಅಮೆರಿಕದ ದೈತ್ಯ ಕಂಪನಿಗಳಿಗೇ ಕೊಡಲಾಯಿತು. ನೇರವಾಗಿ ಹೇಳಬೇಕೆಂದರೆ ಇರಾಕ್ ಯುದ್ಧದಿಂದ ಕೇವಲ ಇರಾಕ್‌ನ ತೈಲದ ಮೇಲೆ ನಿಯಂತ್ರಣ ಸಿಕ್ಕಿದ್ದು ಮಾತ್ರವಲ್ಲ ಅಮೆರಿಕದ ನಿರ್ಮಾಣ ಕಂಪನಿಗಳಿಗೆ ಕೆಲಸವೂ ಸಿಕ್ಕಿತು. ಈಗ ಒಬಾಮಾ ಯುದ್ಧ ಬೇಡವೆಂದರೆ ಅವರೆಲ್ಲಾ ಸುಮ್ಮನಿರುತ್ತಾರೆಯೆ?

ಒಬಾಮಾ ಮುಂದಿರುವ ಮತ್ತೊಂದು ಸವಾಲು ಎಂದರೆ ಇಸ್ರೇಲ್ ಮತ್ತು ಈಜಿಪ್ಟ್ ದೇಶಗಳಿಗೆ ನೀಡುತ್ತಿರುವ ಮಿಲಿಟರಿ ಸಹಾಯವನ್ನು ಹೇಗೆ ನಿಭಾಯಿಸುತ್ತಾರೆಂಬುದು. ಅಮೆರಿಕ ಪ್ರತಿ ವರ್ಷ ಈ ಎರಡು ದೇಶಗಳಿಗೆ ಐದು ಬಿಲಿಯನ್ ಡಾಲರ್‌ಗಿಂತ ಹೆಚ್ಚು ಮೊತ್ತದ ಸಹಾಯವನ್ನು ಮಾಡುತ್ತಿದೆ. ಅದರಲ್ಲಿ ಬಹುತೇಕ ಪ್ರಮಾಣ ಶಸ್ತ್ರಾಸ್ತ್ರಗಳ ಪೂರೈಕೆಯ ರೂಪದಲ್ಲಿದೆ. ಮಧ್ಯಪ್ರಾಚ್ಯದಲ್ಲಿ ಸಂಪೂರ್ಣವಾಗಿ ನಿಯಂತ್ರಣ ಸಾಧಿಸುವುದಕ್ಕಾಗಿಯೇ ಅಮೆರಿಕ ಇಸ್ರೇಲ್‌ನಂತ ಗೂಂಡಾ ರಾಷ್ಟ್ರವೊಂದನ್ನು ಬೆಳೆಸಿದೆ. ಪ್ಯಾಲಿಸ್ಟೇನ್ ಮೇಲೆ ಇಲ್ಲಿಯತನಕ ಇಸ್ರೇಲ್ ನಡೆಸುತ್ತಾ ಬಂದಿರುವ ದೌರ್ಜನ್ಯಗಳಿಗೆ ಬೆಂಗಾವಲಾಗಿ ನಿಂತಿದೆ. ಇದನ್ನು ಏಕಾಏಕಿಯಾಗಿ ನಿಲ್ಲಿಸುವುದು ಒಬಾಮಾಗೆ ಅಷ್ಟು ಸುಲಭವಲ್ಲ.

ಒಬಾಮಾ ತಾವಾಡಿದ ಮಾತುಗಳನ್ನು, ಚುನಾವಣೆಗೆ ಮುನ್ನ ಕೊಟ್ಟ ಭರವಸೆಗಳನ್ನು ಕಾರ್ಯಗತ ಮಾಡಲು ಈಗಾಗಲೇ ಕಾರ್ಯಪ್ರವೃತ್ತರಾದಂತೆ ಕಾಣುತ್ತಿದೆ. ಅಧಿಕಾರಕ್ಕೇರಿದ ತಕ್ಷಣ ಅಮೆರಿಕದ ಗ್ವಾಂಟಮಾನೋ ಚಿತ್ರಹಿಂಸಾ ಶಿಬಿರವನ್ನು ಮುಚ್ಚುವ ನಿರ್ಧಾರ ಮಾಡಿದ್ದಾರೆ. ಇರಾಕ್‌ನಿಂದ ಅಮೆರಿಕದ ಸೈನ್ಯವನ್ನು ಸಂಪೂರ್ಣವಾಗಿ ವಾಪಸ್ಸು ಕರೆಸಿಕೊಳ್ಳುವುದಾಗಿ ಭರವಸೆ ಕೊಟ್ಟಿದ್ದಾರೆ. ಇರಾನ್‌ನೊಂದಿಗೆ ಬೇಷರತ್ತಾಗಿ ಮಾತುಕತೆ ಮಾಡುವ ಮೂಲಕ ಸ್ನೇಹಹಸ್ತ ಚಾಚಿದ್ದಾರೆ. ಇಲ್ಲಿಯತನಕ ಅಮೆರಿಕ ತಪ್ಪು ಮಾಡಿದೆಯೆಂದು ಒಪ್ಪಿಕೊಂಡಿದ್ದಾರೆ. ಆದರೆ, ಅವರು ಹುಟ್ಟಿಸಿದ ಭರವಸೆಗಳನ್ನು, ಕೊಟ್ಟ ಮಾತುಗಳನ್ನು ಈಡೇರಿಸುವುದಕ್ಕೆ ಅಮೆರಿಕದ ಒಟ್ಟಾರೆ ರಾಜಕೀಯ ವ್ಯವಸ್ಥೆ ಎಷ್ಟರಮಟ್ಟಿಗೆ ಅವಕಾಶ ಮಾಡಿಕೊಡುತ್ತದೆ ಎಂಬುದನ್ನು ಭವಿಷ್ಯ ಮಾತ್ರವೇ ಹೇಳಬಲ್ಲದು. ■



ಮಗಳಿಗಿದ್ದಷ್ಟೂ ವಿವೇಚನೆ ಅಪ್ಪನಿಗಿಲ್ಲ

ಮಂಗಳೂರಿನ ಪಬ್‌ವೊಂದರ ಮೇಲೆ ಶ್ರೀರಾಮಸೇನೆಯ ಕಪಿಗಳು ದಾಂಧಲೆಯೆಬ್ಬಿಸಿ ಹೆಣ್ಣು ಮಕ್ಕಳನ್ನು ಅಮಾನುಷವಾಗಿ ಬಡಿದು ಹಾಕಿದರು. ಇದರ ಬೆನ್ನಹಿಂದೆಯೇ ಮುಖ್ಯಮಂತ್ರಿ, ಬಿ.ಎಸ್.ಯಡಿಯೂರಪ್ಪನವರು ಪಬ್ ಸಂಸ್ಕೃತಿಗೆ ಅವಕಾಶ ಕೊಡುವುದಿಲ್ಲ ಎಂದು ಹೂಂಕರಿಸಿದರು. ಆದರೆ, ಅವರ ಮಗಳು ಉಮಾದೇವಿ ಅಪ್ಪನಿಗೆ ತದ್ವಿರುದ್ಧವಾಗಿ ಮಾತನಾಡಿದ್ದಾರೆ. "ಪಬ್‌ಗೆ ಹೋಗಬೇಕೋ ಬಿಡಬೇಕೋ ಎಂಬುದು ಮಹಿಳೆಯರು ಖುದ್ದಾಗಿ ತೀರ್ಮಾನಿಸುತ್ತಾರೆಯೇ ಹೊರತು ಅದನ್ನು ಸರ್ಕಾರವಾಗಲೀ, ಶ್ರೀರಾಮಸೇನೆಯಂಥ ಸಂಘಟನೆಯಾಗಲೀ ತೀರ್ಮಾನಿಸುವ ಹಕ್ಕಿಲ್ಲ" ಎಂದು ಸ್ಪಷ್ಟವಾಗಿ ಮಹಿಳೆಯರ ಹಕ್ಕುಗಳ ಬಗ್ಗೆ ಮಾತನಾಡಿದ್ದಾರೆ. ಇಂಡಿಯನ್ ಎಕ್ಸ್‌ಪ್ರೆಸ್ ಎಂಬ ಇಂಗ್ಲಿಷ್ ಪತ್ರಿಕೆಯಲ್ಲಿ ಉಮಾದೇವಿಯ ಮಾತುಗಳು ಪ್ರಕಟವಾಗುತ್ತಿದ್ದಂತೆಯೇ ಯಡಿಯೂರಪ್ಪನವರು ಮಗಳ ಮೇಲೂ ಒತ್ತಡ ತಂದು ಅವಳ ಮಾತನಾಡುವ ಹಕ್ಕನ್ನೂ ಕಿತ್ತುಕೊಂಡಂತಿದೆ. ಆದ್ದರಿಂದಲೇ ಉಮಾದೇವಿಯವರು ಯಾವ ಪತ್ರಕರ್ತರಿಗೂ ಸಿಗದಂತೆ ಭೂಗತವಾಗಿಬಿಟ್ಟಿದ್ದಾರೆ!

ಕನಿಷ್ಠ ತಮ್ಮ ಮಗಳಿಗಿರುವಷ್ಟು ವಿವೇಚನೆಯೂ ಯಡಿಯೂರಪ್ಪನವರಿಗಿಲ್ಲದಿರುವುದು ವಿಪರ್ಯಾಸ. ಆರ್‌ಎಸ್‌ಎಸ್ ನಿರ್ದೇಶಿತ ಸಂಸ್ಕೃತಿಯೇ ನಿಜವಾದ ಭಾರತೀಯ ಸಂಸ್ಕೃತಿಯೆಂದೂ, ಉಳಿದದ್ದೆಲ್ಲವೂ ಭಾರತೀಯ ಸಂಸ್ಕೃತಿಗೆ ವಿರೋಧವಾದದ್ದೆಂದೂ ವ್ಯಾಖ್ಯಾನಿಸುತ್ತ ಈ ರೀತಿ ದೈಹಿಕ ದಾಳಿಗಿಳಿಯುವುದು ಪ್ರಜಾತಂತ್ರದ ಹರಣವಲ್ಲದೇ ಮತ್ತೇನಲ್ಲ. ಆರೆಸ್ಸೆಸ್ಸಿಗರು ಹೇಳುವಂತೆ ಪಬ್ ಸಂಸ್ಕೃತಿ ಭಾರತೀಯ ಸಂಸ್ಕೃತಿಗೆ ವಿರೋಧವಾಗಿ ಹೊರಗಿನಿಂದ ಬಂದ ಸಂಸ್ಕೃತಿಯೇನಲ್ಲ. ಅಸಲಿಗೆ ಆ ಸಂಸ್ಕೃತಿ ಹುಟ್ಟಿದ್ದೇ ಭಾರತದಲ್ಲಿ ಎಂದರೂ ತಪ್ಪಾಗಲಾರದೇನೋ? ಭಾರತದ ಚರಿತ್ರೆಯನ್ನೊಮ್ಮೆ ಸೂಕ್ಷ್ಮವಾಗಿ ಅವಲೋಕಿಸಿ ನೋಡಿ. ಇಲ್ಲಿಯೂ ಮೋಜಿಗಾಗಿ ರಾಮರಸ, ಸೋಮರಸಗಳನ್ನು ಕುಡಿಯುವುದು, ರಾಜನ ಆಸ್ಥಾನಗಳಲ್ಲಿ, ದೇವಾಲಯಗಳಲ್ಲಿ ಅರೆನಗ್ನವಾಗಿ ಮಹಿಳೆಯರು ನರ್ತಿಸುವುದು ಚರಿತ್ರೆಯುದ್ದಕ್ಕೂ ಕಂಡುಬರುತ್ತದೆ.



ಬೇಲೂರು-ಹಳೇಬೀಡುಗಳ ಶಿಲಾಬಾಲಿಕೆಯರ ಶಿಲ್ಪಗಳನ್ನೂ ಒಳಗೊಂಡಂತೆ ಇಡೀ ದೇಶದಾದ್ಯಂತ ಇರುವ ನಗ್ನ, ಅರೆನಗ್ನಾವಸ್ಥೆಯ ವಾಸ್ತುಶಿಲ್ಪಗಳು ಇದಕ್ಕೆ ಜೀವಂತ ಉದಾಹರಣೆಗಳಾಗಿವೆ. ಅಲ್ಲದೇ, ಮದ್ಯಸೇವನೆಯ ಪ್ರಸಂಗಗಳು, ಅರೆನಗ್ನ ನೃತ್ಯಗಳ ದೃಶ್ಯಗಳು ನಮ್ಮ ವೇದೋಪನಿಷತ್ತುಗಳಲ್ಲಿ, ಪುರಾಣಗಳಲ್ಲಿ ಹೇರಳವಾಗಿವೆ. ಅದೆಲ್ಲಾ ಭಾರತೀಯ ಸಂಸ್ಕೃತಿಯಲ್ಲವೆ?

ಅಧಿಕೃತವಾಗಿ ವಿಮಾನ ಕಂಡುಹಿಡಿಯುವ ಅದೆಷ್ಟೋ ಸಾವಿರ ವರ್ಷಗಳ ಮೊದಲೇ 'ಪುಷ್ಪಕ ವಿಮಾನ'ದ ಪರಿಕಲ್ಪನೆಯ ಮೂಲಕ ವಿಮಾನದ ಸಾಧ್ಯತೆಯನ್ನು ಭಾರತೀಯರು ಜಗತ್ತಿಗೆ ತೋರಿಸಿಕೊಟ್ಟಿದ್ದಾರೆಂದು ಹೇಳುತ್ತಾರಲ್ಲ, ಅದೇ ರೀತಿಯಲ್ಲಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪಬ್ ಸಂಸ್ಕೃತಿ ಬೆಳೆಯುವ ಅದೆಷ್ಟೋ ಸಾವಿರ ವರ್ಷಗಳ ಮೊದಲೇ ಅದನ್ನು ಭಾರತೀಯರೇ ಹುಟ್ಟುಹಾಕಿದ್ದಾರೆ ಎಂದು ಯಾಕೆ ಹೇಳುವುದಿಲ್ಲ? ■


ಸುತ್ತ ಮುತ್ತ

ಕುಮಾರ್ ಬುರಡಿಕಟ್ಟಿ




ಚುನಾವಣಾ ಆಯೋಗದಲ್ಲೂ ಭುಗಿಲೆದ್ದ ರಾಜಕೀಯ

ಭಾರತದ ಚುನಾವಣಾ ಆಯೋಗ ಯಾವುದೇ ರಾಜಕೀಯ ಪಕ್ಷದ, ಸರ್ಕಾರದ ಅಧೀನಕ್ಕೆ ಒಳಪಡದ, ಸಂವಿಧಾನಕ್ಕೆ ಬದ್ಧವಾಗಿರುವ ಸಾಂವಿಧಾನಿಕ ಅಂಗ ಎಂದು ನಂಬಲಾಗಿದೆ. ಆದರೆ, ಇತ್ತೀಚೆಗೆ ಆಯೋಗದೊಳಗೆ ನಡೆಯುತ್ತಿರುವ ಬೆಳವಣಿಗೆಗಳನ್ನು ನೋಡಿದರೆ ಅದೂ ಕೂಡ ಭ್ರಷ್ಟ ರಾಜಕೀಯದಿಂದ ಮುಕ್ತವಾಗಿಲ್ಲ ಎಂಬ ಅನುಮಾನ ಕಾಡುತ್ತದೆ.



ನವೀನ್ ಚಾವ್ಲಾ



ಎನ್.ಗೋಪಾಲಸ್ವಾಮಿ

ಮುಖ್ಯ ಚುನಾವಣಾ ಕಮೀಷನರ್ ಆಗಿರುವ ಎನ್.ಗೋಪಾಲಸ್ವಾಮಿಯವರು ರಾಷ್ಟ್ರಪತಿಗಳಿಗೆ ಪತ್ರಬರೆದು ಇನ್ನೊಬ್ಬ ಚುನಾವಣಾ ಕಮೀಷನರ್ ಆಗಿರುವ ನವೀನ್ ಚಾವ್ಲಾ ಅವರನ್ನು ಅಧಿಕಾರದಿಂದ ವಜಾಗೊಳಿಸಬೇಕೆಂದು ಶಿಫಾರಸ್ಸು ಮಾಡಿದ್ದಾರೆ. ಅದರೊಂದಿಗೆ ತ್ರಿಸದಸ್ಯ ಆಯೋಗ ದಲ್ಲಿ ಒಳಗೊಳಗೇ ನಡೆಯುತ್ತಿದ್ದ ಮುಸುಕಿನ ಗುದ್ದಾಟವೊಂದು ಹೊರಬಂದಂತಾಗಿದೆ.

ಈ ಹಿಂದೆ ಮಾರ್ಚ್ 16, 2006ರಲ್ಲಿ ಲೋಕಸಭೆಯ ವಿರೋಧ ಪಕ್ಷದ ನಾಯಕ ಬಿಜೆಪಿಯ ಎಲ್.ಕೆ. ಅಡ್ವಾನಿಯವರು 204 ಸಂಸದರೊಂದಿಗೆ ಸೇರಿ ಸಂವಿಧಾನದ ಕಲಂ 324(5)ರ ಅಡಿಯಲ್ಲಿ ನವೀನ್ ಚಾವ್ಲಾ ಅವರನ್ನು ಚುನಾವಣಾ ಆಯುಕ್ತ ಹುದ್ದೆಯಿಂದ ವಜಾಗೊಳಿಸಬೇಕೆಂದು ಆಗ್ರಹಿಸಿ ಅಂದಿನ ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್ ಕಲಾಮ್ ಅವರಿಗೆ ಅರ್ಜಿ ಸಲ್ಲಿಸಿದ್ದರು. ಚಾವ್ಲಾ ಅವರು ಕಾಂಗ್ರೆಸ್ ಪಕ್ಷಕ್ಕೆ ಹತ್ತಿರವಾಗಿದ್ದಾರೆಂಬುದು ಅವರ ಆರೋಪವಾಗಿತ್ತು. ಅದಾದ ಒಂದು ತಿಂಗಳ ನಂತರದಲ್ಲಿ ಬಿಜೆಪಿಯ ನಾಯಕ ವಿ.ಕೆ.ಮಲ್ಹೋತ್ರ ಅವರೂ ಮುಖ್ಯ ಚುನಾವಣಾಧಿಕಾರಿಗೆ ಇದೇ ಅರ್ಜಿಯ ಪ್ರತಿಯೊಂದನ್ನು ಕಳುಹಿಸಿದ್ದರು. ಆ ನಂತರದಲ್ಲಿ ಬಿಜೆಪಿಯು ಈ ವಿಚಾರವಾಗಿ ಸುಪ್ರೀಮ್ ಕೋರ್ಟಿನ ಮೆಟ್ಟಿಲು ಹತ್ತಿತಾದರೂ ಏನೂ ಪ್ರಯೋಜನವಾಗಿರಲಿಲ್ಲ. 2007ರ ಆಗಸ್ಟ್‌ನಲ್ಲಿ ಅದು ದಾವೆಯನ್ನು ವಾಪಸ್ಸು ಪಡೆಯಿತು. ಈಗ ಮುಖ್ಯ ಚುನಾವಣಾಧಿಕಾರಿ ಗೋಪಾಲಸ್ವಾಮಿಯವರೂ ಚಾವ್ಲಾ ಮೇಲಿದ್ದ ಬಿಜೆಪಿಯ ಆರೋಪವನ್ನು ಸಮರ್ಥಿಸುತ್ತಾ ಚಾವ್ಲಾ ಅವರನ್ನು ಹುದ್ದೆಯಿಂದ ವಜಾಗೊಳಿಸಬೇಕೆಂಬ ಶಿಫಾರಸ್ಸು ಮಾಡಿದ್ದಾರೆ.

1995ಲ್ಲಿ ಟಿ.ಎನ್.ಶೇಷನ್ ಮತ್ತು ಕೇಂದ್ರ ಸರ್ಕಾರಗಳ ನಡುವಿನ ವ್ಯಾಜ್ಯವನ್ನು ವಿಚಾರಣೆ ನಡೆಸಿದ ಸುಪ್ರೀಮ್ ಕೋರ್ಟು ತನ್ನ ತೀರ್ಪಿನಲ್ಲಿ ಸ್ಪಷ್ಟವಾಗಿ ಈ ರೀತಿ ಅಭಿಪ್ರಾಯಪಟ್ಟಿದೆ: "If ... the power (of recommending removal of an Election Commissioner) were to be exercisable by the ECE as per his whim and caprice, the CEC himself would become and instrument of oppression and would destroy the independence of the ECs.. if they are required to function under the threat of the CEC recommending their removal" ಈಗ ಅಂತಹದ್ದೊಂದು ಆತಂಕದಲ್ಲಿ ಚುನಾವಣಾ ಆಯುಕ್ತರು ಇದ್ದಂತೆ ಕಾಣುತ್ತಿದೆ.

ಮುಖ್ಯ ಚುನಾವಣಾ ಆಯುಕ್ತ ಗೋಪಾಲಸ್ವಾಮಿಯವರು ಬರುವ ಏಪ್ರಿಲ್ 20ಕ್ಕೆ ನಿವೃತ್ತಿ ಹೊಂದಲಿದ್ದಾರೆ. ಲೋಕಸಭಾ ಚುನಾವಣೆ ಮತ್ತು ಕೆಲವು ರಾಜ್ಯಗಳ ವಿಧಾನಸಭಾ ಚುನಾವಣೆಗಳು ಏಪ್ರಿಲ್-ಮೇ ತಿಂಗಳಲ್ಲಿ ನಡೆಯಬೇಕಿದೆ. ಚುನಾವಣೆಗಳನ್ನು ಯಾವಾಗ ನಡೆಸಬೇಕೆಂಬುದನ್ನು ಸಾಮಾನ್ಯವಾಗಿ ಚುನಾವಣಾ ಆಯೋಗ ಒಮ್ಮತದಿಂದ ತೀರ್ಮಾನ ತೆಗೆದುಕೊಳ್ಳುತ್ತದೆ. ಒಂದು ವೇಳೆ ಭಿನ್ನಾಭಿಪ್ರಾಯಗಳಿದ್ದಲ್ಲಿ ಬಹುಸಂಖ್ಯಾತರ ಅಭಿಪ್ರಾಯವೇ ತೀರ್ಮಾನವಾಗುತ್ತದೆ. ಸದ್ಯಕ್ಕೆ ಮೂವರು ಸದಸ್ಯರನ್ನು ಒಳಗೊಂಡಿರುವ ಆಯೋಗದಲ್ಲಿ ನವೀನ್ ಚಾವ್ಲಾ ಮತ್ತು ಖುರೇಷಿಯವರು ಒಂದೆಡೆಗಿದ್ದು ಮುಖ್ಯ ಚುನಾವಣಾ ಆಯುಕ್ತ ಗೋಪಾಲಸ್ವಾಮಿಯವರು ಮತ್ತೊಂದೆಡೆಗಿದ್ದಾರೆ. ಹೀಗಾಗಿ, ಏಪ್ರಿಲ್ 20ರಂದು ಗೋಪಾಲಸ್ವಾಮಿಯವರು ನಿವೃತ್ತಿ ಹೊಂದಿದ ಮೇಲೆಯೇ ಚುನಾವಣೆಗಳನ್ನು ನಡೆಸುವ ತೀರ್ಮಾನ ಕೈಗೊಳ್ಳುವ ಸಂಭವವೇ ಹೆಚ್ಚಾಗಿದೆ.

ಸಾರಾಂಶೀಕರಿಸಿ ಹೇಳುವುದಾದರೆ, ಮುಖ್ಯ ಚುನಾವಣಾ ಆಯುಕ್ತ ಗೋಪಾಲಸ್ವಾಮಿಯವರು ಬಿಜೆಪಿ ಪರ ವರ್ತಿಸಿದರೆ, ನವೀನ್ ಚಾವ್ಲಾ ಕಾಂಗ್ರೆಸ್ ಪರ ವರ್ತಿಸುತ್ತಿರುವುದು ಮೇಲ್ನೋಟಕ್ಕೆ ಕಾಣುತ್ತದೆ. ಅಂದರೆ, ಚುನಾವಣಾ ಆಯೋಗವೆಂದರೆ, ಎಲ್ಲಾ ರಾಜಕೀಯ ಪಕ್ಷಗಳ ಪ್ರಭಾವದಿಂದ ಮುಕ್ತವಾಗಿರುವ, ಸ್ವತಂತ್ರ ಸಾಂವಿಧಾನಿಕ ರಚನೆ ಎಂಬ ವ್ಯಾಖ್ಯಾನಕ್ಕೀಗ ಅರ್ಥವಿಲ್ಲದಂತಾಗಿದೆ. ■

ರಾಜ್ಯದ ನೆಮ್ಮದಿ ಕೆಡಿಸಿರುವ ಪುಂಡರು



ಕಂಡಹಾಗೆ

ಗೌರಿ ಲಂಕೇಶ್

ನಿನ್ನೆ ರಾಜ್ಯದ ಪೊಲೀಸ್ ಮಹಾ ನಿರ್ದೇಶಕರಾಗಿ ಅರ ಸ್ವೀಕರಿಸಿರುವ ಅಜಯ್‌ಕುಮಾರ್ ಸಿಂಗ್ ಅವರು ಕಂಡಂತೆ ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿ. ಇಷ್ಟು ವರ್ಷಗಳ ಕಾಲ ಪೊಲೀಸ್ ವ್ಯವಸ್ಥೆ ದ್ದರೂ ಒಂದೇ ಒಂದು ಪಕ್ಕೂ ಗುರಿಯಾಗದಂತೆ ಕೊಂಡು ಬಂದಿದ್ದಾರೆ. ತೆಯೊಂದಿಗೆ ಹಾಸ್ಯಪ್ರಜ್ಞೆ ನ್ನೂ ಹೊಂದಿರುವ ಅಜಯ್ ರ್ ಸಿಂಗ್ ಕವಿಯಾಗಿದ್ದು ತಿಗಳ ವಲಯದಲ್ಲಿ ಸಾಕಷ್ಟು ತರನ್ನು ಹೊಂದಿರುವವರು.



ಇಂತಹ ವ್ಯಕ್ತಿತ್ವದ ಸಿಂಗ್ ಪೊಲೀಸ್ ಮಹಾ ಶಕರಾಗಿ ಜವಾಬ್ದಾರಿಯನ್ನು ತ್ತಿರುವಾಗಲೇ ರಾಜ್ಯದಲ್ಲಿ ರ ಹಾವಳಿ ಮತ್ತು ಚೆಡ್ಡಿಗಳ ಳಲೆ ಹೆಚ್ಚಾಗಿದೆ. ಅವರೆಲ್ಲರ ರಾಜಕೀಯ ನಾಯಕರ ಕ್ಕೆ ಮಣಿಯದೇ ಅವರ ವಿರುದ್ಧ ಸೂಕ್ತ ಕ್ರಮವನ್ನು ಕೊಂಡು ತಮ್ಮ ದಕ್ಷತೆ ಮತ್ತು ವೃತ್ತಿಪ್ರಜ್ಞೆಯನ್ನು ಅವರು ಮೆರೆಯಬೇಕಿದೆ.

ಇವತ್ತು ಪೊಲೀಸ್ ವ್ಯವಸ್ಥೆ ಹೇಗಾಗಿದೆ ನೋಡಿ. ಐದಾರು ವರ್ಷಗಳಿಂದ ಶ್ರೀರಾಮ ಸೇನೆ ಎಂಬ ಡಾಗಳ ಗುಂಪಿನ ನಾಯಕ ಪ್ರಮೋದ್ ಮುತಾಲಿಕ್ ದಬಂದಲ್ಲೆಲ್ಲ ಅಲ್ಪಸಂಖ್ಯಾತರ ವಿರುದ್ಧ ಕೆಂಡ ದ್ದಾನೆ. ಇತ್ತೀಚೆಗೆ ದಾವಣಗೆರೆಯಲ್ಲಿ ಒಂದು 'ಸೈನ್ಯ' ಉದ್ಘಾಟಿಸಿ ಆ 'ಸೈನ್ಯ'ದ ಸದಸ್ಯರಿಗೆ ಶಸ್ತ್ರಾಸ್ತ್ರ ತರ ನೀಡಿರುವುದರ ಫೋಟೋಗಳನ್ನು ಕರಪತ್ರದಲ್ಲಿ ಸಿದ್ದಾನೆ. ಆತನ ಮೇಲೆ ಈಗಾಗಲೇ 30 ಕ್ಕೂ ಕ್ರಿಮಿನಲ್ ಕೇಸುಗಳಿವೆ. ಆದರೆ ನಮ್ಮ ಪೊಲೀಸರು ವಿರುದ್ಧ ಕೇಸುಗಳನ್ನು ದಾಖಲಿಸಿಕೊಂಡರೇ ಹೊರತು ನನ್ನು ಬಂಧಿಸುವ ಗೋಜಿಗೆ ಹೋಗಲೇ ಇಲ್ಲ.

ಇತರೆ ಸಮುದಾಯಗಳ ವಿರುದ್ಧ ದ್ವೇಷ ಕಾರುವುದು ನಿನಡಿ ಶಿಕ್ಷಾರ್ಹ ಎಂಬುದು ಪೊಲೀಸರಿಗೆ ತ್ತಿಲ್ಲವೇ? ಯಾರ ವಿರುದ್ಧ ಒಂದು ಖಾಸಗಿ 'ಸೈನ್ಯ' ತ್ತಿದ್ದೀಯ ಎಂದು ಮುತಾಲಿಕ ವಿಚಾರಿಸುವ ಧೈರ್ಯ ಲೀಸರಿಗಿಲ್ಲವೇ?



ಇದೆಲ್ಲದರ ಪರಿಣಾಮ: ತಾಲಿಕನ ಪುಂಡರು ಹಿಂದೂ ಳೆಯರ ಮೇಲೆ ಪೈಶಾಚಿಕ ಹಲ್ಲೆ ಮಾಡುತ್ತಾರೆ. ಸಲ್ಮಾನ ಹುಡುಗರನ್ನೂ ಬಡಿ ತ್ತಾರೆ. ಯಾಕೆಂದರೆ ಅವರಿಗೆ ತ್ತು, ಸರ್ಕಾರವಾಗಲಿ, ಇಲ್ಲಿನ ಲೀಸರಾಗಲಿ ಅವರ ವಿರುದ್ಧ ವ ಕ್ರಮವನ್ನೂ ತೆಗೆದುಕೊಳ್ಳುವುದಿಲ್ಲವೆಂದು.

ಮುತಾಲಿಕನನ್ನು ಮೊನ್ನೆ ಕರ್ನಾಟಕದ ಪೊಲೀಸರು ಧಿಸಿದರು. ಆದರೆ ಆತ ಎರಡೇ ದಿನಗಳಲ್ಲಿ ಜಾಮೀನು ದು ಹೊರಬರುವಂತೆ ನೋಡಿಕೊಂಡರು. ಮಂಗ ರಿನ ಪಬ್ ಮೇಲೆ ಮುತಾಲಿಕನ ಪುಂಡರು ದಾಳಿ ಡಿದ ಹಿನ್ನೆಲೆಯಲ್ಲಿ ಆತನನ್ನು ಬಂಧಿಸಲಾಗಿತ್ತಾದರೂ ಈ ದಾಳಿ ಕುರಿತಂತೆ ಆತನ ವಿರುದ್ಧ ಪ್ರಕರಣವನ್ನು ದಾಖಲಿಸಿಕೊಳ್ಳಲಿಲ್ಲ.

ಇದಿಷ್ಟೇ ಅಲ್ಲ, ಮಾಲೆಗಾಂವ್ ಬಾಂಬ್ ಸ್ಫೋಟವಾಗಲಿ, ಹುಬ್ಬಳ್ಳಿ ನ್ಯಾಯಾಲಯದಲ್ಲಿನ ಬಾಂಬ್ ಸ್ಫೋಟವಾಗಲಿ:... ಈ ಎರಡೂ ಪ್ರಕರಣಗಳಲ್ಲಿ ಮುತಾಲಿಕನ ಕೀಚಕ ಸೇನೆಯ ಪಾತ್ರವಿರಬಹುದೇ ಎಂದು ಕರ್ನಾಟಕದ ಪೊಲೀಸರು ಆತನನ್ನು ವಿಚಾರಿಸಲಿಲ್ಲ. ವಿಪರ್ಯಾಸದ ಸಂಗತಿ ಯಾವುದೆಂದರೆ ಮಹಾರಾಷ್ಟ್ರದ ಭಯೋತ್ಪಾದನೆ ನಿಗ್ರಹ ದಳ (ಎಟಿಎಸ್) ದವರೇ ಮಂಗಳೂರಿನತನಕ ಒಂದು ಮುತಾಲಿಕನ ವಿಚಾರಣೆ ನಡೆಸಿದ್ದರೂ ನಮ್ಮ ರಾಜ್ಯದ ಪೊಲೀಸರು ಈಗಲೂ ಸುಮ್ಮನೆ ಕೂತಿದ್ದಾರೆ.

ಇದೆಲ್ಲ ಏನನ್ನು ಸೂಚಿಸುತ್ತವೆಂದರೆ ಇವತ್ತು ರಾಜ್ಯದ ಬಹಳಷ್ಟು ಪೊಲೀಸ್ ಅಧಿಕಾರಿಗಳು, ಅಧಿಕಾರದಲ್ಲಿರುವ ಹಿಂದುತ್ವವಾದಿ ಬಿಜೆಪಿಯ ಕಾರ್ಯಕರ್ತರಂತೆ ವರ್ತಿಸುತ್ತಿದ್ದಾರೆ ಎಂಬುದನ್ನು. ಈ ಬದಲಾವಣೆಯಿಂದಾಗಿಯೇ ಹುಡುಗಿಯರ ಮೇಲೆ ಚೆಡ್ಡಿ ಪುಂಡರು ದೌರ್ಜನ್ಯವೆಸಗುತ್ತಾರಲ್ಲದೆ, ಪದ್ಮಪ್ರಿಯ ತರಹದ ಅಮಾಯಕ ಮಹಿಳೆಯರು ವಿಧಿ ಇಲ್ಲದೆ ಆತ್ಮಹತ್ಯೆಗೆ ಶರಣಾಗುತ್ತಾರೆ.



ಪದ್ಮಪ್ರಿಯ ಪ್ರಕರಣದಲ್ಲಿ ಏನಾಯಿತು ಎಂಬುದು ಎಲ್ಲರಿಗೂ ಗೊತ್ತು, ಆದರೆ ಬಹಳಷ್ಟು ಜನರಿಗೆ ಗೊತ್ತಿಲ್ಲದಿರುವ ಅಂಶವೊಂದಿದೆ. ಶಾಸಕ ರಘುಪತಿ ಭಟ್ಟ ಎಂಬ ತನ್ನ ಗಂಡನೊಂದಿಗೆ ಜೀವನ ಸಾಗಿಸಲು ಇಷ್ಟಪಡದೆ ಪದ್ಮಪ್ರಿಯ ದೆಹಲಿಗೆ ಹಾರಿ ಹೋಗಿದ್ದಳು. ಆಕೆ ಎಲ್ಲಿದ್ದಾಳೆಂದು ಪತ್ತೆಹಚ್ಚಿದ ಪೊಲೀಸರು ಆಕೆಯ ಮನವೊಲಿಸಿ ವಾಪಸ್ಸು ಕರೆದುಕೊಂಡು ಬರಲು ಅಥವಾ ಆಕೆಗೆ ತೊಂದರೆ ಆಗುವುದಿಲ್ಲವೆಂದು ಭರವಸೆ ನೀಡಲು ಆಕೆಯ ಸ್ನೇಹಿತ ಅತುಲ್ ರಾವ್‌ಗೆ ಹೇಳಬಹುದಿತ್ತು ಅಥವಾ ಆಕೆಯ ಸಹೋದರರನ್ನಾದರೂ ಕಳುಹಿಸಬಹುದಿತ್ತು, ಆದರೆ ಪೊಲೀಸರು ಮಾಡಿದ್ದೇನು?

ಅತುಲ್‌ರಾವ್‌ನೊಂದಿಗೆ ಹೋಗಿದ್ದ ಪೊಲೀಸರು ಪದ್ಮಪ್ರಿಯ ಇದ್ದಲ್ಲಿಗೆ ತೆರಳುವ ಮುನ್ನವೇ, ಆಕೆಯ ಗಂಡ ರಘುಪತಿ ಭಟ್ಟ ಮತ್ತವನ ಸ್ನೇಹಿತ ಮಾಜಿ ಶಾಸಕ ಸುನಿಲ್ ಕುಮಾರ್ ಹೋಗುವಂತೆ ನೋಡಿಕೊಂಡರು. ಅದರ ಪರಿಣಾಮ ಏನಾಯಿತು? ತಾನು ಆಶಿಸಿದ್ದಂತೆ ಸ್ವತಂತ್ರವಾಗಿ ಬದುಕಲು ಇವರೆಲ್ಲ ಬಿಡುವುದಿಲ್ಲ ಎಂದು ನಿರ್ಧರಿಸಿದ ಪದ್ಮಪ್ರಿಯ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಳು.

ಇದೆಲ್ಲದರ ಅರ್ಥ ಪದ್ಮಪ್ರಿಯ ಸಾವಿಗೆ ನೇರವಾಗಿ ಕಾರಣರಾದವರು ಆಕೆಯ ಗಂಡ ರಘುಪತಿ ಭಟ್ಟ, ಆತನ ಸ್ನೇಹಿತ ಸುನಿಲ್ ಕುಮಾರ್, ಗೃಹಮಂತ್ರಿ ಆಚಾರ್ಯ ಮತ್ತು ಪೊಲೀಸ್ ಅಧಿಕಾರಿಗಳು. ಇನ್ನೊಂದು ವಿಚಿತ್ರ ಸಂಗತಿ ಯಾವುದೆಂದರೆ ಪದ್ಮಪ್ರಿಯಳ ಸಾವಿನ ನಂತರ ಆಕೆಯ ಸಹೋದರ ಸೇರಿದಂತೆ ಎಲ್ಲರೂ ಪೊಲೀಸರಿಗೆ ನೀಡಿರುವ ಹೇಳಿಕೆಗಳಲ್ಲಿ ಪದ್ಮಪ್ರಿಯ ಇದ್ದ ದೆಹಲಿ ಮನೆಗೆ ರಘುಪತಿ ಭಟ್ಟ ಮತ್ತು ಸುನಿಲ್ ಕುಮಾರ್ ಹೋಗಿದ್ದರೆಂದೂ, ಅವರಿಬ್ಬರೂ ಸುಮಾರು ಒಂದು ಗಂಟೆ ಕಾಲ ಅಲ್ಲಿ ಕಳೆದರೆಂದೂ ಹೇಳಿದ್ದಾರೆ. ಆದರೆ ಇವತ್ತಿನವರೆಗೂ ಪೊಲೀಸರು ಸುನಿಲ್ ಕುಮಾರ್‌ನಿಂದ ಯಾವುದೇ ಹೇಳಿಕೆಯನ್ನು ಪಡೆದಿಲ್ಲ, ಆತ ಮತ್ತು ಭಟ್ಟ ಅಲ್ಲಿ ಒಂದು ಗಂಟೆ ಕಾಲ ಏನು ಮಾಡಿದರು ಎಂದು ವಿಚಾರಿಸಿಲ್ಲ, ಬದಲಾಗಿ ಪದ್ಮಪ್ರಿಯಳಿಗೆ ನೆರವು ನೀಡಿದ್ದ ಅತುಲ್ ರಾವ್ ನ್ಯಾಯಾಲಯಕ್ಕೆ ಅಲೆಯುವಂತೆ ನೋಡಿಕೊಂಡಿದ್ದಾರೆ.

ಇವತ್ತು ಕರಾವಳಿ ಮಾತ್ರವಲ್ಲದೆ ರಾಜ್ಯದ ಇತರೆ ಭಾಗಗಳಲ್ಲಿ ಪೊಲೀಸರು ಅದೆಷ್ಟೋ ಅಲ್ಪಸಂಖ್ಯಾತ ಯುವಕರನ್ನು ಕಾರಣವಿಲ್ಲದೆ ಬಂಧಿಸಿ ಹಿಂಸೆ ನೀಡುತ್ತಿದ್ದಾರೆ, ಜೈಲಿಗೆ ದೂಡುತ್ತಿದ್ದಾರೆ, ಅವರ ಬದುಕು ನಾಶವಾಗುವಂತೆ ಮಾಡುತ್ತಿದ್ದಾರೆ. ಅದೇ ಹೊತ್ತಿಗೆ ಮುತಾಲಿಕ್ ಮತ್ತಾತನ ಕೀಚಕ ಪಡೆ ಯಾವ ಲಂಗೂಲಗಾಮು ಇಲ್ಲದೆ ಚರ್ಚ್‌ಗಳ ಮೇಲೆ ದಾಳಿ, ಅಲ್ಪಸಂಖ್ಯಾತರ ಮೇಲೆ ಹಲ್ಲೆ ಹುಡುಗಿಯರ ಮೇಲೆ ದೌರ್ಜನ್ಯ ನಡೆಸುತ್ತಾ ಕೇಕೆ ಹಾಕುತ್ತಿದೆ.

ಇದನ್ನೆಲ್ಲ ಸರಿಪಡಿಸಿ, ಪೊಲೀಸ್ ಇಲಾಖೆಯ ಮಾನ ಮತ್ತು ಮರ್ಯಾದೆಯನ್ನು ಅಜಯ್‌ಕುಮಾರ್ ಸಿಂಗ್ ಉಳಿಸಬೇಕಿದೆ. ಆಗ ಅವರು ನಿಜಕ್ಕೂ ರಾಜ್ಯದ ಜನರಿಗೆ ಅಗತ್ಯವಾಗಿರುವ ನೆಮ್ಮದಿ ನೀಡುತ್ತಾರೆ. ಇಲ್ಲಿಯವರೆಗೂ ತಮ್ಮ ವೃತ್ತಿ ಜೀವನದಲ್ಲಿ ರಾಜಕೀಯ ಒತ್ತಾಯಕ್ಕೆ ಮಣಿಯದಿರುವ ಅಜಯ್‌ಕುಮಾರ್ ಸಿಂಗ್ ಅವರು ತಮ್ಮ ಈ ಪ್ರವೃತ್ತಿಯನ್ನು ಮುಂದುವರೆಸಿ ತಮ್ಮ ದಕ್ಷತೆ ಮತ್ತು ಪ್ರಾಮಾಣಿಕತೆಯನ್ನು ಕಾಪಾಡಿಕೊಳ್ಳುತ್ತಾರೆಂಬ ಸಣ್ಣ ಆಶೆಯಂತೂ ನನಗಿದೆ....

* * * * * *

ಒಂದು ವಾರದ ಹಿಂದೆ ನಮ್ಮ 'ಗೈಡ್'ಗಾಗಿ ಸಂಶೋಧಕ ಎಲ್. ಬಸವರಾಜು ಅವರನ್ನು ಕುರಿತಂತೆ ಓದುಗರಿಗೆ ಮಾಹಿತಿ ನೀಡಲು ಡಾ.ಎಲ್.ಬಿ. ಅವರ ಕುರಿತು ಅಂಗಡಿಗಳಲ್ಲಿ ಪುಸ್ತಕಗಳಿವೆಯೇ ಎಂದು ನೋಡಿದಾಗ ಬೇಸರವಾಯಿತು. ನಮಗೆ ಅಂತಹ ಪುಸ್ತಗಳು ಸಿಗಲಿಲ್ಲ. "ಎಲ್. ಬಸವರಾಜು ಅವರು ಹಿರಿಯ ಸಂಶೋಧಕರು. ಬಹಳಷ್ಟು ಜನರಿಗೆ ಗುರುಗಳಾಗಿದ್ದವರು. ಅವರೀಗ 75 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದಾರೆ. ಆದರೆ ಅವರನ್ನು ಕುರಿತು ಒಂದು ಪುಟ್ಟ ಕೈಪಿಡಿಯನ್ನು ಯಾರೂ ಪ್ರಕಟಿಸಿಲ್ಲ. ಈ ಸಂದರ್ಭದಲ್ಲಿ ನಾವಾದರೂ ಅವರ ಬಗ್ಗೆ ಒಂದು ಪುಸ್ತಕ ಪ್ರಕಟಿಸಿದರೆ ಆ ಹಿರಿಯ ಜೀವಿಗೆ ನಾವು ಸೂಕ್ತ ಗೌರವ ಸಲ್ಲಿಸಿದಂತಾಗುತ್ತದೆ" ಎಂದು ಪಾರ್ವತೀಶ್ ಸೂಚಿಸಿದರು.

ಅವರ ಈ ಪ್ರಸ್ತಾಪ ಎಲ್ಲರಿಗೂ ಸೂಕ್ತವೆನಿಸಿ ಎಲ್‌ಬಿ ಅವರ ಬಗ್ಗೆ ಬರೆಯಲು ಯಾರ್‍ಯಾರನ್ನು ಕೇಳಬಹುದು ಎಂದು ಯೋಚಿಸಿ ಪುಟ್ಟ ಪಟ್ಟಿಯನ್ನು ಮಾಡಿಕೊಂಡೆವು. ಆಮೇಲೆ ಪಟ್ಟಿಯಲ್ಲಿದ್ದವರನ್ನು ಸಂಪರ್ಕಿಸಿದಾಗ ಅವರೆಲ್ಲ ಉತ್ಸಾಹದಿಂದಲೇ ಪ್ರತಿಕ್ರಿಯಿಸಿದರು. ಮಾತ್ರವಲ್ಲ ಅವರೆಲ್ಲ ತಮ್ಮ ಎಲ್ಲ ಇತರೆ ಕೆಲಸ ಕಾರ್ಯಗಳ ನಡುವೆಯೂ ಎಲ್‌ಬಿ ಕುರಿತು ಬರೆದ ಲೇಖನವನ್ನು ಕಳುಹಿಸಿಕೊಟ್ಟರು.


ಈ ಪುಸ್ತಕಕ್ಕೆ ಏನೆಂದು ಹೆಸರಿಡುವುದು ಎಂದು ಚಿಂತಿಸಿದಾಗ ಚಂದ್ರಶೇಖರ್ ನಂಗಲಿ ಅವರು ಬರೆದಿದ್ದ ಲೇಖನದ ಶೀರ್ಷಿಕೆ 'ಅಂದು ಕವಿರಾಜಮಾರ್ಗ ಇಂದು ಬಸವರಾಜಮಾರ್ಗ'ವೇ ಸ್ಫೂರ್ತಿಯಾಗಿ 'ಬಸವರಾಜ ಮಾರ್ಗ' ಎಂದೇ ಹೆಸರಿಡಲು ನಿರ್ಧರಿಸಿದೆವು.

ಈ ಪುಸ್ತಕದ ಹೊದಿಕೆಗೆ ಬಸವರಾಜು ಅವರ ಚಿತ್ರ ಕಳುಹಿಸಿದ ಛಾಯಾಗ್ರಾಹಕ ನೇತ್ರರಾಜು ಅವರಿಗೆ ಹಾಗೂ ಲೇಖನಗಳನ್ನು ಬರೆದುಕೊಟ್ಟ ಕಿ.ರಂ. ನಾಗರಾಜ, ಜೆ.ಪಿ. ಬಸವರಾಜು, ಬಂಜಗೆರೆ ಜಯಪ್ರಕಾಶ್, ಬಸವರಾಜ ಕಲ್ಗುಡಿ, ಜ.ನಾ. ತೇಜಶ್ರೀ, ರಹಮತ್ ತರೀಕೆರೆ ಮತ್ತು ಚಂದ್ರಶೇಖರ್ ನಂಗಲಿ ಅವರಿಗೆ ನನ್ನ ಮತ್ತು 'ಲಂಕೇಶ್ ಪ್ರಕಾಶನ'ದ ಧನ್ಯವಾದಗಳು. ಹಾಗೆಯೇ, ಒಂದು ವಾರದಲ್ಲಿ 'ಗೈಡ್' ಪತ್ರಿಕೆಯ ಕೆಲಸ ಮುಗಿಸಿ, ಎರಡು ದಿನಗಳಲ್ಲಿ 'ಲಂಕೇಶ್' ವಾರ ಪತ್ರಿಕೆಯನ್ನು ಮುದ್ರಣಕ್ಕೆ ಕಳುಹಿಸಿ ಚಿಕ್ಕ ಬ್ರೇಕನ್ನೂ ತೆಗೆದುಕೊಳ್ಳದೆ ಒಂದೂವರೆ ದಿನಗಳಲ್ಲಿ ಈ ಪುಸ್ತಕವನ್ನು ಸಿದ್ಧಪಡಿಸಿದ ನಮ್ಮ ಹುಡುಗ ಅರುಣ್‌ಕುಮಾರ್‌ಗೂ ಧನ್ಯವಾದಗಳು.

ಎಲ್. ಬಸವರಾಜು ಅವರ ಮೇಲಿನ ಪ್ರೀತಿ, ಅಭಿಮಾನ ಮತ್ತು ಗೌರವದ ಪ್ರತೀಕ ಈ 'ಬಸವರಾಜ ಮಾರ್ಗ' ಪುಸ್ತಕ. ಇದು ಚಿತ್ರದುರ್ಗದಲ್ಲಿ ನಡೆಯಲಿರುವ ಸಾಹಿತ್ಯ ಸಮ್ಮೇಳನದಲ್ಲಿ ಲಭ್ಯವಿದ್ದು ನಿಮ್ಮೆಲ್ಲರಿಗೂ ಇಷ್ಟವಾಗುತ್ತದೆ ಎಂಬುದು ನಮ್ಮ ಆಶೆ. ■

ಭಟ್ಟರಿಗೆ ಹೆದರಿ ಪರಾರಿಯಾದ ಗೌಡ


ಬಿಜೆಪಿ ಈಗಾಗಲೇ ಪ್ರಕಟಿಸಿದ ಒಂಬತ್ತು ಕ್ಷೇತ್ರಗಳ ಅಭ್ಯರ್ಥಿಗಳ ಪೈಕಿ ಪಕ್ಷದ ವೇದಿಕೆಯಲ್ಲಿ ಹೆಚ್ಚು ಚರ್ಚೆ, ಜಗಳಕ್ಕೆ ಕಾರಣವಾದ ಕ್ಷೇತ್ರವೆಂದರೆ ಉಡುಪಿ-ಚಿಕ್ಕಮಗಳೂರು ಕ್ಷೇತ್ರ. ಬಿಜೆಪಿಯ ರಾಜ್ಯಾಧ್ಯಕ್ಷ ಸದಾನಂದ ಗೌಡರನ್ನೇ ಈ ಕ್ಷೇತ್ರದ ಅಭ್ಯರ್ಥಿಯಾಗಿ ಕಣಕ್ಕಿಳಿಸಿದೆ. ಈ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ವಿಧಾನಸಭಾ ಕ್ಷೇತ್ರಗಳ ಪೈಕಿ ಕಾರ್ಕಳ ಹೊರತು ಪಡಿಸಿ ಬೇರೆಲ್ಲಾ ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದಿದೆ. ಒಕ್ಕಲಿಗರ ಪ್ರಾಬಲ್ಯ ಬೇರೆ ಇದೆ. ಹೀಗಾಗಿ ಸುಲಭವಾಗಿ ಗೆಲ್ಲಬಹುದು ಎಂದು ಲೆಕ್ಕಾಚಾರ ಹಾಕಿದ ಸದಾನಂದ ಗೌಡರು ಈ ಕ್ಷೇತ್ರದಲ್ಲಿ ನಾನೇ ಸ್ಪರ್ಧಿಸುತ್ತೇನೆ ಎಂದು ಪಟ್ಟು ಹಿಡಿದಿದ್ದರು. ತಮ್ಮ ಮಗನನ್ನು ಅಭ್ಯರ್ಥಿಯಾಗಿ ಮಾಡಲು ಅಡ್ಡಗಾಲು ಹಾಕುತ್ತಿದ್ದ ಗೌಡರಿಗೆ ಇಲ್ಲಿ ಅವಕಾಶ ನೀಡಬಾರದು ಎಂದು ಪ್ರತಿವಾದ ಮಂಡಿಸಿದ ಯಡ್ಡಿ ಕ್ಯಾತೆ ತೆಗೆದಿದ್ದರು. ಆದರೆ ಅವರ ಬಳಿ ಈ ಕ್ಷೇತ್ರದಿಂದ ಸ್ಪರ್ಧಿಸಲು ಹೆಸರಿಸಬಹುದಾದ ಸಮರ್ಥ ಅಭ್ಯರ್ಥಿ ಇಲ್ಲದಿದ್ದದ್ದರಿಂದ ಕೊನೆಗೆ ಸುಮ್ಮನಾಗಬೇಕಾಯಿತು. ಈ ಸಂದರ್ಭದಲ್ಲಿ ಇಬ್ಬರೂ ಬಾಯಿಗೆ ಬಂದಹಾಗೆ ಬೈದುಕೊಂಡಿದ್ದೂ ನಡೆದಿತ್ತು.



ಕಳೆದ ಬಾರಿ ಮಂಗಳೂರು ಕ್ಷೇತ್ರದಿಂದ ಸ್ಪರ್ಧಿಸಿದ್ದ ಸದಾನಂದಗೌಡರಿಗೆ ಈ ಬಾರಿ ಅಲ್ಲಿ ನಿಂತರೆ ಗೆಲ್ಲುತ್ತೇನೆ ಎಂಬ ವಿಶ್ವಾಸವಿಲ್ಲ, ಏಕೆಂದರೆ ಒಂದು ಕಾಲದಲ್ಲಿ ಅವರ ರಾಜಕೀಯ ಗುರುಗಳಾಗಿದ್ದ ಉರಿಮಜಲ ರಾಮಭಟ್ಟರು ಈಗ ಅವರ ವಿರುದ್ಧ ತಿರುಗಿಬಿದ್ದಿದ್ದಾರೆ. ಅಷ್ಟೇ ಅಲ್ಲ, ಸದಾನಂದಗೌಡರ ವಿರುದ್ಧ ಲೋಕಸಭಾ ಚುನಾವಣೆಗೆ ಸ್ಪರ್ಧಿಸುವುದಾಗಿಯೂ ಘೋಷಿಸಿದ್ದಾರೆ. ಇದಕ್ಕಾಗಿ 'ಸ್ವಾಭಿಮಾನಿ ವೇದಿಕೆ' ಎಂಬ ಸಂಘಟನೆಯನ್ನು ಹುಟ್ಟು ಹಾಕಿಕೊಂಡು ಕೆಲಸ ಮಾಡುತ್ತಿದ್ದಾರೆ. ಬಿಜೆಪಿಯಲ್ಲಿ ಅವಕಾಶ ಸಿಗದೆ ಹತಾಶರಾಗಿರುವ ಕೆಲ ಸಂಘಪರಿವಾರದ ನಾಯಕರು, ಹಿಂದೂ ಸಂಘಟನೆಗಳು ಅವರಿಗೆ ಬೆಂಬಲ ಘೋಷಿಸಿವೆ. ಈಗ ಪಕ್ಷದ ವಕ್ತಾರರಾಗಿ ಕೆಲಸ ಮಾಡುತ್ತಿರುವ ಮಾಜಿ ಸಂಸದ ಧನಂಜಯ್ ಕುಮಾರ್ ಮತ್ತು ರಾಮಭಟ್ ಒಳಗೊಳಗೆ ಸಂಬಂಧ ಹೊಂದಿದ್ದಾರೆ ಎಂಬುದೂ ಸದಾನಂದ ಗೌಡರಿಗೆ ಗೊತ್ತಿರುವ ವಿಚಾರ. ಇಬ್ಬರೂ ಸೇರಿ ತಮ್ಮನ್ನು ಸೋಲಿಸಿಯೇ ಬಿಡುತ್ತಾರೆ ಎಂದು ಗೌಡರು ಹೆದರಿ ಉಡುಪಿ-ಚಿಕ್ಕಮಗಳೂರು ಕ್ಷೇತ್ರಕ್ಕೆ ಪಲಾಯನ ಮಾಡಿದ್ದಾರೆ.

ಮಲೆನಾಡಿನ ಒಕ್ಕಲಿಗರು ಬೇರೆ ಒಕ್ಕಲಿಗರನ್ನು 'ನಮ್ಮವರು' ಎಂದು ಪರಿಗಣಿಸಿದ್ದು ಕಡಿಮೆ. ಹೀಗಾಗಿ ಚಿಕ್ಕಮಗಳೂರಿನ ಒಕ್ಕಲಿಗರು ಈ ಘಟ್ಟದ ಕೆಳಗಿನ ಸದಾನಂದ ಗೌಡನನ್ನು ಬೆಂಬಲಿಸುವ ಸಾಧ್ಯತೆ ಕಡಿಮೆ. ಕಾಂಗ್ರೆಸ್ ಒಂದಿಷ್ಟು ತಲೆ ಉಪಯೋಗಿಸಿ ಅಭ್ಯರ್ಥಿಯನ್ನು ಕಣಕ್ಕಿಳಿಸಿದಲ್ಲಿ ಹಲ್ಕುಬಿ ಸದಾನಂದರ ಮುಖದಲ್ಲಿನ ನಗು ಮಾಯವಾಗಬಹುದು.

ಸದಾನಂದಗೌಡರು ಪಲಾಯನ ಮಾಡಿದ್ದರಿಂದ ದಕ್ಷಿಣ ಕನ್ನಡ ಕ್ಷೇತ್ರದ ಟಿಕೆಟ್‌ಗಾಗಿ ಜಿದ್ದಾಜಿದ್ದಿ ನಡೆಯುತ್ತಿದೆ. ಬಾಯಿಗೆ ಬಂದಹಾಗೆ ಮಾತನಾಡುವ ಮಾಜಿ ಸಂಸದ ಧನಂಜಯಕುಮಾರ್ ಮತ್ತೆ ಕಾಲರ್ ಏರಿಸಿಕೊಂಡು ಓಡಾಡುತ್ತಿದ್ದಾರೆ. ಅವರನ್ನು ಕಣಕ್ಕಿಳಿಸುವುದು ಸದಾನಂದಗೆ ಇಷ್ಟವಿಲ್ಲದಿದ್ದರೂ ಯಡ್ಡಿ ಅವರ ಬೆಂಬಲಕ್ಕೆ ನಿಂತಿದ್ದಾರೆ. ಈ ನಡುವೆ ಕ್ಯಾಂಪ್ಕೋ ಅಧ್ಯಕ್ಷ ರಂಗಮೂರ್ತಿ, ಕಾರ್ಕಳದ ಮಾಜಿ ಶಾಸಕ ಸುನೀಲ್ ಕುಮಾರ್, ವಿಧಾನಸಭಾ ಚುನಾವಣೆಯಲ್ಲಿ ಸೋತ ಮಾಜಿ ಸಚಿವ ನಾಗರಾಜ ಶೆಟ್ಟಿಯೂ ಸಹ ಟಿಕೆಟ್‌ಗಾಗಿ ಕಸರತ್ತು ನಡೆಸಿದ್ದಾರೆ. ಗೌಡ-ಯಡ್ಡಿ ಕಿತ್ತಾಟದಲ್ಲಿ ಯಾರು ಗೆಲ್ಲುತ್ತಾರೋ ನೋಡ ಬೇಕು. ■



ಲೋಕಸಭಾ ಚುನಾವಣೆ: ಟಿಕೆಟ್ ಭರಾಟೆ ಶುರು!

ಲೋಕಸಭಾ ಚುನಾವಣೆಗಳು ಸಮೀಪಿಸುತ್ತಿರುವಂತೆಯೇ ರಾಜ್ಯದಲ್ಲಿ ಪ್ರಮುಖ ರಾಜಕೀಯ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್‌ಗಳಲ್ಲಿ ಟಿಕೆಟ್ ಮಾರಾಟ ಪ್ರಕ್ರಿಯೆ ಭರದಿಂದ ಪ್ರಾರಂಭವಾಗಿದೆ. ಹಾಲಿ, ಮಾಜಿ ಎಮ್ಮೆಲ್ಲೆಗಳು, ಎಂಪಿಗಳು, ಹೊಸದಾಗಿ ಸಂಸತ್ ಭವನ ಪ್ರವೇಶಿಸುವ ಆಕಾಂಕ್ಷಿಗಳು ದುಡ್ಡಿನ ಬ್ರೀಫ್‌ಕೇಸ್ ಹಿಡಿದುಕೊಂಡು ಟಿಕೆಟ್ ಖರೀದಿಗಾಗಿ ಪಕ್ಷದ ವರಿಷ್ಠರ ಮುಂದೆ ಕ್ಯೂ ನಿಂತಿದ್ದಾರೆ. ಇನ್ನೊಂದೆಡೆ ಮೂಲ ಪಕ್ಷದಲ್ಲಿ ಟಿಕೆಟ್ ಸಿಗುವುದು ತುಸು ಕಷ್ಟ ಎನಿಸಿದವರೆಲ್ಲಾ ಟಿಕೆಟ್ ನೀಡುವ ಪಕ್ಷಕ್ಕೆ ಹೈಜಂಪ್ ಮಾಡುವ ತಾಲೀಮು ನಡೆಸುತ್ತಿದ್ದಾರೆ. ರಾಜ್ಯದಲ್ಲಿ ಮೂರೂ ಪಕ್ಷಗಳಿಗೆ ಬರುವ ಲೋಕಸಭಾ ಚುನಾವಣೆ ಪ್ರತಿಷ್ಠೆಯ ಪ್ರಶ್ನೆಯಾಗಿದ್ದರಿಂದ ಹಿಂದೆಂದಿಗಿಂತಲೂ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಭಾರಿ ಸೆಣಸಾಟ ನಡೆಯುವಂತೆ ಕಾಣುತ್ತಿದೆ.

ಕಾಂಗ್ರೆಸ್‌ನೊಂದಿಗೆ ಚುನಾವಣಾ ಪೂರ್ವ ಹೊಂದಾಣಿಕೆಯನ್ನು ತಿರಸ್ಕರಿಸಿರುವ ಜೆಡಿಎಸ್ ಸ್ವತಂತ್ರವಾಗಿ ಕಣಕ್ಕಿಳಿಯುವ ನಿರ್ಧಾರ ಮಾಡಿದೆ. ಕನಿಷ್ಠ ಆರರಿಂದ ಎಂಟು ಸೀಟುಗಳನ್ನು ಗೆದ್ದು ಚುನಾವಣೆಯ ನಂತರ ಹೊಂದಾಣಿಕೆಗೆ ಬಾರ್ಗೇನ್ ಮಾಡುವುದು ಅದರ ತಂತ್ರವಾಗಿ ಕಾಣುತ್ತಿದೆ. ಈ ಕಾರಣಕ್ಕಾಗಿ ಅದು ಗೆಲ್ಲಬಹುದಾದ ಏಳೆಂಟು ಕ್ಷೇತ್ರಗಳಲ್ಲಿ ಮಾತ್ರವೇ ಗಮನ ಕೇಂದ್ರೀಕರಿಸಿ ಸೆಣಸಲು ನಿರ್ಧರಿಸಿದೆ.

ಬೆಂಗಳೂರು ಗ್ರಾಮಾಂತರಕ್ಕೆ ಎಚ್‌ಡಿಕೆ?

ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಖುದ್ದಾಗಿ ಬೆಂಗಳೂರು ಗ್ರಾಮಾಂತರ ಪ್ರದೇಶದಿಂದ ಕಣಕ್ಕಿಳಿಯುವ ಸೂಚನೆ ಕೊಟ್ಟಿದ್ದಾರೆ. ಕಾಂಗ್ರೆಸ್‌ನಿಂದ ಡಿ.ಕೆ.ಶಿವಕುಮಾರ್ ಅವರ ತಮ್ಮ ಡಿ.ಕೆ.ಸೂರಿ ಮತ್ತು ಸಿ.ಎಂ.ಲಿಂಗಪ್ಪ ಈ ಕ್ಷೇತ್ರದ ಟಿಕೆಟ್‌ಗಾಗಿ ಪೈಪೋಟಿ ನಡೆಸಿದ್ದಾರೆ. ಬಿಜೆಪಿಯಿಂದ ಹೇಮಚಂದ್ರ ಸಾಗರ್ ಅವರ ಹೆಸರು ಕೇಳಿಬರುತ್ತಿದೆಯಾದರೂ ಗೆಲ್ಲುವ ಅಭ್ಯರ್ಥಿಯಲ್ಲ ಎಂಬುದು ಖುದ್ದು ಬಿಜೆಪಿಗೂ ಗೊತ್ತಿರುವ ವಿಚಾರ. ಒಂದು ವೇಳೆ ಕುಮಾರಸ್ವಾಮಿಯೇನಾದರೂ ಅಂದುಕೊಂಡಂತೆ ಇಲ್ಲಿ ಕಣಕ್ಕಿಳಿದರೆ ಡಿ.ಕೆ.ಸೂರಿ ಕೂಡ ಸ್ಪರ್ಧೆಯಿಂದ ಹಿಂದ್ಸರಿದು ಬೇರೆ ಕ್ಷೇತ್ರ ನೋಡಿಕೊಳ್ಳಬಹುದು. ಏಕೆಂದರೆ ಡಿ.ಕೆ.ಸೂರಿಗೂ ಇಡೀ ಕ್ಷೇತ್ರದ ಮೇಲೆ ಉತ್ತಮ ಹಿಡಿತವಿರುವುದು ನಿಜವಾದರೂ ಕುಮಾರಸ್ವಾಮಿಯ ಜನಬೆಂಬಲದ ನಡುವೆ ಅದು ಕೆಲಸಕ್ಕೆ ಬಾರದೇ ಹೋಗಬಹುದು. ಕುಮಾರಸ್ವಾಮಿ ರಾಮನಗರದಿಂದ ಭಾರೀ ಅಂತರದಿಂದ ಎಮ್ಮೆಲ್ಲೆಯಾಗಿದ್ದಾರೆ, ಕನಕಪುರದಿಂದ ಒಮ್ಮೆ ಎಂಪಿಯಾಗಿದ್ದಾರೆ. ಸಾತನೂರಿನಲ್ಲಿ ಒಮ್ಮೆ ಡಿಕೆಶಿ ವಿರುದ್ಧ ಸೋತಿದ್ದಾರಾದರೂ ಮುಖ್ಯಮಂತ್ರಿಯಾದ ಮೇಲೆ ಅಲ್ಲಿಯೂ ಅವರಿಗೆ ಬೇಸ್ ನಿರ್ಮಾಣವಾಗಿದೆ. ಹೀಗಾಗಿ, ಕಣಕ್ಕಿಳಿದರೆ ಕುಮಾರಸ್ವಾಮಿ ಇಲ್ಲಿ ಗೆಲ್ಲುವುದು ಖಚಿತ.


ತೇಜಸ್ವಿನಿಯೂ ಇದೇ ಕ್ಷೇತ್ರದ ಟಿಕೆಟ್‌ಗಾಗಿ ಮೊದಮೊದಲು ಕಾದುಕುಳಿತಿದ್ದಳಾದರೂ ಆಕೆಯ ಮಾಜಿ ಗಾಡ್ ಫಾದರ್ ಮತ್ತು ಹಾಲಿ ಬದ್ಧ ವೈರಿ ಡಿ.ಕೆ.ಶಿವಕುಮಾರ್ ಈಗ ಕಾಂಗ್ರೆಸ್‌ನ ಕಾರ್ಯಾಧ್ಯಕ್ಷರಾಗಿರುವುದರಿಂದ ಅವಳಿಗೆ ಬೆಂಗಳೂರು ಗ್ರಾಮಾಂತರ ಮಾತ್ರವಲ್ಲ ಇಡೀ ರಾಜ್ಯದಲ್ಲಿ ಎಲ್ಲಿಯೂ ಕಾಂಗ್ರೆಸ್ ಟಿಕೆಟ್ ಸಿಗುವುದಿಲ್ಲ ಎಂಬುದು ಖಾತ್ರಿಯಾಗಿದೆ. ಆದ್ದರಿಂದಲೇ ಆಕೆ ಈಗ ಕಾಂಗ್ರೆಸ್‌ನಿಂದ ಹೈಜಂಪ್ ಮಾಡಿ ಚಿಕ್ಕಬಳ್ಳಾಪುರ ಕ್ಷೇತ್ರದಿಂದ ಬಿಜೆಪಿ ಟಿಕೆಟ್ ಪಡೆಯುವ ಪ್ರಯತ್ನ ನಡೆಸಿದ್ದಾಳೆ. ಆಕೆಯ ಹೋಮ್‌ಟೌನ್ ದೊಡ್ಡಬಳ್ಳಾಪುರ ಕೂಡ ಇದೇ ಕ್ಷೇತ್ರದಲ್ಲಿ ಬರುವುದರಿಂದ ಅನುಕೂಲವಾಗಬಹುದೆಂಬ ಲೆಕ್ಕಾಚಾರ ಆಕೆಯದ್ದು. ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಆರ್.ಎಲ್.ಜಾಲಪ್ಪ ಸ್ಪರ್ಧಿಸುವುದು ಬಹುತೇಕ ಖಚಿತವಾಗಿದೆ. ಜೆಡಿಎಸ್ ಇನ್ನೂ ಪ್ರಬಲ ಒಕ್ಕಲಿಗ ಅಭ್ಯರ್ಥಿಯೊಬ್ಬರ ತಲಾಷ್‌ನಲ್ಲಿದೆ.

ಬೆಂಗಳೂರು ಸೆಂಟ್ರಲ್, ದಕ್ಷಿಣ, ಉತ್ತರ


ಬೆಂಗಳೂರು ಸೆಂಟ್ರಲ್ ಕ್ಷೇತ್ರಕ್ಕೆ ಕಾಂಗ್ರೆಸ್‌ನಿಂದ ಸಲೀಮ್ ಮತ್ತು ಬಿಜೆಪಿಯಿಂದ ಹಾರಿಬಂದಿರುವ ಸಾಂಗ್ಲಿಯಾನರ ಹೆಸರುಗಳು ಚಾಲ್ತಿಯಲ್ಲಿವೆ. ಜೆಡಿಎಸ್‌ನಿಂದ ಜಮೀರ್ ಅಹ್ಮದ್ ಅಥವಾ ಅವರ ತಮ್ಮ ನಿಲ್ಲುವ ಸಾಧ್ಯತೆಯಿದೆ. ಬಿಜೆಪಿಯಿಂದ ಪಿ.ಸಿ.ಮೋಹನ್ ಹೆಸರು ಕೇಳಿಬರುತ್ತಿದೆ. ಈ ಕ್ಷೇತ್ರದಲ್ಲಿ ಮುಸ್ಲಿಮ್ ಮತಗಳು ನಿರ್ಣಾಯಕವಾಗಿರುವುದರಿಂದ ಕಾಂಗ್ರೆಸ್ ಮತ್ತು ಜೆಡಿಎಸ್‌ಗಳು ಇದೇ ಸಮುದಾಯದ ಅಭ್ಯರ್ಥಿಗಳನ್ನು ಕಣಕ್ಕಿಳಿಸುತ್ತಿರುವುದರಿಂದ ಅವೆರಡರಲ್ಲಿ ಯಾವುದಾದರೊಂದು ಪಕ್ಷ ವಿಜಯ ಪತಾಕೆ ಹಾರಿಸಬಹುದು. ಬೆಂಗಳೂರು ದಕ್ಷಿಣ ಕ್ಷೇತ್ರಕ್ಕೆ ಕಾಂಗ್ರೆಸ್‌ನಿಂದ ಸಂಯುಕ್ತ

■ ಕುಮಾರ್ ಬುರಡಿಕಟ್ಟಿ

ಕರ್ನಾಟಕ ಪತ್ರಿಕೆ ಮಾಜಿ ಟ್ರಸ್ಟಿಯಾಗಿದ್ದ ಯು.ಬಿ.ವೆಂಕಟೇಶ್ ಹೆಸರು ಅಂತಿಮವಾದಂತಿದೆ. ಜೆಡಿಎಸ್‌ನಿಂದ ಮುನಿರಾಜು ಪ್ರಯತ್ನಿಸಲಿದ್ದಾರೆ. ಬಿಜೆಪಿಯಿಂದ ಅನಂತಕುಮಾರ್ ಸ್ಪರ್ಧಿಸಲಿದ್ದಾರೆ. ಬೆಂಗಳೂರು ಉತ್ತರ ಕ್ಷೇತ್ರಕ್ಕೆ ಕಾಂಗ್ರೆಸ್‌ನಿಂದ ರಾಜೂಗೌಡ ಸ್ಪರ್ಧಿಸುವ ನಿರೀಕ್ಷೆಯಿದ್ದು ಬಿಜೆಪಿಯಿಂದ ಹಾಲಿ ಮಂತ್ರಿ ರಾಮಚಂದ್ರೇಗೌಡರ ಮಗ ಸಪ್ತಗಿರಿಗೌಡನ ಹೆಸರು ಕೇಳಿಬರುತ್ತಿದೆ. ಗೆಲ್ಲುವುದು ಗ್ಯಾರಂಟಿಯಿಲ್ಲವಾದ್ದರಿಂದ ಜೆಡಿಎಸ್ ಈ ಕ್ಷೇತ್ರದ ಬಗ್ಗೆ ತಲೆಕೆಡಿಸಿಕೊಂಡಿಲ್ಲ, ಕೋಲಾರಕ್ಕೆ ಕಾಂಗ್ರೆಸ್‌ನ ಎಂಪಿ ಕೆ.ಎಚ್.ಮುನಿಯಪ್ಪ ಗ್ಯಾರಂಟಿಯಾಗಿದೆ. ಬಿಜೆಪಿಯಿಂದ ವೀರಯ್ಯ ಇಳಿಯಬಹುದು. ಇಲ್ಲಿಯೂ ಜೆಡಿಎಸ್ ಇನ್ನೂ ಅಭ್ಯರ್ಥಿಯನ್ನು ಹುಡುಕಿಲ್ಲ.







ತುಮಕೂರು: ಜಗ್ಗೇಶ್‌ಗೆ ಬಿಜೆಪಿ ಕೈ

ತುಮಕೂರು ಕ್ಷೇತ್ರಕ್ಕೆ ಕಾಂಗ್ರೆಸ್‌ನಿಂದ ಮಾಜಿ ಎಂಪಿ ಬಸವರಾಜು ಅಭ್ಯರ್ಥಿಯಾಗಲಿದ್ದಾರೆ. ಬಿಜೆಪಿಯಿಂದ ಜಗ್ಗೇಶ್ ಮತ್ತು ಮಲ್ಲಿಕಾರ್ಜುನಯ್ಯನವರ ಹೆಸರು ಕೇಳಿಬರುತ್ತಿವೆಯಾದರೂ ಜಗ್ಗೇಶ್‌ಗೆ ಟಿಕೆಟ್ ಸಿಗುವುದು ಗ್ಯಾರಂಟಿಯಿಲ್ಲ, ಮೊದಲನೆಯದಾಗಿ, ಕಾಂಗ್ರೆಸ್‌ನಿಂದ ತುರುವೇಕೆರೆಯಲ್ಲಿ ಗೆದ್ದು ಆನಂತರ ಬಿಜೆಪಿಗೆ ಹಾರಿದ ಜಗ್ಗೇಶ್ ನಂತರ ನಡೆದ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸಿಕೊಂಡು ಬರಲು ಸಾಧ್ಯವಾಗಲಿಲ್ಲ, ಎರಡನೆಯದಾಗಿ, ಚುನಾವಣೆಯಲ್ಲಿ ಚೆಲ್ಲುವುದಕ್ಕೆ ಜಗ್ಗೇಶ್ ಹತ್ತಿರ ಕಾಸಿಲ್ಲ, ಮೂರನೆಯದಾಗಿ, ದುಡ್ಡಿಗಾಗಿ ತನ್ನನ್ನೇ ಬಿಜೆಪಿಗೆ ಮಾರಿಕೊಂಡ ಎಂಬ ಅಪಖ್ಯಾತಿಯೂ ಅಮರಿಗಂಟಿಕೊಂಡಿದೆ. ಹೀಗಾಗಿ ಈ ಬಾರಿ ಬಿಜೆಪಿ ಅವರಿಗೆ ಟಿಕೆಟ್ ಕೊಡುವ ನಿರೀಕ್ಷೆಯಿಲ್ಲ. ಹಾಗೇನಾದರೂ ಆದರೆ, ಈಗಾಗಲೇ ಸಿಕ್ಕಿರುವ ಕೆಎಸ್‌ಆರ್‌ಟಿಸಿ ಉಪಾಧ್ಯಕ್ಷಗಿರಿಗೆ ತೃಪ್ತಿಪಟ್ಟುಕೊಳ್ಳಬೇಕಷ್ಟೆ.

ತುಮಕೂರು ಕ್ಷೇತ್ರಕ್ಕೆ ಬಿಜೆಪಿಯಿಂದ ಕೇಳಿಬರುತ್ತಿರುವ ಇನ್ನೊಂದು ಹೆಸರು ಮಲ್ಲಿಕಾರ್ಜುನಯ್ಯ. ವಾಸ್ತವದಲ್ಲಿ ಇವರಿಗೂ ಯಡ್ಡಿಗೂ ಸಂಬಂಧ ಹಳಸಿಕೊಂಡಿದೆ. ತನ್ನ ಕಡೆಯವರನ್ನು ಕಣಕ್ಕಿಳಿಸಿ ರಾಜ್ಯ ಬಿಜೆಪಿಯ ಮೇಲೆ ಹತೋಟಿ ಸಾಧಿಸಬೇಕೆಂದು ಯಡ್ಡಿ ಪ್ರಯತ್ನಿಸುತ್ತಿದ್ದರೆ ಗೆಲ್ಲುವ ಅಭ್ಯರ್ಥಿಯನ್ನು ಕಣಕ್ಕಿಳಿಸಿ ಅತಿಹೆಚ್ಚು ಸೀಟುಗಳನ್ನು ಗೆದ್ದು ಪ್ರಧಾನಿ ಪಟ್ಟಕ್ಕೇರಬೇಕೆಂಬುದು ಅಡ್ವಾನಿ ಬಯಕೆ. ಈ ತಿಕ್ಕಾಟದಲ್ಲಿ ತುಮಕೂರು ಕ್ಷೇತ್ರದ ಟಿಕೆಟ್ ಯಾರಿಗೆ ಎಂಬುದಿನ್ನೂ ಸ್ಪಷ್ಟವಾಗಿಲ್ಲ. ಜೆಡಿಎಸ್‌ನಿಂದ ಮುದ್ದಹನುಮೇಗೌಡರ ಹೆಸರು ಕೇಳಿಬರುತ್ತಿದೆಯಾದರೂ ದೊಡ್ಡಗೌಡರ ಮಗ ಬಾಲಕೃಷ್ಣೇಗೌಡನನ್ನು ಲೋಕಸಭೆಗೆ ಇಳಿಸುವುದು ಖಚಿತವಾದರೆ ಹನುಮೇಗೌಡರು ಗೌಡರ ಕುಟುಂಬಕ್ಕಾಗಿ ಟಿಕೆಟ್ ತ್ಯಾಗ ಮಾಡಬೇಕಾಗಿ ಬರಬಹುದು.

ಮಂಡ್ಯ: ಜೆಡಿಎಸ್ ಪಾಲು?

ಮಂಡ್ಯ ಕ್ಷೇತ್ರದ ಟಿಕೆಟ್‌ಗಾಗಿ ಕಾಂಗ್ರೆಸ್‌ನಿಂದ ಶಿವರಾಮೇಗೌಡ, ಅಂಬರೀಷ್ ಮತ್ತು ಎಸ್ಸೆಂ ಕೃಷ್ಣರ ಮಗಳು ಶಾಂಭವಿ ಪೈಪೋಟಿ ನಡೆಸುತ್ತಿದ್ದಾರೆ. ಜೆಡಿಎಸ್‌ನಿಂದ ಚಲುವರಾಯಸ್ವಾಮಿ ನಿಲ್ಲುವುದು ಖಚಿತವಾದರೆ ಬಿಜೆಪಿಯಿಂದ ಡಿ.ಸಿ.ತಮ್ಮಣ್ಣರ ಹೆಸರು ಕೇಳಿಬರುತ್ತಿದೆ. ಇಡೀ ಕ್ಷೇತ್ರದಲ್ಲಿ ಜೆಡಿಎಸ್ ಬೇಸ್ ಚೆನ್ನಾಗಿದೆ. ಮದ್ದೂರಿನ ಉಪಚುನಾವಣೆಯಲ್ಲಿ ಬಿಜೆಪಿಯ ಡಿ.ಸಿ.ತಮ್ಮಣ್ಣರ ವಿರುದ್ಧ ಜೆಡಿಎಸ್‌ನ ಕಲ್ಪನಾ ಸಿದ್ಧರಾಜು ಜಯಗಳಿಸಿದ್ದು ಜೆಡಿಎಸ್‌ಗೆ ವರವಾಗಲಿದೆ. ಕಾಂಗ್ರೆಸ್‌ನ ಶಿವರಾಮೇಗೌಡರೇ ಕಣಕ್ಕಿಳಿದುಬಿಟ್ಟರೆ ಅವರ ಮತ್ತು ಜೆಡಿಎಸ್‌ನ ಚಲುವರಾಯಸ್ವಾಮಿ ನಡುವಿನ ರಾಜಕೀಯ ಗುದ್ದಾಟ ಇಡೀ ಜಿಲ್ಲೆಗೆ ವಿಸ್ತರಿಸುತ್ತದೆ. ಜೆಡಿಎಸ್‌ಗಿರುವ ಬೇಸ್‌ನ ಪರಿಣಾಮವಾಗಿ ಚಲುವರಾಯಸ್ವಾಮಿ ಗೆದ್ದು ಕಾಂಗ್ರೆಸ್ ಎರಡನೇ ಸ್ಥಾನ ಪಡೆಯುತ್ತದೆ. ಅಂತೆಯೇ ಮದ್ದೂರು ಉಪಚುನಾವಣೆಯಲ್ಲಿ ಭಾರಿ ದುಡ್ಡು ಚೆಲ್ಲಿ ಸೋತ ಬಿಜೆಪಿಯ ತಮ್ಮಣ್ಣ ಈ ಚುನಾವಣೆಯಲ್ಲಿ ಮತ್ತೊಂದಿಷ್ಟು ದುಡ್ಡು ಕಳೆದುಕೊಂಡು ಮೂರನೇ ಸ್ಥಾನಕ್ಕಿಳಿದರೆ ಅದೇ ದೊಡ್ಡದು.

ಮೈಸೂರು ಕ್ಷೇತ್ರಕ್ಕೆ ಕಾಂಗ್ರೆಸ್‌ನಿಂದ ಎಚ್.ವಿಶ್ವನಾಥ್ ಮತ್ತು ರಾಣಿ ಸತೀಶ್ ಆಕಾಂಕ್ಷಿಗಳಾಗಿದ್ದಾರೆ. ಬಿಜೆಪಿಯಿಂದ ವಿಜಯಶಂಕರ್ ಗ್ಯಾರಂಟಿ ಅಭ್ಯರ್ಥಿಯಾಗಿದ್ದರೆ ಜೆಡಿಎಸ್‌ನಿಂದ ಚಿದಾನಂದ, ಪಿರಿಯಾಪಟ್ಟಣ ಬಸವರಾಜ್ ಹೆಸರುಗಳು ಚಾಲ್ತಿಯಲ್ಲಿವೆ. ಚಾಮರಾಜನಗರದಿಂದ ಕಾಂಗ್ರೆಸ್‌ನಿಂದ ಶಿವಣ್ಣ ಜೆಡಿಎಸ್‌ನಿಂದ ಬಾಲರಾಜ್ ಮತ್ತು ಬಿಜೆಪಿಯಿಂದ ಮಹೇಂದರ್ ನಿಲ್ಲುವ ಸೂಚನೆಗಳಿವೆ.

ಹಾಸನ, ಚಿಕ್ಕಮಗಳೂರು ಹಣಾಹಣಿ

ಹಾಸನಕ್ಕೆ ಕಾಂಗ್ರೆಸ್‌ನಿಂದ ಶ್ರೀಕಂಠಯ್ಯ ಸ್ಪರ್ಧಿಸಿದರೆ ಗಂಡಸಿ ಶಿವರಾಮ್ ಬಿಜೆಪಿ ಟಿಕೆಟ್‌ಗಾಗಿ ದುಂಬಾಲು ಬಿದ್ದಿದ್ದಾರೆ. ಆದರೆ, ತಾವು ಬದುಕಿರುವ ತನಕ ಹಾಸನವನ್ನು ಬೇರೆಯವರಿಗೆ ಬಿಟ್ಟುಕೊಡಲು ಸಿದ್ಧರಿಲ್ಲದ ದೇವೇಗೌಡರು, ಇಲ್ಲಿ ಖುದ್ದು ಕಣಕ್ಕಿಳಿಯುತ್ತಿದ್ದಾರೆ. ಹಾಗೇನಾದರೂ ಆದರೆ, ಶ್ರೀಕಂಠಯ್ಯ ಮತ್ತು ಗಂಡಸಿ ಶಿವರಾಮ್ ಚುನಾವಣೆಯ ಮೊದಲೇ ಸೋಲೊಪ್ಪಿಕೊಳ್ಳಬಹುದು. ಚಿಕ್ಕಮಗಳೂರು-ಉಡುಪಿ ಕ್ಷೇತ್ರಕ್ಕೆ ಕಾಂಗ್ರೆಸ್ ಟಿಕೆಟ್‌ಗಾಗಿ ಕ್ಯೂ ನಿಂತವರ ದೊಡ್ಡ ಪಟ್ಟಿಯೇ ಇದೆ. ಡಿ.ಬಿ.ಚಂದ್ರೇಗೌಡ, ಜಯಪ್ರಕಾಶ್

▶▶▶

ಬಿಜೆಪಿ ಗೊಂದಲದ ಗೂಡು!


ಅಧಿಕಾರಕ್ಕೆ ಬಂದ ಮೇಲೆ ಒಂದೇ ಒಂದು ಕೆಲಸವನ್ನೂ ಸರಿಯಾಗಿ ಮಾಡದ ಯಡ್ಡಿ ಸರ್ಕಾರಕ್ಕೆ ರಾಜ್ಯದ ಜನತೆ ಥೂ, ಛೀ ಎಂದು ಉಗಿಯುತ್ತಿರುವಾಗಲೇ ಬಿಜೆಪಿ ನಾಯಕರು ಲೋಕಸಭಾ ಚುನಾವಣೆ ನಿಗದಿಯಾಗಿಯೇ ಬಿಟ್ಟಿದೆ ಎಂಬಂತೆ ಪಕ್ಷದ ಬಾವುಟ ಹಿಡಿದುಕೊಂಡು ಓಡಾಡುತ್ತಿದ್ದಾರೆ. ಹೇಗಾದರೂ ಮಾಡಿ ಮತ್ತೊಮ್ಮೆ ಮತದಾರರಿಗೆ ಟೋಪಿ ಹಾಕಿ, ರಾಜ್ಯದಾದ್ಯಂತ ಕೇಸರಿ ಬಾವುಟ ಹಾರಿಸಬೇಕೆಂಬ ಉತ್ಸಾಹದಲ್ಲಿದ್ದಾರೆ.

ಈಗಾಗಲೇ ಪಕ್ಷದ ಚುನಾವಣಾ ಸಮಿತಿ ಸಭೆ ನಡೆಸಿ, ಒಂಬತ್ತು ಕ್ಷೇತ್ರಗಳ ಅಭ್ಯರ್ಥಿಗಳನ್ನು ನಿಗದಿ ಮಾಡಿ, ಉಳಿದವುಗಳನ್ನು ಒಂದು ರೀತಿಯಲ್ಲಿ ಪಣಕ್ಕಿಟ್ಟಿದ್ದಾರೆ. ಈ ಸ್ಥಾನಗಳಿಗಾಗಿ ಈಗ ಪಕ್ಷದಲ್ಲಿ ಭಾರಿ ಪೈಪೋಟಿಯೇ ನಡೆದಿದ್ದು ಟಿಕೆಟ್ ಯಾರಿಗೆ ಎಂಬುದರ ಬಗ್ಗೆ ದೊಡ್ಡ ಮಟ್ಟದ ಗೊಂದಲವೇರ್ಪಟ್ಟಿದೆ.

ಸಂಸದರಾಗಿರುವ ಪಕ್ಷದ ಅಗ್ರನಾಯಕರು ತಮ್ಮ, ತಮ್ಮ ಸ್ಥಾನವನ್ನು ಮೊದಲು ಗಟ್ಟಿ ಮಾಡಿಕೊಂಡು ಮೊದಲ ಪಟ್ಟಿ ಬಿಡುಗಡೆ ಮಾಡಿದ್ದಾರೆ. ಕಳೆದ ಬಾರಿ ವಿಜಾಪುರ ಕ್ಷೇತ್ರದಿಂದ ಸ್ಪರ್ಧಿಸಿದ್ದ ಮಾಜಿ ಸಚಿವ ಬಸವರಾಜ ಯತ್ನಾಳ್‌ಗೆ ಈ ಬಾರಿ ಕೊಕ್ ನೀಡಲಾಗಿದೆ. ಈ ಕ್ಷೇತ್ರ ಮೀಸಲಾಗಿರುವುದರಿಂದ ರಮೇಶ್ ಜಿಗಜಣಗಿಗೆ ಟಿಕೆಟ್ ನೀಡಲಾಗಿದೆ. ಇನ್ನು ನಿರೀಕ್ಷೆಯಂತೆ ಬೆಂಗಳೂರು ದಕ್ಷಿಣದಿಂದ ಅನಂತಕುಮಾರ್, ಬೆಳಗಾವಿಯಿಂದ ಸುರೇಶ್ ಅಂಗಡಿ, ಬಾಗಲಕೋಟೆಯಿಂದ ಪಿ.ಸಿ.ಗದ್ದಿಗೌಡರ್, ಧಾರವಾಡದಿಂದ ಪ್ರಹ್ಲಾದ್ ಜೋಷಿ, ಉತ್ತರ ಕನ್ನಡದಿಂದ ಅನಂತಕುಮಾರ್ ಹೆಗಡೆ, ದಾವಣಗೆರೆಯಿಂದ ಜಿ.ಎಂ.ಸಿದ್ದೇಶ್ವರ, ಮೈಸೂರಿನಿಂದ ವಿಜಯಶಂಕರ್ ಕಣಕ್ಕಿಳಿಯಲಿದ್ದಾರೆ.

ಬಿ.ಎಲ್.ಶಂಕರ್, ಮನೋರಮ ಮಧ್ವರಾಜ್, ...ಶಾರಾದೇವಿ ಮುಂತಾದವರು ಆಕಾಂಕ್ಷಿಗಳಾಗಿದ್ದಾರೆ. ...ಯಿಂದ ಸದಾನಂದಗೌಡರೇ ನಿಲ್ಲುತ್ತಿದ್ದಾರೆ. ಜೆಡಿಎಸ್‌ಗೆ ...ಅಷ್ಟೇನೂ ಆಸಕ್ತಿಯಿದ್ದಂತೆ ಕಾಣುತ್ತಿಲ್ಲ.

...ಶಿವಮೊಗ್ಗ ಎಂದಿನಂತೆ ಭಾರಿ ಹಣಾಹಣಿಯ ಕ್ಷೇತ್ರ ...ಲಿದೆ. ಕಾಂಗ್ರೆಸ್ ಬಾಗಿಲು ತಟ್ಟುತ್ತಿರುವ ಮಾಜಿ ...ಮುಖ್ಯಮಂತ್ರಿ ಎಸ್.ಬಂಗಾರಪ್ಪ ...ಗ್ರೆಸ್‌ನಿಂದ ಸ್ಪರ್ಧಿಸಬಹುದು. ...ಜೆಪಿಯಿಂದ ಆಯನೂರು ...ಮಂಜುನಾಥ್ ಮತ್ತು ಯಡಿ...ಯೂರಪ್ಪನ ಮಗ ರಾಘವೇಂದ್ರ ...ಸ್ ಕ್ಯೂನಲ್ಲಿ ನಿಂತಿದ್ದರು. ...ಟಿಗೆ ತಂದೆ ಮಕ್ಕಳಿಬ್ಬರೂ ...ಪತ್ರಿಕಾಗೋಷ್ಠಿ ಮಾಡಿ ರಾಘ...ವೇಂದ್ರ ಚುನಾವಣೆಗೆ ನಿಲ್ಲುವುದಿಲ್ಲ ...ಮು ಸ್ಪಷ್ಟನೆ ನೀಡಿದ್ದಾರಾದರೂ ...ಒಳಗೇ ಪ್ರಯತ್ನ ನಡೆದೇ ಇದೆ. ಏನೇ ಆದರೂ ಬಂಗಾರಿ ಗೆಲ್ಲುವ ನಿರೀಕ್ಷೆಯೇ ಜಾಸ್ತಿ.



ಧಾರವಾಡ, ಬಳ್ಳಾರಿ: ಹಳೆ ಮುಖಗಳು

...ಧಾರವಾಡ ದಕ್ಷಿಣಕ್ಕೆ ಕಾಂಗ್ರೆಸ್ ಮತ್ತು ಜೆಡಿಎಸ್‌ಗಳು ಪ್ರಬಲ ಲಿಂಗಾಯತ ಅಭ್ಯರ್ಥಿಗಾಗಿ ಹುಡುಕಾಡುತ್ತಿದ್ದರೆ ಬಿಜೆಪಿ ಹಾಲಿ ಎಂಪಿ ಪ್ರಹ್ಲಾದ್ ಜೋಶಿಯನ್ನೇ ಕಣಕ್ಕಿಳಿಸುತ್ತಿದೆ. ಬಳ್ಳಾರಿಗೆ ಬಿಜೆಪಿಯಿಂದ ಹಾಲಿ ಆರೋಗ್ಯ ಮಂತ್ರಿ ಶ್ರೀರಾಮುಲು ಅಥವಾ ರೆಡ್ಡಿಗಳ ಬಳ್ಳಾರಿ ವ್ಯವಹಾರಗಳನ್ನು ಸಂಪೂರ್ಣವಾಗಿ ನಿಭಾಯಿಸುತ್ತಿರುವ ಫಕೀರಪ್ಪ ನಿಲ್ಲುವ ಸಾಧ್ಯತೆಯಿದೆ.

ಬೀದರ್: ಧ್ರಮ್ ಸಿಂಗ್ ಎಂಟ್ರಿ?



ಬೀದರ್ ಕ್ಷೇತ್ರಕ್ಕೆ ಕಾಂಗ್ರೆಸ್‌ನಿಂದ ಧರ್ಮಸಿಂಗ್ ಮತ್ತು ಭೀಮಣ್ಣ ಖಂಡ್ರೆ ಎಂಬ ಆನೆಗಳು ಕಣಕ್ಕಿಳಿಯಲು ಪೈಪೋಟಿ ನಡೆಸಿವೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೋತು ಸುಣ್ಣವಾಗಿರುವ ಧ್ರಮ್‌ಸಿಂಗ್ ಶಾಶ್ವತವಾಗಿ ರಾಜ್ಯ ರಾಜಕೀಯಕ್ಕೆ ವಿದಾಯ ಹೇಳಿ ಕೇಂದ್ರದಲ್ಲಿ ಠಿಕಾಣಿ ಹೂಡುವ ಯೋಜನೆಯ ಭಾಗವಾಗಿ ಟಿಕೆಟ್‌ಗಾಗಿ ಗುದ್ದಾಡುತ್ತಿದ್ದಾರೆ. ಬಿಜೆಪಿಯಿಂದ ಪ್ರಕಾಶ್ ಖಂಡ್ರೆ ಹೆಸರು ಕೇಳಿಬರುತ್ತಿದೆ. ಒಂದು ವೇಳೆ ಪ್ರಕಾಶ್ ಖಂಡ್ರೆಗೆ ಬಿಜೆಪಿ ಟಿಕೆಟ್ ಸಿಕ್ಕರೆ ಅವರ ಅಪ್ಪ ಭೀಮಣ್ಣ ಖಂಡ್ರೆಗೆ ಕಾಂಗ್ರೆಸ್ ಟಿಕೆಟ್ ನಿರಾಕರಿಸುವುದು ಸಹಜ. ಅದು ಧ್ರಮ್‌ಸಿಂಗ್‌ಗೆ ಅನುಕೂಲವಾಗಲಿದೆ.

ಒಟ್ಟಿನಲ್ಲಿ ಚುನಾವಣೆ ಇನ್ನೂ ದೂರವಿದೆಯಾದರೂ ಟಿಕೆಟ್ ಬಕರಿ ಭರಾಟೆ ಜೋರಾಗಿ ಸಾಗಿದೆ. ತನಗಿರುವ ಅಧಿಕಾರವನ್ನು ಬಳಸಿಕೊಂಡು ಹೆಚ್ಚು ಸೀಟುಗಳನ್ನು ಗೆದ್ದು ರಾಜ್ಯದ ಮೇಲಿನ ಹಿಡಿತ ತಪ್ಪದಂತೆ ನೋಡಿಕೊಳ್ಳಲು ಬಿಜೆಪಿ ಪ್ರಯತ್ನಿಸುತ್ತಿದೆ. ಕಳೆದ ವಿಧಾನಸಭಾ ಚುನಾವಣೆ ಯಲ್ಲಿ, ಉಪಚುನಾವಣೆಯಲ್ಲಿ ಹೀನಾಯವಾಗಿ ಸೋಲುಂಡ ಕಾಂಗ್ರೆಸ್ ಅರ್ಧದಷ್ಟು ಸೀಟುಗಳನ್ನಾದರೂ ಗೆದ್ದು ಮತ್ತೆ ಪುಟಿದೇಳುವುದಕ್ಕೆ ಹಾತೊರೆಯುತ್ತಿದೆ.



ಇನ್ನೊಂದೆಡೆ ಕನಿಷ್ಠ ಏಳೆಂಟು ಸೀಟುಗಳನ್ನು ಗೆದ್ದು ರಾಷ್ಟ್ರ ರಾಜಕಾರಣದಲ್ಲಿ ಚದುರಂಗದಾಟವಾಡಲು ಗೌಡರು ತಂತ್ರ ಹೆಣೆಯುತ್ತಿದ್ದಾರೆ. ಯಾವ ಪಕ್ಷಕ್ಕೆ ಎಷ್ಟು ಸೀಟುಗಳು ಸಿಗುತ್ತವೆ ಎಂಬುದು ಯಾರಿಗೆ ಟಿಕೆಟ್ ಕೊಡುತ್ತಾರೆಂಬುದರ ಮೇಲೆ, ಚುನಾವಣಾ ರಣತಂತ್ರಗಳನ್ನು ಹೇಗೆ ಹೆಣೆಯುತ್ತಾರೆಂಬುದರ ಮೇಲೆ ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಮತದಾರನ ಮನಸ್ಥಿತಿಯ ಮೇಲೆ ನಿಂತಿದೆ. ಒಂದಂತೂ ಸ್ಪಷ್ಟ. ಈಗಾಗಲೇ ರಾಜ್ಯದಲ್ಲಿ ಆರಂಭದಲ್ಲಿಯೇ ಅತಿ ಕೆಟ್ಟ ಆಡಳಿತ ನಡೆಸಿರುವ ಬಿಜೆಪಿ ಅಂದುಕೊಂಡಷ್ಟು ಸ್ಥಾನಗಳಲ್ಲಿ ಗೆಲ್ಲುವುದಿಲ್ಲ. ■

ಸೋತು ಗೆಲ್ಲ ಹೊರಟ ಯಡ್ಡಿ

...ಶಿವಮೊಗ್ಗ ಜಿಲ್ಲೆಯಿಂದ ಪುತ್ರ ರಾಘವೇಂದ್ರನನ್ನು ...ಕ್ಕಿಳಿಸಲು ಹೊರಟಿದ್ದ ಮುಖ್ಯಮಂತ್ರಿ ಯಡ್ಡಿ ಈಗ ...ಸೋತು ಗೆಲ್ಲುವ ತಂತ್ರ ರೂಪಿಸಿದ್ದಾರೆ. ಹೀಗಾಗಿ ಮಗನಿಗೆ ...ಟಿಕೆಟ್ ನೀಡಲಾಗುವುದಿಲ್ಲ ಎಂದು ತಾವೇ ಘೋಷಿಸಿ...ದ್ದಾರೆ. ಇತ್ತೀಚೆಗೆ ಮಗನೊಂದಿಗೆ ಪತ್ರಿಕಾಗೋಷ್ಠಿ ನಡೆಸಿ ...ರಾಘವೇಂದ್ರ ಸ್ಪರ್ಧಿಸುವುದಿಲ್ಲ ಎಂದು ಪ್ರಕಟಿಸಿದ್ದಾರೆ. ...ದರೆ, ಒಳಗೊಳಗೆ ಪ್ರಯತ್ನವನ್ನೇನೂ ನಿಲ್ಲಿಸಿಲ್ಲ.

...ಶಿವಮೊಗ್ಗದಿಂದ ರಾಘವೇಂದ್ರನಿಗೆ ಟಿಕೆಟ್ ನೀಡಿ ...ದು ಪಕ್ಷದ ವೇದಿಕೆಯಲ್ಲಿ ಮೊದಲು ಅಹವಾಲು ...ಮಂಡಿಸಿದ್ದೇ ಮುಖ್ಯಮಂತ್ರಿ ಯಡ್ಡಿ. ಇದಕ್ಕೆ ಪಕ್ಷದ ...ಅಧ್ಯಕ್ಷ ಸದಾನಂದಗೌಡ ಹಾಗೂ ಅನಂತು ಬಣ ...ಯಡ್ಡಿಯೊಂದಿಗೆ ಭಾರಿ ಕಿತ್ತಾಟ ನಡೆಸಿತ್ತು. ಆ ಜಗಳ ...ಸಂಘಪರಿವಾರದ ನಾಯಕರ ಅಂಗಳಕ್ಕೂ ಹೋಗಿತ್ತು. ...ಶಿವಮೊಗ್ಗದ ಬಿಜೆಪಿ ನಾಯಕರೂ ಯಡ್ಡಿಯ ...ವಿರುದ್ಧ ಬಹಿರಂಗವಾಗಿಯೇ ತಿರುಗಿ ಬಿದ್ದಿದ್ದರು. ಇದರಿಂದ ...ಸವಾಗಿಯೂ ಯಡ್ಡಿಗೆ ಹಿನ್ನಡೆಯಾಗಿತ್ತು.

...ಸುಮ್ಮನೆ ಮಗನ ಪರವಾಗಿ ತಾವು ನಿಂತು ಎಲ್ಲರ ...ವಿರೋಧ ಕಟ್ಟಿಕೊಳ್ಳುವುದಕ್ಕಿಂತ 'ಈಗ ಸೋತು ಮುಂದೆ ...ಪಕ್ಷವೇ ಆತನಿಗೆ ಟಿಕೆಟ್ ನೀಡುವಂತೆ ಮಾಡುವುದೇ ...ಲೇಸು' ಎಂದು ಲೆಕ್ಕಹಾಕಿದ ಯಡ್ಡಿ 'ಮಗನಿಗೆ ಟಿಕೆಟ್ ...ಕೊಡುವುದಿಲ್ಲ, ಆತನನ್ನು ಕಣಕ್ಕಿಳಿಸಬೇಕೆಂಬ ಆಕಾಂಕ್ಷೆ ...ನನಗಿಲ್ಲ' ಎಂದು ಪದೇಪದೇ ಹೇಳಲಾರಂಭಿಸಿದ್ದಾರೆ. ...ಇದರ ಜೊತೆಗೇ 'ರಾಜಕೀಯವಾಗಿ ಮುಂದೆ ಬರಲು ...ದೇಶದ ಪ್ರತಿಯೊಬ್ಬ ಪ್ರಜೆಗೂ ಅವಕಾಶವಿರುವಂತೆ ನನ್ನ ...ಮಗನಿಗೂ ಅವಕಾಶವಿದೆ' ಎಂದೂ ಇನ್ನೊಂದು ಸೂಚನೆ ...ಕೊಟ್ಟಿದ್ದಾರೆ.

...ಯಡ್ಡಿಯ ಈ ಹೇಳಿಕೆಯಿಂದಾಗಿ ಪ್ರಕರಣಕ್ಕೆ ತೆರೆ ...ಬಿದ್ದಿತೆಂದು ಬಿಜೆಪಿ ನಾಯಕರು ಭಾವಿಸಿದ್ದರು. ತಾವು ...ಹೇಳುವುದಕ್ಕಿಂತ ಮೊದಲೇ ಯಡ್ಡಿ ಈ ತೀರ್ಮಾನ ...ತೆಗೆದುಕೊಂಡರಲ್ಲ ಎಂದು ಸಂಘಪರಿವಾರದ ಪ್ರಮುಖರು ...ಸಮಾಧಾನಗೊಂಡಿದ್ದರು. ಆದರೆ ಮಾರನೇ ದಿನದಿಂದಲೇ ಯಡ್ಡಿ ತಮ್ಮ ಕಾರ್ಯಾಚರಣೆ ಆರಂಭಿಸಿದ್ದಾರೆ.

ಮೊದಲಿಗೆ ಯಡ್ಡಿಯ ಕಟ್ಟಾ ಬೆಂಬಲಿಗ ಸಚಿವ ಹರತಾಳು ಹಾಲಪ್ಪ "ಯುವ ರಾಜಕಾರಣಿ ರಾಘವೇಂದ್ರ ಶಿವಮೊಗ್ಗ ಕ್ಷೇತ್ರದಿಂದ ಸ್ಪರ್ಧಿಸಲು ಅರ್ಹರು. ಮುಖ್ಯಮಂತ್ರಿಯ ಮಗ ಎಂಬ ಕಾರಣದಿಂದ ಅವರಿಗೆ ಅನ್ಯಾಯ ಮಾಡಬಾರದು. ಪಕ್ಷ ಅವರಿಗೇ ಟಿಕೆಟ್ ನೀಡಬೇಕು" ಎಂದು ಬಹಿರಂಗವಾಗಿ ಒತ್ತಾಯಿಸಿದರು. ಇದರ ಬೆನ್ನಲ್ಲೇ ವಿಧಾನ ಪರಿಷತ್ ಸದಸ್ಯೆ ಭಾರತಿ ಶೆಟ್ಟಿ, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ದಿವಾಕರ್, ಸಾಗರ ಶಾಸಕ ಬೇಳೂರು ಗೋಪಾಲಕೃಷ್ಣ, ಶಾಸಕ ಕುಮಾರಸ್ವಾಮಿ ಮತ್ತಿತರರು 'ರಾಘವೇಂದ್ರ ಭಜನೆ' ಶುರುವಿಟ್ಟುಕೊಂಡರು. ಶಿಕಾರಿಪುರ ತಾಲೂಕು ಬಿಜೆಪಿ ಘಟಕದ ನಾಯಕರು ದಂಡೆತ್ತಿ ಶಿವಮೊಗ್ಗಕ್ಕೆ ಬಂದು ಜಿಲ್ಲಾಧ್ಯಕ್ಷರಿಗೆ ಮನವಿ ಸಲ್ಲಿಸಿದರು.


ರಾಘವೇಂದ್ರನಿಗೆ ಟಿಕೆಟ್ ನೀಡಿದರೆ ವಂಶಪಾರಂಪರ್ಯ ರಾಜಕೀಯವನ್ನು ಪಕ್ಷದಲ್ಲಿ ಹೊಸದಾಗಿಯೇನೂ ಆರಂಭಿಸಿದಂತಾಗುವುದಿಲ್ಲ. ಈಗಾಗಲೇ ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಮತ್ತು ನಮ್ಮ ರಾಜ್ಯದಲ್ಲಿಯೂ ಬಿಜೆಪಿ ಈ ರೀತಿಯ ರಾಜಕೀಯ ಮಾಡಿದೆ ಎಂದು ಪಟ್ಟಿ ಮಾಡಿ ರಾಘವೇಂದ್ರನ ಬೆಂಬಲಿಗರು ತೋರಿಸಲಾರಂಭಿಸಿದರು. ಶಿವಮೊಗ್ಗ ಜಿಲ್ಲೆಯ ಪ್ರತಿ ತಾಲೂಕು ಘಟಕಗಳು ರಾಘವೇಂದ್ರನಿಗೇ ಟಿಕೆಟ್ ನೀಡಿ ಎಂಬ ನಿರ್ಣಯ ತೆಗೆದುಕೊಂಡು ಪಕ್ಷದ ಹೈಕಮಾಂಡ್‌ಗೆ ಕಳುಹಿಸಲಾರಂಭಿಸಿದವು. ಯಡ್ಡಿ ಅಭಿಮಾನಿಗಳ ಬಳಗ, ವಿವಿಧ ಜಾತಿ ಸಂಘಟನೆಗಳು, ಬಿಜೆಪಿ ಪರ ಸಂಘ ಸಂಸ್ಥೆಗಳು ರಾಘವೇಂದ್ರ ಶಿವಮೊಗ್ಗ ಕಂಡಿರುವ ಮಹಾನ್ ರಾಜಕೀಯ ನಾಯಕ ಎಂಬಂತೆ ಹೇಳಿಕೆಗಳನ್ನು ನೀಡಲಾರಂಭಿಸಿವೆ. 'ಬಂ' ಮಣಿಸಲು ರಾಘವೇಂದ್ರನೇ ಸಮರ್ಥ ಎಂಬ ಅಭಿಪ್ರಾಯವನ್ನು ಪಕ್ಷದ ವಲಯದಲ್ಲಿ ಮೂಡಿಸುವ ಕೆಲಸ ನಡೆದಿದೆ. ಇದೆಲ್ಲಾ ಯಡ್ಡಿ ಕುಟುಂಬದ ಸೂಚನೆಯಂತೆಯೇ ನಡೆಯುತ್ತಿದೆ ಎಂದು ಇಲ್ಲಿ ಬಿಡಿಸಿ ಹೇಳಬೇಕಾಗಿಯೇನೂ ಇಲ್ಲ.

ಈ ನಡುವೆ ಯಡಿಯೂರಪ್ಪ ಯಾವ ಯಾವ ರಾಜ್ಯದ ಮುಖ್ಯಮಂತ್ರಿಗಳ ಮಕ್ಕಳು ಎಂಪಿಗಳಾಗಿದ್ದಾರೆ ಎಂಬ ಪಟ್ಟಿಯನ್ನು ಜಿಲ್ಲಾ ಬಿಜೆಪಿ ನಾಯಕರಿಗೆ ನೀಡಿ ಬಂದಿದ್ದಾರೆ!

ಶಿವಮೊಗ್ಗ ಜಿಲ್ಲೆಯ ಹೆಚ್ಚಿನ ಶಾಸಕರು, ಸಚಿವರು (ಯಡ್ಡಿ ಮತ್ತು ಹಾಲಪ್ಪ ರಾಘವೇಂದ್ರನನ್ನು ಬೆಂಬಲಿಸಿದರೆ, ಈಶ್ವರಪ್ಪ ಮಾತ್ರ ವಿರೋಧಿಸಲಿದ್ದಾರೆ) ರಾಘವೇಂದ್ರನ ಭಜನೆ ಆರಂಭಿಸಿರುವುದರಿಂದ ಆತನಿಗೇ ಟಿಕೆಟ್ ನೀಡುವುದು ಪಕ್ಷಕ್ಕೆ ಅನಿವಾರ್ಯವಾಗಲಿದೆ ಎಂಬ ಮಾತು ಪಕ್ಷದ ವಲಯದಲ್ಲಿ ಈಗಾಗಲೇ ಕೇಳಿಬರಲಾರಂಭಿಸಿದೆ. ಏಕೆಂದರೆ ರಾಘವೇಂದ್ರ ಅಭ್ಯರ್ಥಿಯಾಗುವುದನ್ನು ವಿರೋಧಿಸುತ್ತಿರುವ ಹೆಚ್ಚಿನವರು ಜನಪ್ರತಿನಿಧಿಗಳಲ್ಲ, ಅಲ್ಲದೆ ಪಕ್ಷದಲ್ಲಿಯೂ ಹೆಸರುಳ್ಳ ನಾಯಕರಲ್ಲ.



'ಇವರೇ ಅಭ್ಯರ್ಥಿಯಾಗಬೇಕೆಂದು ಬಹಿರಂಗ ಹೇಳಿಕೆ ನೀಡುವುದು, ನಿಯೋಗ ತಂದು ಒತ್ತಡ ಹೇರುವುದು ಬಿಜೆಪಿ ಸಂಸ್ಕೃತಿಯಲ್ಲ' ಎಂದು ಜಿಲ್ಲೆಯ ಕೆಲ ಬಿಜೆಪಿ ನಾಯಕರು ಸಿಡಿಮಿಡಿಗುಟ್ಟುತ್ತಾ ಓಡಾಡುತ್ತಿದ್ದಾರಾದರೂ ಯಡ್ಡಿ ಪಟಾಲಂ ಅದನ್ನು ಕೇರ್ ಮಾಡಿಲ್ಲ. "ಯಡ್ಡಿ ಪಟಾಲಂ ಹೇಳುವಂತೆ ಕಾರ್ಯಕರ್ತರ ಅಭಿಪ್ರಾಯ ಕೇಳಿಯೇ ಟಿಕೆಟ್ ನೀಡುವುದೆಂದಾಗಿದ್ದರೆ ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಹಾಲಪ್ಪ ಗೋಪಾಲ ಕೃಷ್ಣಗೇ ಟಿಕೆಟ್ ನೀಡುವಂತಿರಲಿಲ್ಲ" ಎಂದು ಟಿಕೆಟ್ ಆಕಾಂಕ್ಷಿ ಆಯನೂರು ಮಂಜುನಾಥ್ ಓಡಾಡುತ್ತಿದ್ದಾರೆ. ಯಡ್ಡಿಯ ತಂತ್ರ ಗೆಲ್ಲುತ್ತೋ, ಅನಂತೂ, ಈಶ್ವರಿ, ಹಲ್ಲುಖಿ ಗೌಡರ ಬಲ ಗೆಲ್ಲುತ್ತೋ ಕಾದುನೋಡಬೇಕು. ■



ದೆಹಲಿ ಗದ್ದುಗೆಯತ್ತ ಕುಮಾರಣ್ಣನ ಚಿತ್ತ!

ರಾಜ್ಯ ರಾಜಕೀಯದಲ್ಲಿ ಸಾಕಷ್ಟು ಪಳಗಿರುವ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಈಗ ದೆಹಲಿ ಗದ್ದುಗೆಯತ್ತ ಚಿತ್ತಹರಿಸಿದ್ದಾರೆ. ರಾಜ್ಯದಲ್ಲಿ ಇನ್ನೂ ಐದು ವರ್ಷಗಳ ಕಾಲ ಬಿಜೆಪಿಯೇ ಭದ್ರವಾಗಿ ಅಧಿಕಾರದಲ್ಲಿರುತ್ತದೆಯಾದ್ದರಿಂದ ಇಲ್ಲಿ ರಾಜಕೀಯ ಆಟ ಆಡುವುದಕ್ಕೆ ಅವರಿಗೆ ಸಾಕಷ್ಟು ಅವಕಾಶಗಳಿಲ್ಲ. ಐದು ವರ್ಷಗಳಷ್ಟು ಸುದೀರ್ಘ ಕಾಲ ರಾಜಕೀಯ ಆಟವಿಲ್ಲದೇ ಸುಮ್ಮನೇ ಕುಳಿತುಕೊಳ್ಳುವ ಜಾಯಮಾನ ಅವರ ಕುಟುಂಬದ್ದಲ್ಲ. ಇದೇ ಸಮಯದಲ್ಲಿ ಲೋಕಸಭಾ ಚುನಾವಣೆ ಎದುರಾಗಿರುವುದರಿಂದ ಅದನ್ನೇ ಬಳಸಿಕೊಂಡು ದೆಹಲಿಯಲ್ಲಿ ಆಟವಾಡಲು ಸಿದ್ಧವಾಗುತ್ತಿದ್ದಾರೆ. ಅಂತಹ ಸಾಧ್ಯತೆಯನ್ನು ತಳ್ಳಿಹಾಕದ ಕುಮಾರಸ್ವಾಮಿ "ಪಕ್ಷ ಬಯಸಿದರೆ ನಾನು ಮಂಡ್ಯ ಅಥವಾ ಕನಕಪುರದಿಂದ ಲೋಕಸಭೆಗೆ ಸ್ಪರ್ಧಿಸಲು ಸಿದ್ಧ" ಎಂದು ಮೊನ್ನೆ ಘೋಷಿಸಿದ್ದಾರೆ.


ರಾಜ್ಯದ ಬಹುತೇಕ ಎಲ್ಲಾ ಕ್ಷೇತ್ರಗಳಲ್ಲೂ ಜೆಡಿಎಸ್ ಅಭ್ಯರ್ಥಿಗಳನ್ನು ನಿಲ್ಲಿಸುತ್ತಾರಾದರೂ ಎಲ್ಲಾ ಸೀಟುಗಳನ್ನು ಗೆಲ್ಲುತ್ತೇವೆಂಬ ಹುಂಬುತನ ದೇವೇಗೌಡರಿಗಾಗಲೀ, ಕುಮಾರಸ್ವಾಮಿಗಾಗಲೀ ಇದ್ದಂತಿಲ್ಲ. ಎಷ್ಟೇ ಕಷ್ಟಪಟ್ಟರೂ ಸೋಲೇ ಸೋಲುತ್ತೇವೆಂದು ಗೊತ್ತಿರುವ ಕಡೆ ಯಾರನ್ನೋ ಒಬ್ಬರನ್ನು ಕಣಕ್ಕಿಳಿಸುವುದು, ಗೆಲ್ಲಲು ಸಾಧ್ಯವಿರುವ ಕಡೆಯೇ ಹೆಚ್ಚು ಗಮನಹರಿಸಿ ಸೆಣಸಾಡುವುದು ಅವರ ರಣತಂತ್ರ. ಕನಿಷ್ಠವೆಂದರೂ ಆರೆಂಟು ಸೀಟುಗಳನ್ನು ಗೆದ್ದೇ ಗೆಲ್ಲಬೇಕೆಂಬ ಹಠತೊಟ್ಟಂತಿದೆ ಗೌಡರ ಕುಟುಂಬ. ಕೇಂದ್ರದಲ್ಲಿ ಒಂದೇ ಪಕ್ಷ ನಿಚ್ಚಳ ಬಹುಮತ ಪಡೆಯುವ ಕಾಲ ಹೊರಟುಹೋಗಿದೆಯೆಂಬುದು ಖುದ್ದು ಗೌಡರಿಗೆ ಗೊತ್ತಿರುವ ವಿಚಾರ. ಒಂದು ವೇಳೆ ಜೆಡಿಎಸ್ ಏಳೆಂಟು ಸೀಟುಗಳನ್ನು ಗೆದ್ದರೆ ಗೌಡರು ಬಾರ್ಗೇನ್ ಮಾಡುವುದಕ್ಕೆ, ಕುಮಾರಸ್ವಾಮಿಯನ್ನು ಕೇಂದ್ರ ಕ್ಯಾಬಿನೆಟ್ ಮಿನಿಸ್ಟರ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದೇ ಜೆಡಿಎಸ್‌ಗಿರುವ ಮುಂದಿನ ಗುರಿ.

ಇನ್ನೂ ಸರಳವಾಗಿ ಹೇಳಬೇಕೆಂದರೆ, ಒಂದು ವೇಳೆ ಚುನಾವಣೆಯಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದರೆ, ಜೆಡಿಎಸ್ ರಾಜ್ಯದಲ್ಲಿ ಏಳೆಂಟು ಸೀಟುಗಳನ್ನು ಗೆದ್ದರೆ ಕುಮಾರಣ್ಣ ಕೇಂದ್ರ ಮಂತ್ರಿಯಾಗುವುದು ಶತಸಿದ್ಧ. ಹಿಂದೊಮ್ಮೆ ಲೋಕಸಭಾ ಸದಸ್ಯರಾಗಿದ್ದ ಅನುಭವವೂ ಇವರಿಗಿರುವುದು ವರವಾಗಿದೆ. ಹೀಗಾಗಿ ಎರಡನೇ ಬಾರಿ ಚುನಾಯಿತರಾದ, ಮಾಜಿ ಪ್ರಧಾನಿಯ ಮಗ ಮತ್ತು ಮಾಜಿ ಮುಖ್ಯಮಂತ್ರಿ ಎಂಬ ಈ ಮೂರು ಅಂಶಗಳ ಆಧಾರದ ಮೇಲೆ ಕುಮಾರಸ್ವಾಮಿ ಕ್ಯಾಬಿನೆಟ್ ಸಚಿವ ಸ್ಥಾನ ಗಿಟ್ಟಿಸುವುದು ಗ್ಯಾರಂಟಿ. ಇಂತಹ ಒಂದು ಅವಕಾಶವನ್ನು ಒಬ್ಬ ಚತುರ ರಾಜಕಾರಣಿಯಾಗಿ ಕುಮಾರಸ್ವಾಮಿ ಬಳಸಿಕೊಳ್ಳಲು ಹೊಂಚುಹಾಕುತ್ತಿದ್ದಾರೆ. ಈ ಕಾರಣಕ್ಕೇನೆ ಅವರು ಎಂಪಿ ಎಲೆಕ್ಷನ್‌ಗೆ ನಿಲ್ಲಲು ಸಿದ್ಧ ಎಂಬ ಹೇಳಿಕೆ ಕೊಟ್ಟಿದ್ದು.


ರಾಜ್ಯ ರಾಜಕೀಯವನ್ನು ಅವರ ಪತ್ನಿ ಅನಿತಾ ಮೂಲಕ ನಿಯಂತ್ರಿಸುವುದು, ಅದೇ ಹೊತ್ತಿನಲ್ಲಿ ಕೇಂದ್ರದಲ್ಲಿ ಮಂತ್ರಿಯಾಗಿ ರಾಜ್ಯಭಾರ ಮಾಡುವುದು ಅವರ ಲೆಕ್ಕಾಚಾರ. ದೇವೇಗೌಡರು ಪ್ರಧಾನಮಂತ್ರಿಯಾಗಿದ್ದಾಗ ದೆಹಲಿಯಲ್ಲಿದ್ದೇ ರಿಮೋಟ್ ಕಂಟ್ರೋಲ್‌ನಂತೆ ರಾಜ್ಯ ಜನತಾದಳವನ್ನು ನಿಯಂತ್ರಿಸಿದ್ದರು. ಈಗ ಅವರ ಹೆಜ್ಜೆಯನ್ನೇ ಕುಮಾರಸ್ವಾಮಿ ಅನುಸರಿಸಲು ಹೊರಟಿದ್ದಾರೆ.

ಅದೂಅಲ್ಲದೇ ಕುಮಾರಸ್ವಾಮಿ ದೇವೇಗೌಡರಷ್ಟೇ ಚತುರ ರಾಜಕಾರಣಿ. ಅಷ್ಟಂತೆಯೇ ಮಹತ್ವಾಕಾಂಕ್ಷೆಯುಳ್ಳ ಅವರು ಅತ್ಯಂತ ಅಲ್ಪಾವಧಿಯಲ್ಲೇ ತನ್ನ ತಂತ್ರೋಪಾಯಗಳಿಂದ ರಾಜಕೀಯದಲ್ಲಿ ಒಂದೊಂದೇ ಮೆಟ್ಟಿಲನ್ನು ಏರಿದ್ದಾರೆ. ಈಗ ಅವರು ದೆಹಲಿ ಗದ್ದುಗೆಯೆಡೆಗೆ ಕಣ್ಣಿಟ್ಟು ಹೊರಟಿರುವುದು ಅದರ ಮುಂದುವರಿದ ಭಾಗ.


■ ಸದಾಶಿವ ಶೆಣೈ



ಮೈತ್ರಾದೇವಿ ಶವ ಹೊರತೆಗೆದ ಬಗ್ಗೆ ಶಿವಕುಮಾರ್ ಹಾಗೂ ಪಾರ್ವತಮ್ಮ ಹೇಳಿಕೆ




ಮೈತ್ರಾದೇವಿ ಶವ ಹೊರತೆಗೆದ ಇನ್ಸ್‌ಪೆಕ್ಟರ್ ಶಿವಕುಮಾರ್ ಬಗ್ಗೆ ಪೊಲೀಸ್ ವರದಿ



- Faecal matter purged out.

True copy

ಮೈತ್ರಾದೇವಿಗೆ ಮಲಮೂತ್ರ ವಿಸರ್ಜನೆಯಾಗಿದ್ದ ಬಗ್ಗೆ ವೈದ್ಯರ ವರದಿ



ಮೈತ್ರಾದೇವಿಗೆ ಮಲಮೂತ್ರ ವಿಸರ್ಜನೆಯಾಗಿರಲಿಲ್ಲವೆನ್ನುವ ಪೊಲೀಸ್ ವರದಿ



ಮೈತ್ರಾದೇವಿ ಸಾವಿನ ಮರುತನಿಖೆ

ಗೋರಿಯಿಂದ ಎದ್ದುಬಂದ ಪತ್ನಿ

ಮೈತ್ರಾದೇವಿ ಮತ್ತೆ ಗೋರಿಯಿಂದ ಎದ್ದು ಬಂದಿದ್ದಾರೆ. ಹಾಲಿ ಕರ್ನಾಟಕದ ಮುಖ್ಯಮಂತ್ರಿ ಯಡಿಯೂರಪ್ಪನವರ ಮೊದಲನೇ ಹೆಂಡತಿಯಾಗಿದ್ದ ಮೈತ್ರಾದೇವಿ 2004ರ ಅಕ್ಟೋಬರ್ 16ರಂದು ಅನುಮಾನಸ್ಪದವಾಗಿ ಸತ್ತಿದ್ದರು. ಆದರೆ ಅದೊಂದು ಆಕಸ್ಮಿಕ ಸಾವೆಂದು ಬಿಂಬಿಸಿ ಯಡ್ಡಿ ಫ್ಯಾಮಿಲಿಯ ಜನ, ಮನೆ ಕೆಲಸದವರು ಹಾಗೂ of course ಶಿವಮೊಗ್ಗ ಪೊಲೀಸರು ತಿಪ್ಪೇ ಸಾರಿಸಿ ಮುಚ್ಚಿಹಾಕಿದ್ದರು.

ಆದರೀಗ ಶಿವಮೊಗ್ಗ ಪತ್ರಕರ್ತ ಹಾಗೂ ವಕೀಲ ಶೇಷಾದ್ರಿ ಈ ಅಸಹಜ ಸಾವಿನ ವಿಚಾರವನ್ನು ಕೋರ್ಟಿಗೆ ಒಯ್ದಿದ್ದಾರೆ. ಮೇಲ್ನೋಟಕ್ಕೆ ಶೇಷಾದ್ರಿ ಎತ್ತಿರುವ ಪ್ರಶ್ನೆಗಳಲ್ಲಿ ಹುರುಳಿದೆ ಎನಿಸಿದ್ದರಿಂದ ಕೋರ್ಟ್ criminal procedure code 156 (111) ಪ್ರಕಾರ ತನಿಖೆಗೆ ಆದೇಶ ನೀಡಿದೆ.

■ ಪಾರ್ವತೀಶ್

ಇದೊಂದೇ ಸುದ್ದಿ ಮೈತ್ರಾದೇವಿ ಸಾವಿನ ಸೀನ್‌ನಲ್ಲಿ ಕಾಣಿಸಿಕೊಂಡಿದ್ದವರಲ್ಲಿ ನಡುಕ ಹುಟ್ಟಿಸಿಬಿಟ್ಟಿದೆ.

ಯಡ್ಡಿ, ಮಗ ವಿಜಯೇಂದ್ರ, ರಾಘವೇಂದ್ರ, ಮಗಳು ಅರುಣಾ ದೇವಿ, ಮನೆ ಕೆಲಸದಾಳು ಪಾರ್ವತಮ್ಮ, ಯಡ್ಡಿಯ ನರ್ಸಿಂಗ್ ಕಾಲೇಜಿನ ಡ್ರೈವರ್ ಶಿವಕುಮಾರ್, ನೌಕರ ಮಂಜುನಾಥ, ಪೋಸ್ಟ್‌ಮಾರ್ಟಂ ಮಾಡಿದ್ದ ಡಾ. ರುದ್ರಮೂರ್ತಪ್ಪ ಮೆಗ್ಗಾನ್ ಆಸ್ಪತ್ರೆಯ ಲ್ಯಾಬ್ ಟೆಕ್ನಿಷಿಯನ್ ರವಿ ಇವರೆಲ್ಲಾ ಈಗ ಕ್ಯೂ ನಿಂತು ಪೊಲೀಸ್ ತನಿಖೆಗೆ ತಲೆ ಕೊಡಬೇಕಿದೆ. ಇದಿಷ್ಟೇ ಅಲ್ಲ ಸ್ವತಃ ಆಗಿನ ದೊಡ್ಡಪೇಟೆ ಸಬ್ ಇನ್ಸ್‌ಪೆಕ್ಟರ್ ಆಗಿದ್ದ ಕೃಷ್ಣಮೂರ್ತಿಯ ತಲೆ ಮೇಲೂ ನ್ಯಾಯದ ಕತ್ತಿ ತೂಗಾಡಲು ಶುರು ಮಾಡಿದೆ.

ಈ ಅನುಮಾನದ ಸಾವಿನ ತನಿಖೆಯ ಪ್ರಕ್ರಿಯೆಯಲ್ಲಿ ಕಾಣಿಸಿಕೊಳ್ಳಲೇಬೇಕಾದ ಇನ್ನೋರ್ವ ಪೊಲೀಸ್ ಅಧಿಕಾರಿಯೂ ಇದ್ದಾನೆ. ಆತ ಶಿವಕುಮಾರ್!

ಮೈತ್ರಾದೇವಿ ಸತ್ತಾಗ ಶಿವಮೊಗ್ಗದ ಕೋಟೆ ಠಾಣೆಯ ಇನ್ಸ್‌ಪೆಕ್ಟರ್ ಆಗಿದ್ದಾತ. ಈಗ ಬೆಂಗಳೂರಿನ ಚಿಕ್ಕಪೇಟೆಯಲ್ಲಿ ಇನ್ಸ್‌ಪೆಕ್ಟರ್ ಆಗಿದ್ದಾನೆ.

ಇವರೆಲ್ಲರನ್ನೂ ಸಾಲಾಗಿ ನಿಲ್ಲಿಸಿ ಸರಿಯಾದ ತನಿಖೆ ಮಾಡಿದಲ್ಲಿ ಖಂಡಿತವಾಗಿಯೂ ಮೈತ್ರಾದೇವಿಯ ಅಂತ್ಯ ಹೇಗಾಯಿತೆಂದು ಗೊತ್ತಾಗುತ್ತದೆ.

ಪೊಲೀಸರ ಮಹಜರ್ ವರದಿ, FIR, ಪ್ರತ್ಯಕ್ಷದರ್ಶಿಗಳ ಹೇಳಿಕೆಗಳಂತೂ ಬರೀ ವಿರೋಧಾಭಾಸಗಳಿಂದಲೇ ತುಂಬಿ ಹೋಗಿದೆ. ಮೈತ್ರಾದೇವಿಯ ಅಸಹಜ ಸಾವಿನ ಬಗ್ಗೆ 2004ರ ಅಕ್ಟೋಬರ್ 27ರ ಸಂಚಿಕೆಯಲ್ಲೇ ಆಗ 'ಲಂಕೇಶ್ ಪತ್ರಿಕೆ' 'ಸಂಶಯದ ಸುಳಿ' ಎಂಬ ಮುಖಪುಟದ ತನಿಖಾ ವರದಿ ಪ್ರಕಟಿಸಿತ್ತು. ಈಗ ಲಭ್ಯವಿರುವ ಇನ್ನಷ್ಟು ಅಧಿಕೃತ ದಾಖಲೆಗಳು ಮೈತ್ರಾದೇವಿ ನೀರಿನಲ್ಲಿ ಮುಳುಗಿ ಸತ್ತರೆಂಬ ಬದಲಾಗಿ ಬೇರೆಯೇ ದಿಕ್ಕಿನತ್ತ ಕೈ ತೋರುತ್ತಿದೆ.

ಹಾಗೆ ಅನುಮಾನ ಹುಟ್ಟಿಸುವ ಕೆಲ ಸಂಗತಿಗಳು ಹೀಗಿವೆ.

ಅನುಮಾನ 1:

ಫೀಕಲ್ ಮ್ಯಾಟರ್ (Faecal matter)

ಯಾರೇ ವ್ಯಕ್ತಿ ನೀರಿನಲ್ಲಿ ಮುಳುಗಿ ಸಾಯುವ ಸನ್ನಿವೇಶದಲ್ಲಿ ಭೀತಿ ಹಾಗೂ ಅಸಹಾಯಕತೆಗಳಿಂದ ಮತ್ತು ಹತೋಟಿ ಮೀರಿ ಮಲ-ಮೂತ್ರ ವಿಸರ್ಜನೆ ಮಾಡಿಕೊಳ್ಳುತ್ತಾರೆ. 16.10.04ರಂದು ಮಧ್ಯಾಹ್ನ 12.30ಕ್ಕೆ ಮೈತ್ರಾದೇವಿಯ ಶವಪರೀಕ್ಷೆ ನಡೆಸಿದ ಡಾ. ರುದ್ರಮೂರ್ತಪ್ಪ ತನ್ನ ಪೋಸ್ಟ್‌ಮಾರ್ಟಂ ರಿಪೋರ್ಟ್‌ನಲ್ಲಿ 'ಮಲ-ಮೂತ್ರ ವಿಸರ್ಜನೆ ಆಗಿತ್ತು' (purges out) ಎಂದು ಹೇಳಿದ್ದಾರೆ.

ಆದರೆ ದೊಡ್ಡಪೇಟೆ ಸಬ್‌ಇನ್ಸ್‌ಪೆಕ್ಟರ್ ಕೃಷ್ಣಮೂರ್ತಿ ಅದೇ ದಿನಾಂಕ ಅಕ್ಟೋಬರ್ 16ರಂದಿನ ತನ್ನ ತನಿಖಾ ವರದಿಯ ಮೊದಲ ಪುಟದ ಕೊನೆಯ ಸಾಲಿನಲ್ಲಿ ಮಲ-ಮೂರ್ತ ವಿಸರ್ಜನೆ ಆಗಿಲ್ಲ. (ಪೊಲೀಸ್ ಭಾಷೆ- ಮರ್ಮ ಸ್ಥಾನ-ಗುದ ಸ್ಥಾನ ಸಾಬೀತು ಇರುತ್ತದೆ) ಎಂದು ಬರೆದುಕೊಂಡಿದ್ದಾನೆ.


ಹಾಗಾದರೆ ಇವೆರಡರಲ್ಲಿ ಸತ್ಯ ಯಾವುದು?

ಮೈತ್ರಾದೇವಿ ಅಸಲಿಗೆ ನೀರಿನಲ್ಲಿ ಮುಳುಗಿ ಸಾಯಲಿಲ್ಲ, ಅದರ ಬದಲಾಗಿ ಬೇರೆ ರೀತಿ (ಹತ್ಯೆ) ಸತ್ತಿದ್ದರೆಂದಾ?

ಹಾಗಾದರೆ ಆ ಸಾವಾದರೂ ಹೇಗೆ ಸಂಭವಿಸಿರಬಹುದು?

ಅನುಮಾನ 2

ದೇಹ ಸೆಟೆದುಕೊಂಡಿರಲಿಲ್ಲ (Rigor Mortis)



ಪತ್ನಿ ಸತ್ತ ದಿನವೂ ಸುಳ್ಳು ಮಾಹಿತಿ ನೀಡಿ ಟಿ.ಎ. ಬಿಲ್ ಪಡೆದ ಯಡ್ಡಿ

ಯಡ್ಡಿಯ ನಿಗೂಢ ಪ್ರವಾಸ

ಮೈತ್ರಾದೇವಿ ಸತ್ತ ದಿನ ಹಾಗೂ ಅದರ ಮಾರನೇ ದಿನ ಯಡಿಯೂರಪ್ಪ ಎಲ್ಲಿದ್ದರು?

ಸರ್ಕಾರಿ ಕಚೇರಿಗಳಿಗೆ ಭೇಟಿ ನೀಡಿ, ಸಾರ್ವಜನಿಕ ಕುಂದುಕೊರತೆಗಳನ್ನು ಆಲಿಸುತ್ತಿದ್ದರಂತೆ!

ನೀವಿದನ್ನು ನಂಬಲೇಬೇಕು!!

2004ರ ಅಕ್ಟೋಬರ್ 16 ಹಾಗೂ 17ರಂದು ಅದಕ್ಕೂ ಮುಂಚೆ ಮತ್ತು ಆನಂತರ ಸಹ ಯಡ್ಡಿ ವಿರೋಧ ಪಕ್ಷದ ನಾಯಕರಾಗಿದ್ದರು.

ಮೈತ್ರಾದೇವಿ ಹತ್ಯೆಯಾಗಿದ್ದು ಅಕ್ಟೋಬರ್ 16ರ ಬೆಳಗ್ಗೆ 7ರಿಂದ 8 ಗಂಟೆಯ ನಡುವೆ ಎಂದು ಭಾವಿಸಿದರೂ ಆ ದಿನ ಸಹ ನಮ್ಮ "ಬಡವರ ಬಂಧು" ಯಡ್ಡಿ ಪತ್ನಿಯ ಸಾವನ್ನೂ ಮರೆತು ಸಾರ್ವಜನಿಕರ ಕುಂದುಕೊರತೆ ಆಲಿಸಿದೆ ಎಂದು ಹೇಳಿಕೊಂಡಿದ್ದಾರೆ.

ಅದಕ್ಕೆ ಈ ದಾಖಲೆಯೇ ಸಾಕ್ಷಿ.

ಜುಜುಬಿ 800 ರೂಪಾಯಿ ಟಿಎ ಬಿಲ್ ಗಿಟ್ಟಿಸಲು ಯಡ್ಡಿ ಈ ತರದ ಹಸೀ ಸುಳ್ಳು ಹೇಳಿದ್ದಾರೆಂದರೆ ಅಸಹ್ಯ ಅನ್ನಿಸುವುದಿಲ್ಲವೆ?

ಬಿಜೆಪಿಯ ಮೂಲಗಳ ಪ್ರಕಾರವೇ ಅಕ್ಟೋಬರ್ 15ರಂದು ಕಲಘಟಗಿಗೆ ಹೋಗಿದ್ದ ಯಡ್ಡಿ ಅದೇ ದಿನ ರಾತ್ರಿ ಶಿವಮೊಗ್ಗದ ಮನೆಗೆ ಬಂದು ಉಳಿದಿದ್ದರು. ಆ ರಾತ್ರಿ ಮೈತ್ರಾದೇವಿಗೂ-ಯಡ್ಡಿಗೂ ಬೇರೊಂದು ಹೆಣ್ಣಿನ ವಿಚಾರದಲ್ಲಿ ಜಗಳವಾಗಿದೆ. ಆ ರಾತ್ರಿ ವಿನೋಬನಗರದ ಮನೆಯೊಳಗೆ ಏನು ನಡೆಯಿತೆಂಬುದು ಯಡ್ಡಿ ಹಾಗೂ ಮಗಳು ಅರುಣಾದೇವಿಗೆ ಮಾತ್ರ ಗೊತ್ತಿದೆ.

ಅಕ್ಟೋಬರ್ 15ರಂದು ರಾತ್ರಿ ತಾನು ಕಲಘಟಗಿಯಿಂದ ನೇರ ಶಿಕಾರಿಪುರಕ್ಕೆ ಹೋದೆನೆಂದು ಯಡ್ಡಿ ಹೇಳುತ್ತಿದ್ದಾರೆ. ಆದರೆ ಅಕ್ಟೋಬರ್ 16ರ ಬೆಳಗ್ಗೆ ಯಡ್ಡಿ ಕಾರು ಶಿವಮೊಗ್ಗದಿಂದ ಹೊರಟು ಶಿಕಾರಿಪುರ ಪ್ರವೇಶಿಸಿದ್ದನ್ನು ಕೆಲವರು ನೋಡಿದ್ದರೆಂದು ಹೇಳಲಾಗಿದೆ.

ಏನಿದರ ಅರ್ಥ? ■

...ಲೀಸರ ಮಹಜರ್ ವರದಿಯಲ್ಲಿ ಮೃತ ...ದೇವಿಯ ಕೈ-ಕಾಲುಗಳು ನೀಳವಾಗಿ ಚಾಚಿಕೊಂಡಿ...ು, ಶವವನ್ನು ಅದೇ ರೀತಿಯಾಗಿ ಕೆಳಗೆ ...ಲಾಗಿತ್ತೆಂದು ಹೇಳಲಾಗಿದೆ. ಆದರೆ ನೀರಿನಲ್ಲಿ ... ಪ್ರಾಣ ಕಳೆದುಕೊಳ್ಳುವ ಎಲ್ಲಾ ದುರ್ದೈವಿಗಳ ಕೈ-ಕಾಲುಗಳು ತಿರುಚಿ ಸೆಟೆದುಕೊಳ್ಳುತ್ತವೆ.

...ತ್ರಾದೇವಿಯ ದೇಹ ಹಾಗೆ ಸೆಟೆದುಕೊಂಡಿರಲಿಲ್ಲ ...ದು ಪೊಲೀಸರ ವರದಿಯಲ್ಲೇ ಸ್ಪಷ್ಟವಾಗಿದೆ. ...ರೆ ಆಕೆ ಹೇಗೆ ಸತ್ತರು?

...ನುಮಾನ 3:

...ಷ್ಟೇ ಅಲ್ಲ, ಮೃತ್ರಾದೇವಿಯ ಸಾವಿನ ಬಗ್ಗೆ ...ೇಟೆ ಪೊಲೀಸರಿಗೆ ಮೊದಲು ದೂರು ಕೊಟ್ಟವನು ...ನಾಥನೆಂಬ ಯಡಿಯೂರಪ್ಪನ ಭಂಟ. ಇವನು ...ಪೊಲೀಸರಿಗೆ ಹೇಳಿಕೆ ಕೊಡುವಾಗಲೂ 'ತಾನು ...ಳಗೆ ಇಣುಕಿ ನೋಡಿದಾಗ ಮೃತ್ರಾದೇವಿಯ ...ಸು ತೇಲುತ್ತಿದ್ದುದು ಕಾಣಿಸಿತು' ಎನ್ನುತ್ತಾನೆ.

...ನುಮಾನ ಬರುವುದೇ ಇಲ್ಲಿ!

...ದ್ದಿಯ ಶಿವಮೊಗ್ಗ ಮನೆಯಲ್ಲಿರುವ ಸಂಪಿನ ...ದ ಸುತ್ತಳತೆ ಹೆಚ್ಚೆಂದರೆ ಒಂದೂವರೆ ಚದರಡಿ ... ಮೃತ್ರಾದೇವಿ ಆಕಸ್ಮಿಕವಾಗಿ ಕಾಲು ಜಾರಿ ...ಪ್ರದಿರಲಿ ತಾನೇ ಬೀಳಬೇಕೆಂದು ಪ್ರಯತ್ನಿಸಿದರೂ ...ಪಿನೊಳಕ್ಕೆ ತೂರಲು ಸಾಧ್ಯವೇ ಇರಲಿಲ್ಲ, 54 ... ಮೃತ್ರಾದೇವಿ ಮೂಲತಃ ಸ್ಥೂಲದೇಹಿಯ...ಯಾಗಿದ್ದರು. ಇನ್ನು ಮಿಗಿಲಾಗಿ ಅವತ್ತಿನ ದಿನ ...ದ್ದ ನೀರು ಕೇವಲ ನಾಲ್ಕೂವರೆ ಅಡಿ ಮಾತ್ರ. ...ನಾಲ್ಕಿಂಚು ಎತ್ತರವಿದ್ದ (ಮರಣೋತ್ತರ ವರದಿಯ ...) ಮೃತ್ರಾದೇವಿ ನಾಲ್ಕೂವರೆ ಅಡಿ ಆಳದ ನೀರಿನೊಳಗೆ ... ಸತ್ತರೆನ್ನುವುದು ಕಾಗಕ್ಕ-ಗುಬ್ಬಕ್ಕನ ...ನಿಸುವುದಿಲ್ಲವೆ?

...ಾಲೀಸರು ಇದನ್ನು ಪರಿಶೀಲಿಸಬೇಡವೆ?

...ನುಮಾನ 4:

...ನ್ನೊಂದು ಅಂಶ ಏನೆಂದರೆ ಸುಮಾರು 80 ರಿಂದ



...ಸಂಪಿನಲ್ಲಿ ಮೃತ್ರಾದೇವಿ ಬಿದ್ದು ಸತ್ತರೇ?

...ಜಿ ತೂಕವಿದ್ದ ಮೃತ್ರಾದೇವಿಯ ದೇಹ ಮೂರ್ನಾಲ್ಕು ... ಲೀಟರ್ ನೀರಿದ್ದ ಸಂಪಿನೊಳಗೆ ತೇಲಲು ಅಸಾಧ್ಯ ...ುದು.

...ವತ್ತು ಮಹಜರ್ ಬರೆದ ಎಸ್‌ಐ ಕೃಷ್ಣಮೂರ್ತಿ ...ಟೆಳಗ್ಗೆ ಬಗನಿಕಳ್ಳು ಕುಡಿದು ಬಂದಿದ್ದನೇನೋ ಏನೋ? ...ದಿನ ಪರಿಣಾಮಗಳ ಬಗ್ಗೆ ಕಿಂಚಿತ್ತೂ ಯೋಚಿಸದೆ ...ಯ ಮೂಗಿನ ನೇರಕ್ಕೆ ಮಹಜರ್ ವರದಿ ...ುಕೊಂಡಿದ್ದಾನೆ.

...ನುಮಾನ 5

...ಸಂಪಿನಿಂದ ಹೆಣ ತೆಗೆದವರ್ಯಾರು?

...ಮೃತ್ರಾದೇವಿಯ ಸಾವಿನ ಬಗ್ಗೆ ದಟ್ಟ ಅನುಮಾನಗಳು ...ಕೊಳ್ಳುವ ಸಂದರ್ಭ ಇದು.

...ಪೊಲೀಸರಿಗೆ ಹೇಳಿಕೆ ನೀಡಿರುವ ಯದ್ದಿಯ ...ಗಳಾದ ಶಿವಕುಮಾರ ಹಾಗೂ ಮಂಜುನಾಥ ...ೂ ನಂಬಲಾಗದ ವಿಚಾರ ಹೇಳಿದ್ದಾರೆ. ಮೃತ್ರಾ...ಯ ಶವವನ್ನು ಇವರಿಬ್ಬರೇ ಸಂಪಿನಿಂದ ಮೇಲಕ್ಕೆ ... ಹೊರಕ್ಕೆ ತೆಗೆದರಂತೆ.

...ಈ ಶಿವಕುಮಾರ ಯದ್ದಿಯ ಮೈತ್ರಾ ಕಾಲೇಜ್ ... ನರ್ಸಿಂಗ್‌ನಲ್ಲಿ ಡ್ರೈವರ್ ಆಗಿದ್ದಾನೆ. ಇನ್ನೊಬ್ಬ ...ಜುನಾಥನೂ ಯದ್ದಿ ಸಂಸ್ಥೆಯ ನೌಕರನೇ. ಆರೆಂಟು ... ಆಳವಿದ್ದ, ಅದರಲ್ಲೂ ನಾಲ್ಕೂವರೆ ಅಡಿ ನೀರಿದ್ದ ...ನೊಳಗಿಂದ 80 ಕೆಜಿ ಭಾರವಿದ್ದ ಸಾಕಷ್ಟು ನೀರು ...ು ಊದಿಕೊಂಡಿದ್ದ ಮೃತ್ರಾದೇವಿಯ ಶವವನ್ನು ...ಬ್ಬರೇ 'ಸೂಪರ್‌ಮ್ಯಾನ್'ಗಳು ಮೇಲಕ್ಕೆತ್ತಿ ತಂದರಂತೆ. ...ಬಹುದಾದ ಹೇಳಿಕೆಯಾ ಇದು?

...ಇವರಿಬ್ಬರ ಕೈಲೇ ಅದು ಸಾಧ್ಯವಿಲ್ಲ ಅಂತಾದರೆ ...ತ್ತು ಅಲ್ಲಿ ಇನ್ನೂ ಹಲವರಿದ್ದಿರಬೇಕು. ಆದರೆ ...ೀಸರು ಆ ಬಗ್ಗೆ ಚಕಾರ ಎತ್ತಿಲ್ಲ.

...ಆದರೆ ತಾನೊಂದು ಬಗೆದರೆ ಮಾನವ, ಬೇರೊಂದು ಬಗೆಯಿತು ದೈವ ಎಂಬಂತೆ ಪೊಲೀಸರು ಈ ಸಂದರ್ಭದಲ್ಲಿ ಹಾಸ್ಯಾಸ್ಪದವಾಗಿ red handed ಆಗಿ ಸಿಕ್ಕಿಬಿದ್ದಿದ್ದಾರೆ.

ಅನುಮಾನ 6:

2004 ರ ಅಕ್ಟೋಬರ್ 31 ರಂದು ದೊಡ್ಡಪೇಟೆ ಪೊಲೀಸರು ರೆಡಿ ಮಾಡಿದ ಫೈನಲ್ ರಿಪೋರ್ಟ್‌ನ ನಮೂನೆ 158 ರಲ್ಲಿ ಒಂದು ಅಸಹಜ ಅನ್ನಿಸುವ ಸಾಲು ಕಂಡುಬಂದಿದೆ.

ಅದು ಹೀಗಿದೆ:

"..... ಮೃತ್ರಾದೇವಿಯು ನೀರಿನಲ್ಲಿ ಮುಳುಗಿದ್ದು ಕೂಡಲೇ ಶಿವಕುಮಾರ ಸಾಹೇಬರಿಂದ ಹೊರಗೆ ತೆಗೆದು, ವೈದ್ಯರಿಂದ ಪರೀಕ್ಷಿಸಿದಾಗ..." ಎಂಬಿತ್ಯಾದಿಯಾಗಿ ಈ ವರದಿ ಮುಂದೆ ಸಾಗಿ ಹೋಗಿದೆ.

ಇಲ್ಲಿ ಕಾಣಿಸಿರುವ 'ಶಿವಕುಮಾರ ಸಾಹೇಬ' ಯಾರು?

ಈ ಪ್ರಕರಣದಲ್ಲಿ ಬರುವ ಒಬ್ಬ ಶಿವಕುಮಾರ ಯದ್ದಿ ಕಾಲೇಜಿನ ಡ್ರೈವರ್. ಆತ ದೊಡ್ಡಪೇಟೆ ಪೊಲೀಸರಿಗೆ ಸಾಹೇಬನಾಗಲಾರ. ಅಸಲಿಗೆ ಈ ಶಿವಕುಮಾರ ಸಾಹೇಬ ಬೇರೆ ಯಾರೂ ಅಲ್ಲ, ಆಗ ಕೋಟೆ ಠಾಣಾ ಇನ್ಸ್‌ಪೆಕ್ಟರ್ ಆಗಿದ್ದ ಶಿವಕುಮಾರ!

ಮೃತ್ರಾದೇವಿ ಸಾವಿನ ಸ್ಥಳ ತನ್ನ ಠಾಣಾ ವ್ಯಾಪ್ತಿಗೆ ಬರದೇ ಹೋದರೂ ಈ ಸಿಪಿಐ ಶಿವಕುಮಾರ ಸುದ್ದಿ ತಿಳಿದ ಕೂಡಲೇ ಯದ್ದಿ ಮನೆಗೆ ಓಡಿ ಹೋಗಿದ್ದಾನೆ. ಆ ಕ್ಷಣದಿಂದ ಮೃತ್ರಾದೇವಿಯ ಶವಪರೀಕ್ಷೆ, ನಂತರದ ಶವಸಂಸ್ಕಾರದವರೆಗೂ ತಾನೇ ಖುದ್ದು ಓಡಾಡಿದರೂ ಎಲ್ಲೂ ತನ್ನ ಪ್ರಸ್ತಾಪ ಬರದಂತೆ ಎಚ್ಚರಿಕೆಯನ್ನು ವಹಿಸಿದ್ದಾನೆ. ಆದರೆ ದೊಡ್ಡಪೇಟೆ ಪೊಲೀಸರಿಗೆ ಅದು ಹೇಗೆ ತಿಳಿಯಬೇಕು?

ಅವರು ವರದಿ ಬರೆಯುವಾಗ 'ಶಿವಕುಮಾರ ಸಾಹೇಬರ' ಪ್ರಸ್ತಾಪ ಮಾಡಿಬಿಟ್ಟಿದ್ದಾರೆ. ಕೋರ್ಟ್ ಆದೇಶದಂತೆ ಈಗ ಮರು ತನಿಖೆ ನಡೆಯುವಾಗ ಪೊಲೀಸರು ಮರೆಯದೆ ಈ ಶಿವಕುಮಾರ ಸಾಹೇಬನನ್ನು ತನಿಖೆಗೊಳಪಡಿಸುವುದು ಒಳಿತು.

ಅನುಮಾನ 7

ಅರುಣಾ ದೇವಿಯ ನಿಗೂಢ ಪ್ರಯಾಣ.

ಮೃತ್ರಾದೇವಿ ಸತ್ತ ದಿನ ಅಂದರೆ 16.10.2004 ರ ಬೆಳಗ್ಗೆ 6.10 ಕ್ಕೆ ತಾನು ಕೆ.ಆರ್. ನಗರಕ್ಕೆ ಹೋದದ್ದಾಗಿ ಯದ್ದಿಯ ಪುತ್ರಿ ಅರುಣಾ ದೇವಿ ಪೊಲೀಸರಿಗೆ ಹೇಳಿದ್ದಾಳೆ. ದಾರಿಯಲ್ಲಿ ಎಲ್ಲೂ ಮೊಬೈಲ್ ಸಂಪರ್ಕ ಸಿಗದ ಕಾರಣ ತಾಯಿಯ ಸಾವಿನ ಸುದ್ದಿ ಮಧ್ಯಾಹ್ನ ಒಂದು ಗಂಟೆಗೆ ತಾನು ಕೆ.ಆರ್. ನಗರ ತಲುಪಿದಾಗ ಗೊತ್ತಾಯಿತೆಂದೂ ಅರುಣಾ ಹೇಳಿಕೆ ಕೊಟ್ಟಿದ್ದಾಳೆ.

ಈಕೆ ಬಗ್ಗೆ ಅನುಮಾನ ಯಾಕೆ ಬರಬೇಕೆಂದರೆ 'ತಾನು ಶಿವಮೊಗ್ಗೆಯಿಂದ ಬಸ್‌ನಲ್ಲಿ ಕೆ.ಆರ್. ನಗರಕ್ಕೆ ಹೋದೆ' ಎಂದಿರುವುದು. ಆಗ ಯದ್ದಿ ವಿರೋಧ ಪಕ್ಷದ ನಾಯಕನಾಗಿದ್ದರೂ ಸಂಸಾರಕ್ಕೇನೂ ಬಡತನ ಇರಲಿಲ್ಲ, ಹೆಣ್ಣು ಕೊಟ್ಟ ಮಾವನ ಸಮಸ್ತ ಆಸ್ತಿಯನ್ನು ಕಬಳಿಸಿದ್ದ ಯದ್ದಿ ತನ್ನ ಮಕ್ಕಳಿಗಾಗಿ ಪೆಟ್ರೋಲ್ ಬಂಕ್, ನರ್ಸಿಂಗ್, ಬಿ.ಎಡ್ ಕಾಲೇಜುಗಳು, ಮೋಟಾರ್ ಬೈಕ್ ಷೋರೂಂಗಳ ವ್ಯವಹಾರ ಮಾಡಿಕೊಟ್ಟಿದ್ದರು.

ಅದೇ ರೀತಿ ಈ ಅರುಣ ದೇವಿಗೂ ಬಡತನ ಇರಲಿಲ್ಲ, ಜನ ಶಿಕ್ಷಣ ಸಂಸ್ಥೆಯೆಂಬ NGO ಕಟ್ಟಿಕೊಂಡಿರುವ ಅರುಣ ದೇವಿ ಲಕ್ಷಾಂತರ ರೂಪಾಯಿ ದುಡಿದುಕೊಳ್ಳುತ್ತಿದ್ದಾಳೆ. ಆದರೂ ಕಾರ್ ಬಳಸಲಿಲ್ಲ ಯಾಕೆ?

ಮೃತ್ರಾದೇವಿಯ ಸಾವಿನ ವಿಚಾರದಲ್ಲಿ ತಾನು ಸೀನ್‌ನಲ್ಲಿರಬಾರದು, ಆ ಸಾವು ತನ್ನ ಗೈರುಹಾಜರಿಯಲ್ಲಿ ಸಂಭವಿಸಿದೆ ಎಂದು ಬಿಂಬಿಸಲು ಅರುಣಾದೇವಿ ಈ ನಾಟಕ ಸೃಷ್ಟಿಸಿರುವಂತೆ ಕಾಣುತ್ತಿದೆ.

ಪೊಲೀಸರು ಈಗ ಮಾಡಬೇಕಾದ ಒಂದು ಸಿಂಪಲ್ ತನಿಖೆ ಏನೆಂದರೆ 2004 ರ ಅಕ್ಟೋಬರ್ 15, 16 ಹಾಗೂ 17 ನೇ ತಾರೀಖಿನಂದು ಅರುಣಾದೇವಿಯ ಮೊಬೈಲ್ ಫೋನಿಗೆ ಬಂದ-ಹೋದ ಕರೆಗಳ ಮಾಹಿತಿ, ಆಡಿರುವ ಮಾತುಗಳ ವಿವರ ಕಲೆ ಹಾಕಿದಲ್ಲಿ ಈ ಪ್ರಕರಣಕ್ಕೆ ಹೊಸ ತಿರುವು ಸಿಗಲೂಬಹುದು.

ಮುಂದಿನ ಮಾರ್ಚ್ 31 ರೊಳಗಾಗಿ ಶಿವಮೊಗ್ಗ ಪೊಲೀಸರು ಮೃತ್ರಾದೇವಿ ಅಸಹಜ ಸಾವಿನ ಪುನರ್ ತನಿಖೆ ಮಾಡಿ ಮುಗಿಸಬೇಕಿದೆ.

ಇಡೀ ರಾಜ್ಯದ ಜನತೆ ಈ ಪ್ರಕರಣದ ಬಗ್ಗೆ ಕುತೂಹಲದಿಂದಿದೆ. ನಿಷ್ಪಕ್ಷಪಾತವಾದ ತನಿಖೆ ಮಾತ್ರ ಮೃತ್ರಾದೇವಿಯ ಸಾವು ಹೇಗೆ ಸಂಭವಿಸಿರಬಹುದೆಂಬುದನ್ನು ಬಯಲಿಗೆಳೆಯಲು ಸಾಧ್ಯ.

ರಾಜ್ಯ ಪೊಲೀಸರು ತಮ್ಮ ಮೇಲಿರುವ ಹೊಣೆ ಎಷ್ಟೆಂಬುದನ್ನು ಅರ್ಥಮಾಡಿಕೊಳ್ಳಲಿ. ■

ನಾಯಿಮರಿಗೆ ಪಪ್ಪನ್ನ ತೋರಸಕ್ಕಾಗುತ್ತೇನ್ರಿ?

ಮಂಗಳೂರಿನ ಅಮ್ನೇಶಿಯಾ ಪಬ್ ಮೇಲೆ ನಡೆದ ದಾಳಿಯನ್ನು ಖಂಡಿಸಿದ ಕೆಲವು ಕಿಡಿಗೇಡಿಗಳು ಸದರಿ ದಾಳಿಕೋರರನ್ನ ಶ್ರೀರಾಮನ ಕಪಿ ಸೈನ್ಯಕ್ಕೆ ಹೋಲಿಸಿದರಂತಲ್ಲಾ, ಇದರಿಂದ, ನಮ್ಮ ನಿಡುಮಾಮಿಡಿ ಶಿಷ್ಯರು ತೀರಾ ಆಕ್ಷೇಪ ವ್ಯಕ್ತಪಡಿಸಿ ಕಪಿಗಳು ಎಂದವರನ್ನು ಕೈಯಲ್ಲಿ ಪರಚಲು ರೆಡಿಯಾಗಿದ್ದಾರಂತಲ್ಲಾ. ಅವರ ಪ್ರಕಾರ ಶ್ರೀರಾಮನ ಕಪಿಗಳೆಂದೂ ವಿಕೃತ ಚಡ್ಡಿಗಳಂತೆ ವರ್ತಿಸಲಿಲ್ಲ, ಸಮೃದ್ಧ ಕಾಡಿನ ಕುಸುರು ತಿಂದು ಶಕ್ತಿಗಳಿಸಿಕೊಂಡಿದ್ದ ಅವುತಮ್ಮ ಹೆಣ್ಮಕ್ಕಳು ಮನೆಮಠವನ್ನೆಲ್ಲ ಬಿಟ್ಟು ಸೀತೆ ತರಲು ಸೇತುವೆ ಕಟ್ಟಿದವು. ಅವುಗಳು ದೊಣ್ಣೆ, ಬಡಿಗೆ, ಮರದ ರೆಂಬೆ, ಕಲ್ಲುಬಂಡೆ ಹೊತ್ತುಕೊಂಡು ಲಂಕಾ ಬಾಗಿಲಿಗೆ ಹೋದ ವೈಖರಿಗೆ ಹೆದರಿದ ಲಂಕಾ ರಕ್ಕಸರ ಜಂಘಾಬಲ ಉಡುಗಿಹೋಗಿ, ಪೇರಿಕಿತ್ತರು. ಕಪಿಸೈನ್ಯವು ಯುದ್ಧದಲ್ಲಿ ಜಯಶಾಲಿಗಳಾದ ನಂತರ ಸೀತೆ ಬಂದು ರಾಮನ ಪಕ್ಕ ನಿಂತಾಗ ಎಲ್ಲಾ ಕಪಿಗಳು ಚಪ್ಪಾಳೆ ತಟ್ಟಿ ಆನಂದದಿಂದ ಕುಣಿದಾಡಿದವು. ಅಂತಹ ವಾನರ ಸೇನೆಗೆ ಈ ವಿಕೃತ ಚಡ್ಡಿಗಳನ್ನು ಹೋಲಿಸುವುದು ಸರಿಯಲ್ಲ ಎಂದರಂತಲ್ಲಾ, ಥೂತ್ತೇರಿ!

* * * * *

ವಾಸ್ತವವಾಗಿ ಸೀತೆಯನ್ನು ತಂದುಕೊಟ್ಟ ಕಪಿಸೈನ್ಯ ಮತ್ತು ಅವರ ಲೀಡರ್ ಆದ ಆಂಜನೇಯನಿಗೆ ರಾಮಚಂದ್ರ ಚಿರಋಣಿಯಾಗಿ ಆಂಜನೇಯ ಫೋಟೋ ಇಟ್ಟುಕೊಂಡು ಪೂಜೆ ಮಾಡಬೇಕಿತ್ತು, ಆದರೆ ಚಡ್ಡಿಗಳು ಮಾಡಿದ್ದೇನು? ರಾಮನ ಪದತಲದಲ್ಲಿ ಆಂಜನೇಯನನ್ನ ಬರೆದು ಕೂರಿಸಿವೆ. ಇದರಿಂದಲೇ ಅರಿವಾಗುತ್ತದೆ, ರಾಮನ ಕಾಲದಿಂದ ನಡೆದುಬಂದ ಘೋರ ಅನ್ಯಾಯ ಯಾವುದೆಂದು. ಅಷ್ಟಕ್ಕೂ ಆಂಜನೇಯನ ಕಪಿಸೈನ್ಯ ನಾವು ರಾಮನಿಗೆ ಮಾಡಬಾರದ ಉಪಕಾರವನ್ನು ಮಾಡಿದ್ದೇವೆಂದು ಎಂದೂ ಭಾವಿಸಲಿಲ್ಲ, ಸೀತೆ ರಾಮ ಒಟ್ಟಾದ ಕೂಡಲೇ ಆ ಪ್ರಸಂಗವನ್ನೇ ಮರೆತು ಮರಹತ್ತಿ ಹೊರಟುಹೋದವು. ರಾಮನ ಪಟ್ಟಣದಲ್ಲಿ ಒಂದೇ ಒಂದು ಮಂಗನೂ ಇರದಂತೆ ಓಡಿದವು. ಇಂತಹ ತ್ಯಾಗಬುದ್ಧಿಯ ವಾನರ ಸೇನೆಯನ್ನು, ರಾಮಸೇನೆಗೆ ಹೋಲಿಸುವುದನ್ನು ನಾವು ಖಂಡಿಸುತ್ತೇವೆಂದು ನಿಡುಮಾಮಿಡಿ ಶಿಷ್ಯರು ಹೇಳುತ್ತಿದ್ದಾರಂತಲ್ಲಾ, ಇದೇ ಸುಸಮಯವೆಂದರಿತ ಪೇಜಾವರ, ಶ್ರೀರಾಮಸೇನೆ ನಿಷೇಧವನ್ನು ನಾನು ಒಪ್ಪುವುದಿಲ್ಲವೆಂದು ಮಂಗಳೂರು ದಾಳಿಯ ಚಡ್ಡಿ ಸೈನ್ಯದ ವಕ್ತಾರನಂತೆ ಮಾತನಾಡಿದ್ದಾರಂತಲ್ಲಾ, ಥೂತ್ತೇರಿ!

* * * * *

ಬಿಜೆಪಿ ಶಾಸಕ ಸಂಪಂಗಿ ಸಿಕಿಬಿದ್ದಿರುವ ವೈಖರಿಗೆ ಬೆಚ್ಚಿಬಿದ್ದಿರುವ ಶಾಸಕರು, ಇನ್ನು ಮುಂದೆ ಯಾವುದೇ ಹಣವನ್ನು ಕೈಯಲ್ಲಿ ಮುಟ್ಟಬಾರದೆಂಬ ಚರ್ಚೆ ಆರಂಭಿಸಿದ್ದಾರಂತಲ್ಲಾ, ಅಧಿಕಾರಿಗಳಿಂದ ಲಂಚವನ್ನು ಬಾಯಿಬಿಟ್ಟೇ ಕೇಳುತ್ತಿದ್ದ ಚೆನ್ನಿಗಪ್ಪನಂತವನೂ ಕೂಡ "ಏನೇ ಆಗ್ಲಿ, ಇನ್ನು ಮುಂದೆ ಯಾವ ಸೂಳೆಮಕ್ಕಳು ಕೊಡೋ ದುಡ್ಡನ್ನು ಮುಟ್ಟಿದಿಲ್ಲ ಅಂತಿನಿ. ಕುಮಾರಸ್ವಾಮಿ 150 ಕೋಟಿ ಈಸ್ಕಂಬಾ ಅಂತ ಜನಾರ್ದನ ರೆಡ್ಡಿ ಹತ್ರಕ್ಕೆ ಕಳಿಸಿದ್ದಾಗ ಲೋಕಾಯುಕ್ತರಿಂದ ಹಿಡಿಸಿದ್ರೆ ಗತಿಯೇನ್ರಿ? ಸದ್ಯ ರೆಡ್ಡಿ ಟೇಪು, ಸೀಡಿ ಅಂತ ಏನೇನೋ ಹೇಳಿ ಸುಮ್ಮನಾದ" ಎಂದು ಬಚಾವಾದ ಧ್ವನಿಯಲ್ಲಿ ನಿಟ್ಟುಸಿರು ಬಿಡುವಾಗಲೇ, ಸಂಪಂಗಿ ಗೆಳೆಯ ನಯಾಜ್ "ಅದು ನನ್ಗೆ ಬರಬೇಕಾದ ದುಡ್ಡು ಸಾರ್. ಈ ಹಾಳು ಬೆಂಗಳೂರ್ದು ಟ್ರಾಫಿಕ್‌ನಲ್ಲಿ ನಾನು ಸಿಕ್ಕೆ. ನಮ್ಮ ಸಂಪಂಗಿ ಪೋಲೀಸ್‌ಗೆ ಟ್ರಾಪ್ ಆದ್ರು ಶಾರ್. ಸುಮ್ನೆ ಐದು ಲಕ್ಷ ಹೋಯ್ತು ನೋಡಿ" ಎಂದು ಹಲುಬುತ್ತಿದ್ದಾನಂತಲ್ಲಾ, ಥೂತ್ತೇರಿ!

ಥೂತ್ತೇರಿ

ಯಾಹೂ

* * * * *

ಬಿಜೆಪಿಗೆ ಲಂಚ ಹೊಡೆಯುವ ಶಾಸಕರ ಕಾಟ. ಕಾಂಗ್ರೆಗೆ ಅರಾಜಕತೆಯ ಕಾಟ. ಜೆಡಿಎಸ್ ಧೃತರಾಷ್ಟ್ರರಿಗೆ ರೇವಣ್ಣನ ಹೆಂಡತಿ ಭವಾನಿಯ ಬೈಗುಳದ ಕಾಟ. ಹೀಗೆ ಎಲ್ಲರೂ ಒಂದಲ್ಲಾ ಒಂದು ಕಾಟದಲ್ಲಿ ನರಳುತ್ತಿರಬೇಕಾದರೆ, ನಮ್ಮ ಮಾಯಾನಗರಿಗೆ ತಗುಲಿಕೊಂಡಿರುವ ನಾರಾಯಣಗೌಡರಿಂದ ಊರ ತುಂಬಾ ಫ್ಲೆಕ್ಸ್, ಕಟೌಟ್‌ಗಳ ಕಾಟವಾಗಿದೆಯಂತಲ್ಲಾ, ಕಾಸಿದ್ದವರ ಕಡೆಗೆ ತುಂಬಾ ವೈಯ್ಯಾರದಿಂದ ನೋಡುವಂತಹ ಫೋಟೋ ತೆಗೆಸಿಕೊಂಡಿರುವ ನಾರಾಯಣಗೌಡ ಈಚೆಗೆ ಬೆಂಗಳೂರಲ್ಲಿ ಮಾಡಿದ ಸಮಾವೇಶದಲ್ಲಿ ಡಾ.ರಾಜ್‌ಕುಮಾರರ ಸುದ್ದಿ, ಸುಳಿವು, ಭಾವಚಿತ್ರಗಳೂ ಪತ್ತೆಯಿರಲಿಲ್ಲವಂತಲ್ಲಾ, ಈ ಬಗ್ಗೆ ನೊಂದಿರುವ ರಾಜ್ ಅಭಿಮಾನಿಗಳು "ಇರಲಿ ಬಿಡಿ ಸಾರ್. ಕನ್ನಡದ ಸಂಸ್ಕೃತಿಯ ಪ್ರತೀಕವಾದ ನಮ್ಮ ರಾಜಣ್ಣನ ಭಾವಚಿತ್ರ, ನಾರಾಯಣಗೌಡನಂತಹವನ ಜೊತೆ ಕಾಣಿಸಿಕೊಳ್ಳದಿದ್ದುದೇ ವಾಸಿ" ಎಂದು ಸಮಾಧಾನಗೊಂಡರಂತಲ್ಲಾ, ಈ ನಡುವೆ ನಾರಾಯಣಗೌಡನ ಟೀಮಿನಿಂದ ಸನ್ಮಾನ ಮಾಡಿಸಿಕೊಂಡು ಸಮಾಧಾನದಿಂದ ಮನೆಯಲ್ಲೇ ಕುಳಿತಿರುವ ಸಿಪಿಕೆ ಎಂಬ ಗೌಡರು "ಎಲ್ಲಾ ಸರಿ, ಈ ರಕ್ಷಣಾ ವೇದಿಕೆ ಹುಡುಗರು ನನ್ನ ಒಂದು ಪುಸ್ತಕವನ್ನು ಓದಿಲ್ಲವಂತಲ್ಲಾ, ನನ್ನನ್ನೇ ಓದದ ಇವರು ಇನ್ನು ಕುವೆಂಪುರವರನ್ನು ಓದಿರುವುದುಂಟೆ" ಎಂದರಂತಲ್ಲಾ ಥೂತ್ತೇರಿ!!

* * * * *

ಇದ್ದಕ್ಕಿದ್ದಂತೆ ಸಣ್ಣ ಸುಂಟರಗಾಳಿ ಬಂದಂತೆ ಕಾಣಿಸಿಕೊಂಡ ರಾಧಿಕಾ ಎಂಬ ಸಿನಿಮಾ ನಟಿಯನ್ನು ಮಾತನಾಡಿಸಬೇಕೆನಿಸಿತಲ್ಲಾ, ಈ ಕೂಡಲೇ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯ ಮಾಜಿ ಗನ್ ಮ್ಯಾನ್‌ನಿಂದ ನಂಬರ್ ಪಡೆದು ಫೋನ್ ಮಾಡಿದೆ. ರಿಂಗಾಯ್ತು,

ರಿಂಗ್‌ಟೋನ್ : "ಚಿತ್ತಾನ್ನ ಚಿತ್ತಾನ್ನ..."

"ಹಲೋ ಯಾರು?"

"ನಾನು ಡಯಲಾಗ್ ರೈಟರ್ ಯಾಹೂ ಮೇಡಂ."

"ಯಾವ ಸಿನಿಮಾಕ್ಕೆ ಡೈಲಾಗ್ ಬರಿತಿರಿ?"

"ಈಗಾಗ್ಲೆ ನಾಲ್ಕೈದು ಸಿನಿಮಾಕ್ಕೆ ಬರೆದಿದ್ದಿನಿ ಮೇಡಂ. ನಿಮ್ಮ ಸಿನಿಮಾದಲ್ಲಿ ಪ್ರಭಾವ ಬೀರಿ ಕೊಡುಸ್ತೀರಾ. ನಾನು ನಿಮ್ಮ ಅಭಿಮಾನಿ ಮೇಡಂ."

"ಈಗಾಗ್ಲೆ ಒಬ್ಬರು ಬರೀತಾಯಿದಾರೆ. ನೀವು ಮೊದ್ಲೇ ಬರಬೇಕಿತ್ತು."

"ಬರಬೇಕಿತ್ತು ಮೇಡಂ. ನೀವು ಈ ನಡುವೆ ಸುಮಾರು ಎರಡು ವರ್ಷ ಕಾಣಲೇಯಿಲ್ಲ, ಎಲ್ಲಿಗೋಗಿದ್ರಿ ಮೇಡಂ?"

"ಮನೇಲೆ ಇದ್ದೆ ಕಂದ್ರಿ, ಇನ್ನೆಲ್ಲಿಗೋಗಣ."

"ಮನೆ ವಳಗಡೆ ಇರಕ್ಕೆ ಬೇಜಾರಾಗಲಿಲ್ವ ಮೇಡಂ?"

"ಇಲ್ಲ, ಮನೇಲಿ ಒಂದು ನಾಯಿಮರಿ ಇತ್ತು, ಅದರ ಜೊತೆ ಆಟ ಆಡಿಕೊಂಡು ಬೇಜಾರನ್ನೆಲ್ಲಾ ಕಳಕೊಂಡೆ."

"ಪೊಮರಿಯನ್ನ ಮೇಡಂ?"

"ಪೊಮರಿಯನ್ನಲ್ಲ ಕಂದ್ರಿ, ಇಲ್ಲೇ ನಾಟಿ ತಳಿದು."

"ಕಪ್ಪಗಿದಿಯೋ, ಬೆಳ್ಳಗಿದಿಯೋ ಮೇಡಂ?"

"ಅದನ್ನ ಈಗ್ಲೆ ಹೇಳಕ್ಕೆ ಬರಲ್ಲ, ಇನ್ನೂ ಚಿಕ್ಕಮರಿ. ಸದ್ಯಕ್ಕೆ ಬಿಳಿ ಕಪ್ಪು ಮಿಕ್ಸಾಗಿದೆ. ತುಂಬಾ ಚೂಟಿಯಾಗಿದೆ."

"ಬೊಗಳದನ್ನ ಕಲ್ತಿದಿಯಾ ಮೇಡಂ?"

"ಬೊಗಳದೇನು, ಮಾತನ್ನ ಕಲಿತಾಯಿದೆ ಕಂದ್ರೀ. ಪಪ್ಪ ಎಲ್ಲಿ ಅನ್ನತ್ತೆ."


"ಆದರ ಪಪ್ಪ ತೋರಿಸಿದರಾಯ್ತು."

"ಈ ನಾಯಿಮರಿ ಪಪ್ಪನ್ನ ನಾನು ತೋರಸಕ್ಕಾಗುತ್ತೇನ್ರಿ. ಅದೆಲ್ಲಾ ಆಗಲ್ಲ. ಬೇಕಿದ್ರೆ ಅದೇ ನಾಯಿ ಬಂದು ನೋಡಿಕೊಂಡು ಹೋಗಬಹುದು ಅಷ್ಟೇ."

"ಥೂತ್ತೇರಿ!!" ■



ಹೈದ್ರಾಬಾದ್ ಕರ್ನಾಟಕ-ಹಳೇ ಮೈಸೂರು ವೀರಶೈವ ಮಹಾಸಭಾ ಒಡಕು




ಅಖಿಲ ಭಾರತ ವೀರಶೈವ ಮಹಾಸಭಾದ ಕಟ್ಟಡ

■ ಪಾರ್ವತೀಶ್

ರಾಜ್ಯ ಲಿಂಗಾಯತ ಕೋಮಿನ ಅತ್ಯಂತ ಪ್ರಬಲ ಸಂಘಟನೆಯಾಗಿರುವ ಅಖಿಲ ಭಾರತ ವೀರಶೈವ ಮಹಾಸಭಾದೊಳಗೆ ಹೊಸ ಜಗಳವೊಂದು ಸ್ಫೋಟಿಸುವ ಹಂತಕ್ಕೆ ಬಂದು ತಲುಪಿದೆ. ಮಹಾಸಭಾದಲ್ಲಿ ಹೈದರಾಬಾದ್-ಕರ್ನಾಟಕ ಅರ್ಥಾತ್ ಉತ್ತರ ಕರ್ನಾಟಕದ ಲಿಂಗಾಯತರಿಗೆ ಬೆಣ್ಣೆಯನ್ನು; ಹಳೇ ಮೈಸೂರಿನ ಲಿಂಗಾಯತರ ಕಣ್ಣಿಗೆ ಸುಣ್ಣವನ್ನು ಸುರಿಯಲಾಗುತ್ತಿದೆಯೆಂಬ ಬೇಗುದಿಯೊಂದು ಈಗ ಬೆಳೆಯುತ್ತಿದೆ. ಇದು ಮೇಲ್ನೋಟಕ್ಕಂತೂ ನಿಜವಿರಬಹುದು ಎನಿಸುವಂತಿದೆ. ಈ ತಾರತಮ್ಯಗಳ ಬಗ್ಗೆ ಒಂದು ಸ್ಯಾಂಪಲ್ ನೀಡಬೇಕೆಂದರೆ ಇದೇ ಫೆಬ್ರವರಿ 8ರಂದು ಬೆಂಗಳೂರಿನ ಸದಾಶಿವನಗರದಲ್ಲಿ ವೀರಶೈವ ಮಹಾಸಭಾದ 'ಲಿಂಗಾಯತ ಭವನ'ದ ಉದ್ಘಾಟನಾ ಸಮಾರಂಭ ನಡೆಯುತ್ತಿದೆ.

ಹತ್ತಾರು ಕೋಟಿ ರೂಪಾಯಿ ಚಂದಾ ಎತ್ತಿ ಸಾಧ್ಯವಾದಷ್ಟು ಗುಳುಂ ಮಾಡಿ ಉಳಿದ ಕಾಸಿನಲ್ಲಿ ನಿರ್ಮಿಸಿರುವ ಈ ಬೃಹತ್ ಭವನ ಲಿಂಗಾಯತರ ಪಾಲಿಗೆ ಒಂದು ಹೆಮ್ಮೆಯ ಸಾಧನೆಯೇನೋ ಹೌದು. ಆದರೆ ಅದರ ಆಹ್ವಾನ ಪತ್ರಿಕೆಯನ್ನೊಮ್ಮೆ ಓದಿ ನೋಡಬೇಕು. ಹಳೇ ಮೈಸೂರು ಲಿಂಗಾಯತರಿಗೆ ವೀರಶೈವ ಮಹಾಸಭಾದೊಳಗೆ ಸೂಕ್ತ ಸ್ಥಾನಮಾನ, ಗೌರವಗಳಿಲ್ಲ ಎಂಬ ಕೆಲವರ ಆಕ್ಷೇಪಗಳು ನಿಜ ಎನಿಸುವಂತಿವೆ. ಕಟ್ಟಡ ಉದ್ಘಾಟನೆಯಲ್ಲಿ ಭಾಗವಹಿಸುತ್ತಿರುವ ಬರೋಬ್ಬರಿ 50 ಹಿರಿ-ಕಿರಿ ಮಠಾಧೀಶರ ಪೈಕಿ ದಕ್ಷಿಣ ಕರ್ನಾಟಕದವರು ಕೇವಲ 10 ಮಂದಿ ಮಾತ್ರ. ಅವರ ಪೈಕಿ ಸಿದ್ದಗಂಗಾ, ಮೈಸೂರಿನ ಸುತ್ತೂರು, ಕನಕಪುರದ ದೇಗುಲ ಮಠ, ಮರಳೇಗವಿ ಮಠ, ಬೆಂಗಳೂರಿನ ಬೇಲಿಮಠದವರನ್ನು ಹೊರತುಪಡಿಸಿದರೆ ಬಾಕಿಯವರೆಲ್ಲಾ ಇನ್ನೂ ಬಾಲಕರು. ಹಣ-ಪ್ರಭಾವದಲ್ಲಿ ಇನ್ನೂ ನಿಶ್ಶಕ್ತರು. ಹಾಗಾಗಿ ಹಳೇ ಮೈಸೂರಿನಿಂದ ಐವರು ಮಠಾಧೀಶರದ್ದೇ ಲೆಕ್ಕ.

ಇನ್ನು ಕಟ್ಟಡದ ಉದ್ಘಾಟನೆಯನ್ನು ಮುಖ್ಯಮಂತ್ರಿ ಯಡಿಯೂರಪ್ಪ ಅಧ್ಯಕ್ಷತೆ ಭೀಮಣ್ಣ ಖಂಡ್ರೆ, ವೆಬ್ ಸೈಟ್ ಪ್ರಾರಂಭ ವೀರಣ್ಣ ಮತ್ತೀಕಟ್ಟಿ, ಮಹಾಸಭೆಯ ಹಿಂದಿನ ನಾಯಕರ ಭಾವಚಿತ್ರ ಅನಾವರಣ ಜಗದೀಶ ಶೆಟ್ಟರ, ಮಹಾಸಭಾ ಸ್ಥಾಪಕ ಹಾನಗಲ್ ಕುಮಾರಸ್ವಾಮಿಗಳ ಭಾವಚಿತ್ರ ಸಿ.ಎಂ. ಉದಾಸಿಯಿಂದ ನಡೆಯುತ್ತಿದೆ. ಇದು ಪೂರ್ತಿ ಉತ್ತರ ಕರ್ನಾಟಕದ ಲಿಂಗವಂತರ ಗ್ಯಾಂಗ್. ಇಂತಾದ್ದೊಂದು ಪ್ರಮುಖ ಕಾರ್ಯದಲ್ಲಿ ಹಳೇ ಮೈಸೂರಿನ ಲಿಂಗಾಯತ ನಾಯಕರನ್ನು ಬೇಕೆಂತಲೇ ನಿರ್ಲಕ್ಷಿಸಲಾಗಿದೆ. ಇದು ಹೋಗಲಿ, ಮುಖ್ಯ ಅತಿಥಿಗಳಾಗಿ ಆಹ್ವಾನಿತರಾದವರಲ್ಲಿ ಯಾರ್‍ಯಾರಿದ್ದಾರೆಂದು ನೋಡಿದರೆ ಅಲ್ಲೂ ತಾರತಮ್ಯವೇ...!



ಖಂಡ್ರೆ

ಆಹ್ವಾನಿತ 15 ಗಣ್ಯ ರಾಜಕಾರಣಿಗಳ ಪೈಕಿ ವಿ. ಸೋಮಣ್ಣ ರಾಜಶೇಖರನ್, ರಾಣಿ ಸತೀಶ್ ಈ ಮೂವರು ಮಾತ್ರ ಹಳೇ ಮೈಸೂರಿಗರಾದರೆ ಸಿಂಹಪಾಲು ಉತ್ತರ ಕರ್ನಾಟಕದ ಲಿಂಗಾಯತರಿಗೆ ಹೋಗಿದೆ.


ಈ ಬೆಣ್ಣೆ-ಸುಣ್ಣಗಳ ವಿಚಾರ ಹಳೇ ಮೈಸೂರಿನ ಕೆಲ ಲಿಂಗಾಯತ ಲೀಡರ್‌ಗಳಲ್ಲಿ ಉರಿಹಚ್ಚಿದೆ. ಅಷ್ಟೇ ಅಲ್ಲ, ಸೋಮಣ್ಣ ಇನ್ನೊಬ್ಬ ಎಂ.ವಿ. ರಾಜಶೇಖರನ್ ಬಿಟ್ಟರೆ ಉಳಿದ ಬಹುತೇಕರು ಬಿಜೆಪಿಗಳು. ಅದೂ ಹಾಳಾಗಲಿ ಎಂದು ಮಹಾಸಭಾದ ಪದಾಧಿಕಾರಿಗಳ ಪಟ್ಟಿಯಲ್ಲಿ ಯಾರ್‍ಯಾರಿದ್ದಾರೆಂದು ಗಮನಿಸಿದರೆ ಅದೂ ಸಂಪೂರ್ಣವಾಗಿ ಹೈದರಾಬಾದ್-ಕರ್ನಾಟಕದ ಲಿಂಗವಂತರಿಂದಲೇ ತುಂಬಿಹೋಗಿದೆ. ಪ್ರಕಟಿತ ಪದಾಧಿಕಾರಿಗಳ 30 ಹೆಸರುಗಳಲ್ಲಿ ಮೂವರು ಮಾತ್ರ ದಕ್ಷಿಣದವರು. ಮೈಸೂರಿನ ಒಬ್ಬ ಪುಟ್ಟಬುದ್ಧಿ, ಬೆಂಗಳೂರಿನ ವಿನೋದ ನಟರಾಜು, ಮಧುರಾ ಅಶೋಕ ಕುಮಾರ್ ಹೀಗೆ ವೆಯ್ಟ್‌ಲೆಸ್ ಹೆಸರುಗಳಿವೆ.

ಈ ಪಾಯಿಂಟ್‌ಗಳನ್ನೆಲ್ಲಾ ಮುಂದಿಟ್ಟುಕೊಂಡು ಈಗ ಹಳೇ ಮೈಸೂರಿನ ಲಿಂಗವಂತರು ಭೀಮಣ್ಣ ಖಂಡ್ರೆಯ ಶರಣರ ಗ್ಯಾಂಗ್‌ನ ವಿರುದ್ಧ ಕದನಕ್ಕೆ ಸಜ್ಜಾಗುತ್ತಿದ್ದಾರೆ. ಯುವ ಲಿಂಗಾಯತ ನಾಯಕ ವಾಗೀಶ್ ಪ್ರಸಾದ್ ಮತ್ತವರ ಬೆಂಬಲಿಗರು ಭವನದ ಉದ್ಘಾಟನೆಯ ದಿನ ಕಪ್ಪು ಬಾವುಟ ತೋರಿಸಿ ಗಲಾಟೆಯೆಬ್ಬಿಸುವ ಸುಳಿವು ಖಂಡ್ರೆಗೆ ಸಿಕ್ಕಿದೆ.

ಕರ್ನಾಟಕದ ಒಂದು ಪ್ರಬಲ ಜಾತಿ ಶಕ್ತಿಯಾಗಿರುವ ಲಿಂಗಾಯತರು ಹೀಗೆ ಉತ್ತರ-ದಕ್ಷಿಣ ಎಂದು ವಿಭಜನೆಯಾಗಿ ಕಿತ್ತಾಟಕ್ಕಿಳಿಯುವುದನ್ನು ತಪ್ಪಿಸುವ ರಾಜಿ ಕಬೂಲಿಯೂ ಈಗ ಶುರುವಾಗಿದೆ.

ಗಣಿ ದುಡ್ಡೂ ಬಂದಿದೆ

ಸದಾಶಿವನಗರದ ರಮಣ ಮಹರ್ಷಿ ರಸ್ತೆಯ ಆಯಕಟ್ಟಿನ 50 x 90 ಚದರಡಿ ಜಾಗದಲ್ಲಿ ತಲೆಯೆತ್ತಿರುವ ವೀರಶೈವ ಭವನ ಕಟ್ಟಲು ಹೊರಟವರೆಲ್ಲ ಭವನ ನಿರ್ಮಿಸಿ ಮುಗಿಸುವಷ್ಟರಲ್ಲೇ ಸ್ವಂತ ಉದ್ಧಾರ ಮಾಡಿಕೊಂಡು ಬಿಟ್ಟಿದ್ದಾರೆ. ಜನರಲ್ ಸೆಕ್ರೆಟರಿ ಸದಾಶಿವಯ್ಯ ಮನೆ, ತೋಟ, ಕಾರುಗಳ ಭರಾಟೆಯಲ್ಲಿ ಮುಳುಗೇಳುತ್ತಿದ್ದಾರೆ. ಅನುಮಾನ ಏನೆಂದರೆ ಈ ವೀರಶೈವ ಭವನ ನಿರ್ಮಾಣಕ್ಕೆಂದು ಇದುವರೆಗೂ ಸಂಗ್ರಹಿಸಿದ ಹಣ ಎಷ್ಟು ಕೋಟಿ? ದಾನಿಗಳು ಯಾರು? ಎಷ್ಟೆಷ್ಟು ಕೊಟ್ಟಿದ್ದಾರೆ? ಖರ್ಚಾಗಿದ್ದೆಷ್ಟು? ಎಂಬ ಯಾವ ಖಚಿತ ಮಾಹಿತಿಗಳೂ ಹಾಲಿ ಪದಾಧಿಕಾರಿಗಳ ಬಳಿ ಇಲ್ಲ. ಈ ಸಂಘದ ಲೆಕ್ಕಪತ್ರ ಶೋಧನೆ, ಜನರಲ್ ಬಾಡಿ ಮೀಟಿಂಗ್‌ಗಳು ಕಾಲಕಾಲಕ್ಕೆ ಸರಿಯಾಗಿ ನಡೆದೇ ಇಲ್ಲ. ಇನ್ನು ಈ ಕಟ್ಟಡದ ವಿನ್ಯಾಸವನ್ನೊಮ್ಮೆ ನೋಡಬೇಕು. 90x50 ಅಳತೆಯ ನಿವೇಶನದ ಒಂದು ಕಡೆ ಅರವಿಂದ ಜತ್ತಿಯ ಮನೆ ಇದೆ. ಬಸವ ಸಮಿತಿಯ ಈ ನಾಯಕನ ಮನೆಗೆ ಗಾಳಿ-ಬೆಳಕಿನ ತೊಂದರೆಯಾಗಬಾರದೆಂದು ಅಗತ್ಯಕ್ಕಿಂತ ಹೆಚ್ಚು ಜಾಗವನ್ನು (set back) ಆ ಕಡೆಗೆ ಖಾಲಿ ಬಿಡಲಾಗಿದೆ.



ವಾಗೀಶ್ ಪ್ರಸಾದ್

ಇದೆಲ್ಲಕ್ಕಿಂತ ಅತೀ ಅನುಮಾನಾಸ್ಪದ ಸಂಗತಿ ಏನೆಂದರೆ ಖಂಡ್ರೆ ಗ್ಯಾಂಗ್ ಬಳ್ಳಾರಿಯ ಗಣಿ ರೆಡ್ಡಿಗಳಿಂದ ವೀರಶೈವ ಭವನಕ್ಕೆಂದು 5 ಕೋಟಿಯಷ್ಟು ಹಣ ಕಿತ್ತಿದೆ. ಇದು ರಾಮನ ಲೆಕ್ಕಕ್ಕೆ ಸೇರಿರದ ಕೃಷ್ಣನ ಲೆಕ್ಕದ ಹಣ. ಯಡ್ಡಿ ರೆಕಮೆಂಡೇಶನ್ ಮೇರೆಗೆ ರೆಡ್ಡಿಗಳು 5 ಕೋಟಿ ಕೊಟ್ಟಿದ್ದಾರೇನೋ ಸರಿ. ಆದರೆ ಆ ಹಣ ಮುಂದಿನ ಬೀದರ್ ಲೋಕಸಭಾ ಎಲೆಕ್ಷನ್‌ನಲ್ಲಿ ಖರ್ಚಾಗುವ ಸಾಧ್ಯತೆಗಳಿವೆ. ಯಾಕೆಂದರೆ ವೀರಶೈವ ನಾಯಕ ಭೀಮಣ್ಣ ಖಂಡ್ರೆ ಬೀದರ್ ಪಾರ್ಲಿಮೆಂಟ್ ಕ್ಷೇತ್ರದ ಟಿಕೆಟ್‌ಗಾಗಿ ಈಗಾಗಲೇ ಲಾಬಿ ನಡೆಸುತ್ತಿದ್ದಾರೆ.


ವೀರಶೈವ ಭವನದ ನೆಪದಲ್ಲಿ ಖಂಡ್ರೆ ಎಲೆಕ್ಷನ್ ಫಂಡ್ ಎತ್ತುತ್ತಿದ್ದಾರೆಂಬ ಅನುಮಾನ ಮಹಾಸಭಾದವರಿಗೇ ಬಂದುಬಿಟ್ಟಿದೆ. ಕಟ್ಟಡ ನಿರ್ಮಾಣದ ಎಸ್ಟಿಮೇಟ್‌ಗಿಂತ ಸರಿಸುಮಾರು ಒಂದೂವರೆ ಕೋಟಿ ರೂಪಾಯಿಯಷ್ಟು ಜಾಸ್ತಿ ಖರ್ಚು ಮಾಡಿರುವ ಖಂಡ್ರೆ ಯಡ್ಡಿಯಿಂದ 1 ಕೋಟಿ, ಮಂತ್ರಿ ಉದಾಸಿಯಿಂದ 35 ಲಕ್ಷ ಕಿತ್ತಿದ್ದಾರೆ. ಈ ಖಂಡ್ರೆ ವೀರಶೈವ ಭವನವನ್ನು ತನ್ನ ಪಿತ್ರಾರ್ಜಿತ ಆಸ್ತಿ ಎಂಬಂತೆ ಮನಸ್ಸಿಗೆ ಬಂದಂತೆ ವ್ಯವಹರಿಸುತ್ತಿರುವುದಂತೂ ಕೆಲ ಲಿಂಗಾಯತರಲ್ಲಿ ಭಾರೀ ಅಸಹನೆ ಮೂಡಿಸಿಬಿಟ್ಟಿದೆ. ದುಡ್ಡು ಮಾಡುವುದರಲ್ಲಿ ನಿಸ್ಸೀಮನಾಗಿರುವ ಖಂಡ್ರೆ ವೀರಶೈವ ಭವನದ ಎರಡು ಫ್ಲೋರ್‌ಗಳನ್ನು ಈಗಾಗಲೇ ನಾಗಾರ್ಜುನ ಕನ್‌ಸ್ಟ್ರಕ್ಷನ್ ಕಂಪನಿಗೆ ಬಾಡಿಗೆಗೆ ಕೊಟ್ಟುಬಿಟ್ಟಿದ್ದಾನೆ. ಈ ಬಾಬ್ತಿನಲ್ಲೇ ತಿಂಗಳಿಗೆ 5 ಲಕ್ಷ ರೂ. ಬರುತ್ತಿದೆ. ಅದು ಹೋಗಲಿ ಈ ಕಟ್ಟಡದ ಕನಿಷ್ಠ ಒಂದು ಫ್ಲೋರ್‌ನಲ್ಲಾದರೂ ಒಂದಿಪ್ಪತ್ತು ರೂಂ ಕಟ್ಟಿಸಿ ರಾಜ್ಯದ ದೂರದೂರುಗಳಿಂದ ಬೆಂಗಳೂರಿಗೆ ಕೆಲಸದ ಮೇಲೆ ಬರುವ ಮಹಾಸಭಾದ ಮೆಂಬರ್‌ಗಳಿಗಾಗಿ ಮೀಸಲಿಡಬಹುದಿತ್ತಲ್ಲವಾ?

ಅಂತವರಿಂದ ದಿನಕ್ಕಿಷ್ಟು ಬಾಡಿಗೆ ಅಂತ ವಸೂಲಿ ಮಾಡಿದ್ದರೂ ಅದೂ ತಿಂಗಳಿಗೆ ಒಂದೆರಡು ಲಕ್ಷ ಬಾಡಿಗೆ ತರುತ್ತಿರಲಿಲ್ಲವೇ?

ಖಂಡ್ರೆಗೆ ಆ ಔದಾರ್ಯ ಎಲ್ಲಿಂದ ಬರಬೇಕು ಹೇಳಿ? ಚಂದಾ ಎತ್ತುವಾಗ ಅವರಿಗೆ ಬಡ ಲಿಂಗಾಯತರು ಬೇಕು. ಆದರೆ ಕೆಲಸ ಮುಗಿದ ಮೇಲೆ 'ಹೊಳೆ ದಾಟದ ಮೇಲೆ ಅಂಬಿಗನ...' ಎಂಬಂತೆ ಈ ಖಂಡ್ರೆ ವರಸೆಗಳಿವೆ. ನಾಗಾರ್ಜುನ ಕಂಪನಿಗೆ ನಿಗದಿ ಮಾಡಿರುವ ಬಾಡಿಗೆ ರೇಟಿನಲ್ಲೂ ಖಂಡ್ರೆ ಸಾಹೇಬರು ಡೀಲ್ ಕುದುರಿಸಿಕೊಂಡಿದ್ದಾರೆ. ಸದಾಶಿವನಗರದ ಪರಮ ಶ್ರೀಮಂತ ಏರಿಯಾದಲ್ಲಿ ಚದರಡಿ ಬಾಡಿಗೆ 200-300 ರೂ. ಇದೆ. ಆದರೆ 61 ರೂಪಾಯಿ ಕೊಡಿ ಸಾಕು ಅಂದು ಬಿಟ್ಟಿದ್ದಾರೆ ಖಂಡ್ರೆ.

ನಾಳಿದ್ದು ಫೆಬ್ರವರಿ 8ರ ಉದ್ಘಾಟನಾ ಸಮಾರಂಭದಲ್ಲಿ ಈ ಪ್ರಶ್ನೆಗಳನ್ನೆತ್ತಿ ಕೆಲವರು ಗಲಾಟೆ ನಡೆಸುವ ಸಾಧ್ಯತೆಗಳಿವೆ ಎನ್ನಲಾಗಿದೆ. ಹಾಗೆ ಆಕ್ರೋಶಗೊಂಡವರನ್ನು ಸಮಾಧಾನಪಡಿಸಲು ಕೆಲ ಮಠಾಧೀಶರು ಪ್ರಯತ್ನಿಸುತ್ತಿದ್ದಾರೆ. ■

ಕೊಟ್ಟವನು ಕೋಡಂಗಿ ಈಸ್ಕೊಂಡೋನು ಸಂಪಂಗಿ




ಜೈಲಲ್ಲಿರಬೇಕಾದ ಆಸಾಮಿಯೊಬ್ಬನಿಗೆ ಬಿಜೆಪಿ ಟಿಕೆಟ್ ಕೊಟ್ಟು ಎಮ್ಮೆಲ್ಲೇ ಮಾಡಿದರೆ ಬೇರೆ ಏನು ತಾನೇ ಆಗಲು ಸಾಧ್ಯ?

ಓರ್ವ ನಕಲಿ ದಲಿತ ನಾಯಕನಾಗಿ ಏನೆಲ್ಲಾ ಹಾವಳಿಯಿಡುತ್ತಿದ್ದನೋ ಶಾಸಕನಾದ ನಂತರವೂ ಅದನ್ನೇ ಮುಂದುವರಿಸಿದ ಸಂಪಂಗಿ ಕೊನೆಗೂ ಜೈಲುಪಾಲಾಗಿದ್ದಾನೆ. ತಾನು ಸೈಟೊಂದರ ವಿವಾದ ಬಗೆಹರಿಸುವುದಕ್ಕಾಗೇ ಐವತ್ತು ಸಾವಿರ ರೂಪಾಯಿ ನಗದು ಮತ್ತು ನಾಲ್ಕೂವರೆ ಲಕ್ಷದ ಚೆಕ್ ಪಡೆದಿದ್ದು, ತನ್ನ ವಿರುದ್ಧ ಕೆಜಿಎಫ್‌ನ ಎಸ್.ಪಿ. ಎಚ್.ಎಸ್. ವೆಂಕಟೇಶ್ ಪಿತೂರಿ ಮಾಡಿ ಲೋಕಾಯುಕ್ತಕ್ಕೆ ಹಿಡಿದುಕೊಟ್ಟಿದ್ದಾರೆ; ಇತ್ಯಾದಿಯಾಗಿ ಸಂಪಂಗಿ ಏನೆಲ್ಲಾ ಕತೆ ಕಟ್ಟಿದರೂ ನಂಬುವವರ್‍ಯಾರು?

ಏಕೆಂದರೆ ಸಂಪಂಗಿಯ ಹುಟ್ಟುಗುಣವೇ ವಶೀಲಿ ಬಾಜಿ ಮತ್ತು ಖೊಟ್ಟಿ ಅಟ್ರಾಸಿಟಿ ಕೇಸು. ಮೂಲತಃ ಬೊಮ್ಮನಹಳ್ಳಿ ಸಮೀಪದ ಹೊಂಗಸಂದ್ರದ ವೈ. ಸಂಪಂಗಿ ಇಲ್ಲಿಗೆ ಐದು ವರ್ಷದ ಹಿಂದೆಯೇ ಕೊಲೆ ಕೇಸೊಂದರಲ್ಲಿ ಜೈಲುಪಾಲಾಗಬೇಕಿತ್ತು, ಮಡಿವಾಳ ಪೊಲೀಸರನ್ನು ಬುಟ್ಟಿಗೆ ಹಾಕಿಕೊಂಡು ಬಚಾವಾದ. ಆ ಹೊತ್ತಿಗೆ ಈತನ ಗುರುವಾಗಿದ್ದವನು ಮಾವಳ್ಳಿ ಮುನಿಕೃಷ್ಣನೆಂಬ ನೆಲಗಳ್ಳ ಮತ್ತು ನಕಲಿ ದಲಿತವೀರ. ಈತ ಹುಟ್ಟುಹಾಕಿದ್ದೇ ಡಿಎಚ್‌ಎಎಸ್ ಅಂದರೆ ದಲಿತ ಹಿಂದುಳಿದ ಅಲ್ಪಸಂಖ್ಯಾತರ ಸಮಿತಿ!

ಪ್ರಾರಂಭದಲ್ಲಿ ಮಾವಳ್ಳಿ ಮುನಿಕೃಷ್ಣ ಮತ್ತು ಸಂಪಂಗಿ ಒಟ್ಟೊಟ್ಟಿಗೆ ರಿಯಲ್ ಎಸ್ಟೇಟ್ ದಂಧೆಯಲ್ಲಿದ್ದರು. ಇಬ್ಬರೂ ಸೇರಿಕೊಂಡೇ ಅಲಸೂರು ಎಸಿಪಿಯಾಗಿದ್ದ ಸಂಗ್ರಾಂಸಿಂಗ್ ಮೇಲೆ ಅಟ್ರಾಸಿಟಿ ಕೇಸು ಮಾಡಿ ದಲಿತ ಹೆಂಗಸೊಬ್ಬಳ ಸೈಟು ಹೊಡೆದರು. ಹಂಚಿಕೆಯ ವಿಷಯದಲ್ಲಿ ಇಬ್ಬರಿಗೂ ಜಗಳವಾಯಿತು. ಮುಂದೆ ಸಂಪಂಗಿ ತನ್ನದೇ ಪ್ರತ್ಯೇಕ ದಲಿತ ಸಂಘಟನೆಯೊಂದನ್ನು ಹುಟ್ಟುಹಾಕಿ ಅದಕ್ಕೆ ಕೆಡಿಎಚ್‌ಎಎಸ್ ಅಂದರೆ ಕರ್ನಾಟಕ ದಲಿತ ಹಿಂದುಳಿದ ಅಲ್ಪಸಂಖ್ಯಾತರ ಸಮಿತಿ ಎಂಬ ಹೆಸರಿಟ್ಟು ಅದಕ್ಕೆ ತಾನೇ ಅಧ್ಯಕ್ಷನಾದ.

ಅಲ್ಲಿಯ ತನಕ ಸೆಕೆಂಡ್ ಹ್ಯಾಂಡ್ ಚೇತಕ್ ಸ್ಕೂಟರಿನಲ್ಲಿ ಓಡಾಡಿಕೊಂಡಿದ್ದ ಸಂಪಂಗಿಗೆ ಹಳೆಯದೊಂದು ಜೀಪ್ ಕೊಡಿಸಿಕೊಟ್ಟು ಕೈಹಿಡಿದವನು ಹಾಲಿ ಬೊಮ್ಮನಹಳ್ಳಿಯ ಶಾಸಕ ಮತ್ತು ಹಳೇ ಲ್ಯಾಂಡ್ ರಾಬರ್ ಸತೀಶ್ ರೆಡ್ಡಿ. ಆ ಕಾಲಕ್ಕೆ ಬೊಮ್ಮನಹಳ್ಳಿ ಸುತ್ತಮುತ್ತ ದಲಿತರ ಜಮೀನು ದೋಚುತ್ತಿದ್ದ ಕಿಲಾಡಿ ಜೋಡಿಗಳಾದ ಸತೀಶ್ ರೆಡ್ಡಿ ಮತ್ತು ಕೇಶವ ರೆಡ್ಡಿ ಎಲ್ಲೆಲ್ಲಿ ದಲಿತರ ಮೇಲೆ ಗೂಂಡಾಗಿರಿಗಿಳಿಯುತ್ತಾರೋ ಅಲ್ಲಿ ದಲಿತರ ಪರವಹಿಸಿದಂತೆ ವೀರಾವೇಶದ ನಾಟಕವಾಡುತ್ತಿದ್ದವನು ಸಂಪಂಗಿ.



ಸತೀಶ್ ರೆಡ್ಡಿ

ಮೇಲುನೋಟಕ್ಕೆ ದಲಿತರ ಬೆಂಬಲಕ್ಕೆ ನಿಂತವನಂತೆ ನಟಿಸಿ ಒಳಗೊಳಗೇ ಸತೀಶ್ ರೆಡ್ಡಿ-ಕೇಶವ ರೆಡ್ಡಿ ಜೋಡಿಯ ಗೂಂಡಾಗಿರಿಗೆ ನೆರವಾಗುತ್ತಿದ್ದ ಸಂಪಂಗಿಯನ್ನು ಓರ್ವ ದಲಿತನಾಯಕನಂತೆ ಬೆಳೆಸಿದ್ದೇ ಭೂಕಂಟಕ ಸತೀಶ್ ರೆಡ್ಡಿ. ಮತ್ತೊಂದೆಡೆ ಬೊಮ್ಮನಹಳ್ಳಿ, ಸರ್ಜಾಪುರ, ಹೊಸೂರು ರಸ್ತೆ, ಕೊನೇನ ಅಗ್ರಹಾರ ಭಾಗದ ಸುಪಾರಿ ಹಂತಕ ಜೆಸಿಬಿ ನಾರಾಯಣ ಎಂಬ ಪಾತಕಿಗೆ ಇದೇ ಸಂಪಂಗಿ ಭಟ್ಟಂಗಿಯಂತಿದ್ದ. ಬೇಗೂರು ಗ್ರಾಮ ಪಂಚಾಯ್ತಿಯ ಅಧ್ಯಕ್ಷರ ಆಯ್ಕೆಗೆಂದು ಬಹುಪಾಲು ಪಂಚಾಯ್ತಿ ಸದಸ್ಯರನ್ನೆಲ್ಲ ರೌಡಿ ಜೆಸಿಬಿ ನಾರಾಯಣನೇ ಎತ್ತಾಕಿಕೊಂಡು ಬಂದು ದೇವಸ್ಥಾನವೊಂದರಲ್ಲಿ ಕೂಡಿಟ್ಟಿದ್ದರ ವಿರುದ್ಧ ನಡೆದ ಪೊಲೀಸ್ ದಾಳಿಯಲ್ಲಿ ಜೆಸಿಬಿ ನಾರಾಯಣನ ಜೊತೆ ಸಂಪಂಗಿಯೂ ಸಿಕ್ಕಿಬಿದ್ದಿದ್ದ.

ಬರುಬರುತ್ತ ಬೆಂಗಳೂರಿನ ಅಪಾಯಕಾರಿ

ಮಹಾಸಭಾದೊಳಗೆ ಯಡ್ಡಿ ಫ್ಯಾಮಿಲಿ ಕಂಟ್ರೋಲ್

ಇಲ್ಲಿಯವರೆಗೂ ವೀರಶೈವ ಮಹಾಸಭಾದ ವ್ಯವಹಾರದಲ್ಲಿ ತಲೆಹಾಕಿರದಿದ್ದ ಯಡ್ಡಿ ಈಗ ತನ್ನ ಕುಟುಂಬದವರನ್ನು ತಂದು ಕೂರಿಸುತ್ತಿದ್ದಾರೆ. ಯಡ್ಡಿಯ ಬೀಗತ್ತಿ ವಿನೋದ ನಟರಾಜ್‌ಗೆ ಈಗ ವೀರಶೈವ ಮಹಾಸಭಾದ ಮಹಿಳಾ ಘಟಕದ ಗೌರವಾಧ್ಯಕ್ಷೆ ಸ್ಥಾನ ನೀಡಲಾಗಿದೆ. ಈಕೆಯ ಮಗ ಸೋಹನ ಕುಮಾರ್ ಯಡ್ಡಿ ಮಗಳು ಉಮಾದೇವಿಯ ಗಂಡ. ಅಷ್ಟೇ ಅಲ್ಲ ವರ್ಗಾದಂಥೆ, ರೋಲ್‌ಕಾಲ್ ಮೂಲಕ ಹೊಟ್ಟೆ ಹೊರೆದುಕೊಳ್ಳುತ್ತಿರುವ ಇದೇ ಸೋಹಾನ್‌ನನ್ನು ಯುವ ಘಟಕದ ಕಾರ್ಯದರ್ಶಿಯಾಗಿ ಕೂರಿಸಲಾಗಿದೆ. ಈ ಘಟಕದ ಅಧ್ಯಕ್ಷ ಚೌಕಿಮಠ ಎಂಬಾತ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಿದ್ದಾನೆ. ಯಡ್ಡಿಯ ಇನ್ನೊಬ್ಬ ಮಗಳು ಅರುಣಾ ಕೂಡ ಮಹಿಳಾ ಘಟಕದೊಳಗೆ ತೂರಿಕೊಂಡಿದ್ದಾರೆ.

ಇಲ್ಲೊಂದು ತಮಾಷೆಯೂ ಇದೆ. ಎಚ್.ಕೆ. ಪಾಟೀಲ್ ರೆಡ್ಡಿ ಲಿಂಗಾಯತರಾದ ಕಾರಣ ಕಮ್ಮ ಜಾತಿಯವರೆಂದು ವೀರಶೈವ ಮಹಾಸಭಾದೊಳಗೆ ಸೇರಿಸುತ್ತಿಲ್ಲ, ಆದರೆ ಈ ಯಡ್ಡಿ ಲಿಂಗಾಯತರೊಳಗೆ ಗಾಣಿಗ ಉಪ ಜಾತಿಯವರು. ಅಂದರೆ ಪಂಚಮ, ಆರಾಧ್ಯ, ಪಂಚಮಸಾಲಿ ಮುಂತಾದ ಮೇಲ್ವರ್ಜೆಯವರೆಂಬ ಅಹಂಕಾರ ಇರುವವರು ಲಿಂಗಾಯತರನ್ನೇ ಸಮಾನರೆಂದು ಪರಿಗಣಿಸುವುದಿಲ್ಲ.

ಆದರೂ ಯಡ್ಡಿ ಫ್ಯಾಮಿಲಿಗೆ ಇಷ್ಟೊಂದು ಮರ್ಯಾದೆ, ಸ್ಥಾನಮಾನ ಯಾಕೆ ಸಿಗುತ್ತಿದೆ ಗೊತ್ತೆ?

ಈಗ ಯಡ್ಡಿ ಹತ್ತಿರ ಅಧಿಕಾರ ಮತ್ತು ಹಣ ಎರಡೂ ಇದೆಯಲ್ಲ..! ■

ಗ್ರೇಟ್ ಎಸ್ಕೇಪ್

ರೇಗನ್ ಎಂಬಾತನ ಮೇಲಿದ್ದ ಹಲ್ಲೆ ಆರೋಪ ಸಾಬೀತಾಗಿ ಆಗ ತಾನೇ ಆತನಿಗೆ ಎರಡು ವರ್ಷಗಳ ಸೆರೆವಾಸವನ್ನು ನ್ಯಾಯಾಧೀಶರು ಘೋಷಿಸಿದ್ದರು. ಅದೇ ದಿನ, ಕಾರ್ ಒಂದನ್ನು ಕದ್ದಿದ್ದಕ್ಕಾಗಿ ನ್ಯಾಯಾಲಯವು ಟೆರನಾರ ಎಂಬಾತನಿಗೆ ಜೈಲುವಾಸ ಶಿಕ್ಷೆಯನ್ನು ವಿಧಿಸಿತ್ತು.

ಅವರಿಬ್ಬರನ್ನು ಒಂದೇ ಕೋಳದೊಂದಿಗೆ ಬಂಧಿಸಿದ ಪೊಲೀಸರು ಅವರನ್ನು ಕಾರಾಗೃಹಕ್ಕೆ ಕರೆದುಕೊಂಡು ಹೋಗಲು ಅಣಿಯಾದರು. ಆದರೆ ಆ ಕ್ಷಣ ರೇಗನ್ ಮತ್ತು ಟೆರನಾರನಿಗೆ ಏನನ್ನಿಸಿತೋ? ಇಬ್ಬರು ಒಮ್ಮೆಲೆ ಓಡತೊಡಗಿದರು. ಅವರನ್ನು ತಡೆಯಲು ಪೊಲೀಸರು ಅವರ ಬೆನ್ನುಹತ್ತಿದರು. ಆದರೆ ಪೊಲೀಸರಿಗಿಂತ ಜೋರಾಗಿ ಓಡುತ್ತಿದ್ದ ರೇಗನ್ ಮತ್ತು ಟೆರನಾರ ಜೋಡಿ ಇನ್ನೇನು ತಪ್ಪಿಸಿಕೊಂಡೇ ಬಿಟ್ಟಿತು ಎನ್ನುವಾಗ.....

ಅವರಿಬ್ಬರ ಮುಂದೆ ರಸ್ತೆ ಬದಿಯ ವಿದ್ಯುತ್ ಕಂಬವೊಂದು ಎದುರಾಯಿತು. ಆಗ ರೇಗನ್ ಕಂಬದ ಒಂದು ಬದಿ, ಟೆರನಾರ ಅದೇ ಕಂಬದ ಇನ್ನೊಂದು ಬದಿ ಹಿಡಿದರು. ಆದರೆ ಅವರನ್ನು ಪರಸ್ಪರ ಬಂಧಿಸಿದ್ದ ಕೋಳ ಅಡ್ಡಬಂದಿತು. ಅವರಿಬ್ಬರು ಎಷ್ಟು ವೇಗವಾಗಿ ಓಡುತ್ತಿದ್ದರೆಂದರೆ ಅಡ್ಡಬಂದ ಕಂಬ ಮತ್ತು ಕೋಳದಿಂದಾಗಿ ಅವರು ಪರಸ್ಪರ ಡಿಕ್ಕಿಹೊಡೆದುಕೊಂಡು ನೆಲಕ್ಕುರುಳಿದರು!

ಅದೆಂತಹ ಸಖತ್ ಡಿಕ್ಕಿಯಾಗಿತ್ತೆಂದರೆ ಅದರಿಂದ ಅವರು ಚೇತರಿಸಿಕೊಳ್ಳುತ್ತಿರುವಾಗಲೇ ಪೊಲೀಸರು ಬಂದು ಅವರನ್ನು ಮತ್ತೆ ತಮ್ಮ ವಶಕ್ಕೆ ತೆಗೆದುಕೊಂಡರು. ಅವರಿಬ್ಬರಿಗೆ ಈಗಾಗಲೇ ನೀಡಿದ್ದ ಶಿಕ್ಷೆಯನ್ನು ಈ ಪ್ರಕರಣದ ನಂತರ ನ್ಯಾಯಾಲಯವು ಹೆಚ್ಚಿಸಿತು.

ಇವರಿಬ್ಬರ ಈ ಪಲಾಯನ ಯತ್ನವನ್ನು ಪೊಲೀಸ್ ಅಧಿಕಾರಿಯೊಬ್ಬ ವರ್ಣಿಸಿದ್ದು "ಖಂಡಿತವಾಗಿಯೂ ಇದು ಗ್ರೇಟ್ ಎಸ್ಕೇಪ್ ಅಲ್ಲವೇ ಅಲ್ಲ" ಎಂದು!

ಪ್ರತಿಮೆಯಾದ ಬೂಟು!

ಅಮೆರಿಕದ ಮಾಜಿ ಅಧ್ಯಕ್ಷ ಜಾರ್ಜ್ ಬುಷ್‌ನತ್ತ ತನ್ನ ಬೂಟ್ ಎಸೆದು ಪ್ರತಿಭಟಿಸಿದ ಇರಾಕಿ ಪತ್ರಕರ್ತ ಮುಂತದರ್ ಅಲ್ ಜೈದಿ ಈಗಾಗಲೇ ಹಲವಾರು ದೇಶದಲ್ಲಿ ಹೀರೋ ಆಗಿದ್ದಾನೆ. ಈಗ ಆತ ಒಂದು ಕಲಾಕೃತಿಗೂ ಸ್ಫೂರ್ತಿಯಾಗಿದ್ದಾನೆ.



ಇತ್ತೀಚೆಗೆ ಇರಾಕಿನ ಮಾಜಿ ಅಧ್ಯಕ್ಷ ಸದ್ದಾಂ ಹುಸೇನನ ತವರೂರಾದ ಟಿಕ್ರಿಟ್‌ನಲ್ಲಿ ಒಂದು ಸೋಫಾ ಅಷ್ಟು ದೊಡ್ಡದಾದ, ತಾಮ್ರದಲ್ಲಿ ಮಾಡಲಾಗಿರುವ ಒಂದು ಬೂಟಿನ ಪ್ರತಿಮೆಯನ್ನು ಉದ್ಘಾಟಿಸಲಾಯಿತು. ಆ ಬೂಟಿನ ಒಳಗಿಂದ ಗಿಡಗಳು ಬೆಳೆಯುತ್ತಿದ್ದು ಅದರ ಅಡಿ ಅಲ್ ಜೈದಿಯನ್ನು ಹಾಡಿ ಹೊಗಳುವ ಪುಟ್ಟ ಪದ್ಯವನ್ನೂ ಕೆತ್ತಲಾಗಿದೆ.

ಸ್ತನ ವಾಪಸ್ಸು ಕೊಡು ಎಂದ ಭೂಪ

28 ವರ್ಷದ ಹರೆಯದ ಥಾಮಸ್ ಆಕೆಯನ್ನು ತುಂಬಾ ಪ್ರೀತಿಸುತ್ತಿದ್ದ. ಎಷ್ಟು ಪ್ರೀತಿಸುತ್ತಿದ್ದನೆಂದರೆ ಆಕೆಯ ಸ್ತನಗಳ ಗಾತ್ರವನ್ನು ಹೆಚ್ಚಿಸುವ ದುಬಾರಿ ಆಪರೇಷನ್‌ಗೆ ತಾನು ಕಷ್ಟಪಟ್ಟು ದುಡಿದಿದ್ದ ಹಣವನ್ನೆಲ್ಲ ನೀಡಿದ್ದ.

ಆದರೆ ಆಪರೇಷನ್ ನಂತರ ಆಕೆ ಥಾಮಸ್‌ಗೆ ಕೈಕೊಟ್ಟಳು. ಇನ್ನು ಮುಂದೆ ನನಗೂ, ನಿನಗೂ ಯಾವ ಸಂಬಂಧವೂ ಇಲ್ಲ ಎಂದಳು. ಸಹಜವಾಗಿಯೇ ಥಾಮಸ್ ದುಃಖಭರಿತನಾದ. ಮಾತ್ರವಲ್ಲ "ನೀನು ನನ್ನೊಂದಿಗೆ ಇರದಿದ್ದರೂ ಪರವಾಗಿಲ್ಲ, ಆದರೆ ನಾನು ಕೊಡಿಸಿದ ನಿನ್ನ ಸ್ತನಗಳನ್ನು ವಾಪಸ್ ಕೊಡು" ಎಂದು ಪಟ್ಟು ಹಿಡಿದ. ಆದರೆ ಆಕೆ ಅದಕ್ಕೆ ಸಿದ್ಧಳಿರಲಿಲ್ಲ.

ಅವಳ ಬಗ್ಗೆ ಥಾಮಸ್‌ಗೆ ಇನ್ನಿಲ್ಲದ ಕೋಪ ಬಂತು. ಹೇಗಾದರೂ ಮಾಡಿ ಆಕೆಯನ್ನು ಆ ಸ್ತನಗಳಿಂದ ಬೇರ್ಪಡಿಸಬೇಕೆಂದು ನಿರ್ಧರಿಸಿದ. ಅದಕ್ಕೊಂದು ಒಂದು ಯೋಜನೆಯನ್ನು ರೂಪಿಸಿದ. ಒಂದು ದಿನ ಆಕೆಯ ಮೇಲೆರಗಿದ ಥಾಮಸ್ ಅವಳ ಎದೆಯನ್ನು ಚಾಕುವಿನಿಂದ ಆರು ಬಾರಿ ಇರಿದ.

ಆದರೆ ಆಕೆ ಹೇಗೋ ತನ್ನ ಪ್ರಾಣ ಉಳಿಸಿಕೊಂಡಳಲ್ಲದೆ, ಥಾಮಸ್‌ನ ದಾಳಿಯಿಂದಾಗಿ ಪಂಕ್ಚರ್ ಆಗಿದ್ದ ಸ್ತನಗಳ 'ಬ್ಯಾಗ್'ಗಳನ್ನು ವೈದ್ಯರು 'ರಿಪೇರಿ' ಮಾಡಿದರು.

ಥಾಮಸ್ ಮಾತ್ರ ಈಗ ಜೈಲು ಕಂಬಿ ಎಣಿಸುತ್ತಿದ್ದಾನೆ!

ವಿಚಿತ್ರ ಜಗತ್ತು

ಗೂಗಲ್ ಮತ್ತು ಗಾಂಜಾ ಗ್ಯಾಂಗ್

ಅಂತರಜಾಲದಲ್ಲಿ ಈಗ ಗೂಗಲ್ ಅರ್ಥ್ ಎಂಬ ಸರ್ಚ್ ಎಂಜಿನ್ ಲಭ್ಯವಿದೆ. ಈ ಎಂಜಿನ್ ಮೂಲಕ ನಾವು ವಾಸಿಸುವ ರಸ್ತೆ ಮಾತ್ರವಲ್ಲ, ನಮ್ಮ ಮನೆಯನ್ನೂ ನೋಡಬಹುದು. ಅಂದಹಾಗೆ ಈ ಗೂಗಲ್ ಅರ್ಥ್ ಅನ್ನು ಬಳಸಿ ಇತ್ತೀಚೆಗೆ ಸ್ವಿಟ್ಜರ್ಲೆಂಡ್‌ನ ಪೊಲೀಸರು ಗಾಂಜಾ ಮಾರಾಟಗಾರರ ಜಾಲವೊಂದನ್ನು ಬೇಧಿಸಿದ್ದಾರೆ.

ಕಳೆದ ಐದಾರು ವರ್ಷಗಳಿಂದ ಸ್ವಿಟ್ಜರ್ಲೆಂಡ್‌ನಲ್ಲಿ ಗುಂಪೊಂದು ಬೃಹತ್ ವ್ಯವಹಾರವೊಂದನ್ನು ನಡೆಸುತ್ತಿತ್ತು. ಆ ಗುಂಪಿನ ವಾರ್ಷಿಕ ಆದಾಯ ಹತ್ತು ಮಿಲಿಯನ್ ಫ್ರಾಂಕ್‌ನಷ್ಟು. ಆ ಆದಾಯ ಗಳಿಸಲು ಅವರು ಹತ್ತು ಟನ್ ಗಾಂಜಾ ಮಾರಿದ್ದರು!

ಈ ಗ್ಯಾಂಗ್‌ನ ಅವ್ಯವಹಾರ ಪೊಲೀಸರ ಗಮನಕ್ಕೆ ಬಂದು ತನಿಖೆಯನ್ನು ಪ್ರಾರಂಭಿಸಿದರು. ಈ ಗ್ಯಾಂಗ್ ಗಾಂಜಾ ಮಾರಾಟ ಮಾಡುತ್ತಿದೆ ನಿಜ, ಆದರೆ ಅದಕ್ಕೆ ಗಾಂಜಾ ಎಲ್ಲಿಂದ ಸಿಗುತ್ತದೆ ಎಂಬುದೇ ಪೊಲೀಸರನ್ನು ಕಾಡುತ್ತಿದ್ದ ಪ್ರಶ್ನೆ. ಆಗ ಗ್ಯಾಂಗಿನ ಸದಸ್ಯನೊಬ್ಬನ ವಿಳಾಸವನ್ನು ಹುಡುಕಲು ಪ್ರಾರಂಭಿಸಿದಾಗ ಗೂಗಲ್ ಅರ್ಥ್ ಮೂಲಕ ಅವರಿಗೆ ಆತನ ಜೋಳದ ಗದ್ದೆ ಕಾಣಿಸಿತು. ಕಂಪ್ಯೂಟರ್ ಮೇಲಿನ ಚಿತ್ರವನ್ನು ಕ್ಲೋಸ್‌ಅಪ್‌ನಲ್ಲಿ ನೋಡಿದಾಗ ಆ ಜೋಳದ ಗದ್ದೆ ನಡುವೆ ಎರಡು ಎಕರೆ ಪ್ರದೇಶದಲ್ಲಿ ಬೆಳೆದಿದ್ದ ಗಾಂಜಾ ಗಿಡಗಳೂ ಕಂಡುಬಂದವು. ಗ್ಯಾಂಗಿನ 16 ಸದಸ್ಯರನ್ನು ಬಂಧಿಸಿದ ಪೊಲೀಸರು ಒಂದು ಟನ್ ಗಾಂಜಾ ಮತ್ತು 780,000 ಡಾಲರ್‌ಗಳನ್ನು ವಶಪಡಿಸಿಕೊಂಡರು.

ಕಿಡಿಗೇಡಿಗಳು ಅಂತರಜಾಲವನ್ನು ತಮ್ಮ ದುರುದ್ದೇಶಗಳಿಗೆ ಬಳಸಿಕೊಳ್ಳುತ್ತಿದ್ದರೆ ಈ ಪೊಲೀಸರು ತಮ್ಮ ಕೆಲಸಕ್ಕೆ ತಂತ್ರಜ್ಞಾನವನ್ನು ಉಪಯೋಗಿಸುತ್ತಿದ್ದಾರೆ ಎಂಬುದಕ್ಕೆ ಇದೊಂದು ನಿದರ್ಶನ!


ಲೋಕಾಯುಕ್ತರ ಬಲೆಗೆ ಸಿಲುಕಿದ ಸಂಪಂಗಿ

ಸುಪಾರಿ ಹಂತಕನಾಗಿ ರೂಪುಗೊಂಡ ಪಾತಕಿ ಸಿಬಿ ನಾರಾಯಣನ ಮೂಲಕ ಕೆಜಿಎಫ್ ಶಾಸಕ ಸಂಪಂಗಿ ಮತ್ತು ಬೊಮ್ಮನಹಳ್ಳಿ ಎಮ್ಮೆಲ್ಲೇ ಸತೀಶ್ ರೆಡ್ಡಿಯಂಥ ಬಜೆಪಿ ಶಾಸಕರು ಮಾಡಿಸಿದ ಹತ್ಯೆ ಮತ್ತು ಲ್ಯಾಂಡ್ ರಾಬರಿಗಳ ಬಗ್ಗೆ ಪ್ರತ್ಯೇಕ ತನಿಖೆಯಾಗಬೇಕು. ಮತ್ತು ಮಡಿವಾಳ, ಬೊಮ್ಮನಹಳ್ಳಿ ಸುತ್ತಮುತ್ತ ಸಂಪಂಗಿ ಮುಂಡಾಮೋಚಿದ ದಲಿತರ ಸೊತ್ತಿನ ಲೆಕ್ಕ ಹಾಕುತ್ತಾ ಹೋದರೆ ಅದೇ ಭಯಂಕರ ವೃತ್ತಾಂತವಾಗುತ್ತದೆ.

ಸಂಪಂಗಿಯ ಇಂಥ ದಲಿತ ಕುಲಘಾತುಕ ಪ್ರವೃತ್ತಿಯೇ ಆತನನ್ನು ಬಜೆಪಿಗೆ ಸೆಳೆದು ತಂದಿದ್ದು. ಅದು ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಕಾಲ. ಉಪಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ತನ್ನ ಮಂತ್ರಿ ಛೇಂಬರಿನಲ್ಲಿದ್ದ ಅಂಬೇಡ್ಕರ್ ಭಾವಚಿತ್ರವನ್ನು ಕಿತ್ತೆಸೆದಿದ್ದರ ವಿರುದ್ಧ ರಾಜ್ಯಾದ್ಯಂತ ದಲಿತ ಸಂಘಟನೆಗಳು ಬೀದಿಗಿಳಿದವು. ಆಗ ಇದನ್ನೇ ಮುಂದಿಟ್ಟುಕೊಂಡು ಡಿ.ಎಸ್. ವೀರಯ್ಯ ಮತ್ತು ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಜೊತೆ ಕೈಜೋಡಿಸಿ ಯಡಿಯೂರಪ್ಪ ಪರವಹಿಸಿ ಪ್ರತಿಭಟಿಸುತ್ತಿದ್ದ ದಲಿತ ಸಂಘಟನೆಗಳ ವಿರುದ್ಧವೇ ತಿರುಗಿಬಿದ್ದವನು ಸಂಪಂಗಿ.

ಅಂಬೇಡ್ಕರ್ ಭಾವಚಿತ್ರ ಕಿತ್ತೆಸೆದು ಅವಮಾನಿಸಿದ ಯಡ್ಡಿಯನ್ನೇ ದಲಿತ ಸಂಘಟನೆಗಳ ವಿರುದ್ಧ ನಿಂತು ಬೆಂಬಲಿಸಿದ ಸಂಪಂಗಿಗೆ ಆತನ ದಲಿತ ದ್ರೋಹಕ್ಕಾಗಿ ಬಜೆಪಿ ಕೊಟ್ಟ ಭಿಕ್ಷೆಯೇ ಕೆಜಿಎಫ್‌ನ ಬಜೆಪಿ ಟಿಕೆಟ್. ಅಣ್ಣಾಡಿಎಂಕೆಯ ಭಕ್ತವತ್ಸಲಂ ಮತ್ತು ರಿಪಬ್ಲಿಕನ್ ಪಾರ್ಟಿಯ ರಾಜೇಂದ್ರನ್ ಮಧ್ಯೆಯೇ ತಟ್ಟಾಡುತ್ತಿದ್ದ ಕೆಜಿಎಫ್ ಮೊದಲ ಬಾರಿಗೆ ಬಜೆಪಿಯ ಸಂಪಂಗಿಯಂಥ ಮೂರನೇ ಆಸಾಮಿಯೊಬ್ಬನನ್ನು ಎಮ್ಮೆಲ್ಲೇಯಾಗಿ ಗೆಲ್ಲಿಸಿದ್ದು ಕೂಡ ಹೊಸ ನಿರೀಕ್ಷೆಯಿಂದಲೇ.

ಆದರೆ ಗೆದ್ದ ಸಂಪಂಗಿ ಭಕ್ತನ್ ಮತ್ತು ರಾಜೇಂದ್ರನ್‌ಗಿಂತಲೂ ಲಜ್ಜೆಗೆಟ್ಟು ಹಾವಳಿಗಿಳಿದ. ಹೆರಿಗೆ ಆಸ್ಪತ್ರೆಯನ್ನೇ ತನ್ನ ಅಡ್ಡೆಯನ್ನಾಗಿ ಮಾಡಿಕೊಂಡ. ತನಗೆ ಸೈಡು ಕೊಡಲಿಲ್ಲವೆಂದು ಕೆಎಸ್ಸಾರ್ಟಿಸಿ ಬಸ್ಸೊಂದನ್ನು ನಡುರಸ್ತೆಯಲ್ಲೇ ಅಡ್ಡಗಟ್ಟಿ ಅದರ ಡ್ರೈವರ್ ಮೇಲೆ ಹಲ್ಲೆ ಮಾಡಿದ. ಸಂಪಂಗಿ ಶಿಷ್ಯರದೇ ಪುಂಡರ ಗ್ಯಾಂಗೊಂದು ಕಂಡಕಂಡ ಕಚೇರಿಗಳಿಗೆ ನುಗ್ಗಿ ರೋಲ್‌ಕಾಲ್‌ಗಿಳಿಯಿತು. ಒಂದಷ್ಟು ಮಂದಿ ಕಿಲಾಡಿ ಪೊಲೀಸರಿಂದ ಲಂಚ ತಿಂದು ಆಯಕಟ್ಟಿನ ಹುದ್ದೆಗೆ ತಂದ ಸಂಪಂಗಿ ಅಂಥ ಪೊಲೀಸರನ್ನಿಟ್ಟುಕೊಂಡೇ ಲ್ಯಾಂಡ್ ಡೀಲು, ಸ್ಕ್ರ್ಯಾಪ್ ಕಳ್ಳತನದ ಉತ್ಪತ್ತಿಗೆ ಕೈಯಿಟ್ಟ.

ಇದರ ಫಲವೇ ಆಂಡರ್‌ಸನ್‌ಪೇಟೆಯ ಫಾರೂಕ್ ಮತ್ತು ನಯಾಜ್ ನಡುವೆ ಹುಟ್ಟಿಕೊಂಡ ಸೈಟು ರಗಳೆ. ಹಾಗೆ ನೋಡಿದರೆ ಆಂಡರ್‌ಸನ್‌ಪೇಟೆಯಲ್ಲಿದ್ದ 30x120 ನಿವೇಶನಕ್ಕೆ ಫಾರೂಕ್‌ನೇ ಅಸಲೀ ಮಾಲೀಕ. ಆದರೆ ನಯಾಜ್ ಸಂಪಂಗಿಯಿಂದ ಲ್ಯಾಂಡ್ ತರಲೆಯ ಪಾಠ ಕಲಿತಿದ್ದ. ನಯಾಜ್ ನಕಲಿ ದಾಖಲೆ ಸೃಷ್ಟಿಸಿ ವಿನಾಕಾರಣ ಕ್ಯಾತೆ ತೆಗೆದ. ಪದೇಪದೇ ಫಾರೂಕ್‌ನ ಸೈಟಿಗೆ ನುಗ್ಗಿ ಹಾವಳಿಯಿಡಲಾರಂಭಿಸಿದ. ಕೆಜಿಎಫ್‌ನ ಪೊಲೀಸ್ ವರಿಷ್ಠ ವೆಂಕಟೇಶ್‌ಗೆ ನಯಾಜ್ ಮೂಲಕ ಸಂಪಂಗಿ ಆಡುತ್ತಿರುವ ಆಟ ಚೆನ್ನಾಗೇ ಗೊತ್ತಿತ್ತು. ಗೊತ್ತಿದ್ದೂ ಫಾರೂಕ್‌ನ ನೆರವಿಗೆ ನಿಂತಿದ್ದು ನ್ಯಾಯ ಸಹಜವಾಗಿತ್ತು. ಫಾರೂಕ್‌ನ ಸೈಟಿಗೆ ನುಗ್ಗಿ ತನ್ನ ಸಾಮಾನು ಸರಂಜಾಮು ಜೋಡಿಸಿ ಅದು ತನ್ನದೇ ಸೈಟೆಂದು ಕೋರ್ಟ್‌ನಿಂದ ತಡೆಯಾಜ್ಞೆ ತರುವುದು ನಯಾಜ್‌ನ ಹುನ್ನಾರವಾಗಿತ್ತು.

ಯಾವತ್ತು ಕೋರ್ಟ್ ತಡೆಯಾಜ್ಞೆ ನಯಾಜ್ ಪರ ಸಿಕ್ಕಿತೋ ಸಂಪಂಗಿಯೇ ತನ್ನ ಬಂಟನೊಬ್ಬನನ್ನು ಬಿಟ್ಟು 'ಐದು ಲಕ್ಷ ಕೊಟ್ಟರೆ ಸೈಟು ಬಿಟ್ಟುಕೊಡುತ್ತೇನೆ' ಎಂಬ ಡೀಲು ಶುರು ಹಚ್ಚಿಕೊಂಡಿದ್ದಾನೆ. ತನ್ನ ಸೈಟಲ್ಲದೇ ಹೋಗಿದ್ದರೆ ಫಾರೂಕ್ ಏಕೆ ಐದು ಲಕ್ಷ ಕೊಡುತ್ತೇನೆಂದು ಒಪ್ಪುತ್ತಿದ್ದ ಮತ್ತು ತನಗಾದ ಅನ್ಯಾಯದ ವಿರುದ್ಧ ಏಕೆ ಲೋಕಾಯುಕ್ತಕ್ಕೆ ದೂರು ಕೊಡುತ್ತಿದ್ದ?

ರಕ್ತಗತವಾಗಿ ಬಂದಿದ್ದ ಲ್ಯಾಂಡ್ ಡೀಲ್ ಬುದ್ಧಿಗೆ ತಕ್ಕಂಥೆಯೇ ಫಾರೂಕ್‌ನನ್ನು ತನ್ನ ಶಾಸಕರ ಭವನದ ಕೋಣೆಗೆ ಬರಹೇಳಿದ ಸಂಪಂಗಿಗೆ ಬಹುಶಃ ತನ್ನದೇ ಬಜೆಪಿ ಪಕ್ಷ ಅಧಿಕಾರದಲ್ಲಿರುವಾಗ ಯಾರೇನು ಮಾಡಲು ಸಾಧ್ಯ ಎಂಬ ಪಿತ್ತ ನೆತ್ತಿಗೇರಿತ್ತೇನೊ. ಸಣ್ಣದೊಂದು ನಾಚಿಕೆ ಕೂಡ ಇಲ್ಲದೇ ಫಾರೂಕ್ ಕೊಟ್ಟ ಐವತ್ತು ಸಾವಿರ ಮತ್ತು ನಾಲ್ಕೂವರೆ ಲಕ್ಷದ ಚೆಕ್ಕನ್ನು ಜೇಬಿಗಿಳಿಸಿದ್ದಾನೆ. ಅಲ್ಲಿಗೆ ಆತನ ಪಾಪದ ಕೊಡ ತುಂಬಿತು ಮತ್ತು ಲೋಕಾಯುಕ್ತರ ಕೈ ಆತನ ಮೇಲಿತ್ತು. ಜೈಲಲ್ಲಿರಬೇಕಾದವನೊಬ್ಬನನ್ನು ಎಮ್ಮೆಲ್ಲೇ ಮಾಡಿದ ಬಜೆಪಿಗೆ ಇದು ಕಾಲ ಕಲಿಸಿದ ಪಾಠವಲ್ಲದೇ ಮತ್ತೇನು?

■ ರಾ. ಸೋಮನಾಥ್



ಹಿಂದೂ ಹುಡುಗಿಯರ ರಕ್ಷಣೆಗಾಗಿ? ಕೀಚಕ ಸೇನೆ

ಮೊದಲೇ ಟೀವಿ ವರದಿಗಾರರನ್ನು ಬರ ಮಾಡಿಕೊಂಡು ಸಿಕ್ಕಸಿಕ್ಕ ಯುವತಿಯರನ್ನು ಹಿಡಿದು ಬಡಿದ ಶ್ರೀರಾಮ ಸೈನಿಕರು ಯುವತಿಯೊಬ್ಬಳ ಜುಟ್ಟು ಹಿಡಿದು ಗೋಡೆಗೆ ಕುಕ್ಕಿದ್ದು, ನೆಲಕ್ಕೆ ಕೆಡವಿ ತುಳಿದದ್ದು, ಹಿಡಿದು ಜಪಾಳಕ್ಕೆ ಹೊಡೆಯುತ್ತಿದ್ದ ದೃಶ್ಯಗಳಿಗೂ ಮಹಾಭಾರತದ ದ್ರೌಪದಿಯ ವಸ್ತ್ರಾಪಹರಣಕ್ಕೂ ಏನು ವ್ಯತ್ಯಾಸ? ಕನಿಷ್ಠ ದ್ರೌಪದಿಗಾದರೂ ಶ್ರೀಕೃಷ್ಣ ಪರಮಾತ್ಮನಿದ್ದ. ಆದರೆ ಶ್ರೀರಾಮ ಸೈನಿಕರ ಕೈಗೆ ಸಿಕ್ಕಿಬಿದ್ದ ಅಸಹಾಯಕ ಯುವತಿಯರ ಪಾಲಿಗೆ ಯಾರಿದ್ದರು? ರಾಮನ ಹೆಸರಲ್ಲಿ ಕೀಚಕ ವಿಕೃತಿ ಮೆರೆಯಲು ಈ ಪುಂಡರಿಗೆ ಲೈಸೆನ್ಸ್ ಕೊಟ್ಟವರ್ಯಾರು?

ರಾ. ಸೋಮನಾಥ್

ಮರ್ಯಾದಾ ಪುರುಷೋತ್ತಮ ಶ್ರೀರಾಮಚಂದ್ರನ ಗುಣಸಾಗರದ ಬಿಂದುವಿನಷ್ಟಾದರೂ ಸದ್ಗುಣವಿದ್ದಿದ್ದರೆ ಅದನ್ನು ಯಾರು ಬೇಕಾದರೂ ಶ್ರೀರಾಮಸೇನೆ ಎನ್ನಬಹುದಿತ್ತು. ಹಾಗಾದರೆ ಅದು ರಾವಣ ಸೇನೆಯಾ?



ಅಲ್ಲ; ಅದು ಕೀಚಕ ಸೇನೆ. ಅದಕ್ಕೆ ರಾವಣನ ಹೆಸರಿಟ್ಟು ಕರೆಯುವುದು ಕೂಡ ರಾವಣನಿಗೆ ಬಗೆದ ಅನ್ಯಾಯವಾಗುತ್ತದೆ. ಸೀತಾಮಾತೆಯನ್ನು ಕೊನೆತನಕ ಭಕ್ತಿಯಿಂದಲೇ ಕಂಡ ರಾವಣನೆಲ್ಲಿ? ಯಾರದೋ ಮನೆಯ ಹೆಣ್ಣುಮಕ್ಕಳ ಜುಟ್ಟು ಹಿಡಿದು ನೆಲಕ್ಕೆ ಕುಕ್ಕುವ ಈ ಪುಂಡರೆಲ್ಲಿ?

ಅವರ ಕಣ್ಣೇನಿದ್ದರೂ ಯುವತಿಯರ ಮೇಲೆಯೇ. 'ಹಿಂದೂ ಹುಡುಗಿಯರನ್ನು ಪಟಾಯಿಸುವುದೇ ಮುಸ್ಲಿಂ ಹುಡುಗರ ಗುರಿ. ಯಾರೇ ಹಿಂದೂ ಹುಡುಗಿಯೊಬ್ಬಳು ಮುಸ್ಲಿಂ ಯುವಕನೊಬ್ಬನ ಜೊತೆ ಮಾತಾಡಿದಳೆಂದರೆ ಅಂಥವಳನ್ನು ದನಕ್ಕೆ ಬಡಿದಂತೆ ಬಡಿಯಿರಿ. ಹಿಂದೂ ಯುವತಿಯರ ಮಾನ ಕಾಪಾಡುವುದಕ್ಕಾಗಿ ಯಾರ ಪ್ರಾಣ ಬೇಕಾದರೂ ತೆಗಿಯಿರಿ. ಅದು ದೇವತಾಕಾರ್ಯ. ಯಾರೇ ಹಿಂದೂ ಹುಡುಗಿ ನಟ ಶಾರುಖ್ ಖಾನ್, ಅಮೀರ್ ಖಾನ್, ಸಲ್ಮಾನ್ ಖಾನ್ ಫೋಟೋ ಇಟ್ಟುಕೊಂಡಿದ್ದಾಳೆಂದರೆ ಅಂಥವಳನ್ನು ಸೂ... ಅಂತಲೇ ಮುಖಕ್ಕೆ ಉಗಿಯಿರಿ. ಮುಸ್ಲಿಂ ಪುಂಡುಪೋಕರಿಗಳಿಂದ ಹಿಂದೂ ಹೆಣ್ಣುಮಕ್ಕಳನ್ನು ರಕ್ಷಿಸುವುದೇ ನಿಜವಾದ ಧರ್ಮಯುದ್ಧ....!"

ಶ್ರೀರಾಮಸೇನೆಯ ಕಾನೂನು ಸಲಹೆಗಾರ ದಿನಕರ್ ಶೆಟ್ಟಿ ಎಂಬಾತ ಹೀಗೆ ನೆರೆದ ಐವತ್ತಕ್ಕೂ ಹೆಚ್ಚು ಮಂದಿ ಮಂಗಳೂರಿನ ಯುವಕರನ್ನುದ್ದೇಶಿಸಿ ಮುಸ್ಲಿಂ ದ್ವೇಷ ಬಿತ್ತುತ್ತಿದ್ದರೆ ಅದನ್ನು ಕೇಳಿದವರ ಮನಸ್ಥಿತಿ ಏನಾಗಬೇಡ?



ಜನವರಿ 24 ರ ಭಾನುವಾರ ಸಂಜೆ ಮಂಗಳೂರಿನ ಬಲ್ಮಠದ 'ಅಮ್ನೇಶಿಯಾ ದಿ ಲಂಚ್' ಪಬ್ಬಿಗೆ ನುಗ್ಗಿ ಸಿಕ್ಕಸಿಕ್ಕ ಯುವತಿಯರನ್ನು ಅಟ್ಟಾಡಿಸಿದ ಪ್ರತಿಯೊಬ್ಬ ಶ್ರೀರಾಮ ಸೈನಿಕನ ಮನಸ್ಸಿನಲ್ಲಿದ್ದದ್ದು ಇದೇ ಸಿಟ್ಟು. ಯಾವ ಹಿಂದೂ ಹುಡುಗಿ ಜೀನ್ಸ್ ಧರಿಸಿ, ಪಬ್ಬು ದಿಸ್ಕೋ ಥೆಕ್ ಅಂತ ಸುತ್ತುತ್ತಾಳೋ ಅವಳು ಇವತ್ತಲ್ಲ ನಾಳೆ ಮುಸ್ಲಿಂ ಗಂಡಸಿನ ಪಾಲಾಗುತ್ತಾಳೆ. ಅಂಥವಳನ್ನು ಬೀದಿ ವೇಶ್ಯೆಗಿಂತಲೂ ಕೀಳೆಂದು ಬಗೆದು ಶಿಕ್ಷೆ ಕೊಡಬೇಕು. ಇದು ಸೋಕಾಲ್ಡ್ ಹಿಂದೂ ಉಗ್ರ ಸಂಘಟನೆ ಶ್ರೀರಾಮ ಸೇನೆ ವಿಶೇಷವಾಗಿ ಉಡುಪಿ, ಮಂಗಳೂರುಗಳಲ್ಲಿ ಹಾವಳಿಯಿಡುತ್ತಲೇ ಬಂದದ್ದರ ಮೂಲೋದ್ದೇಶ.

ಕರಾವಳಿಯುದ್ದಕ್ಕೂ ಬುಸುಗುಡುತ್ತಿರುವ ಭಜರಂಗ ದಳ, ಹಿಂದೂ ಯುವ ಸೇನೆ, ಹಿಂದೂ ಜಾಗರಣ ವೇದಿಕೆ, ಹಿಂದೂ ಸೇನೆ, ಶ್ರೀರಾಮ ಸೇನೆ ಮುಂತಾದ ಮತಭ್ರಾಂತ ಕೂಟಗಳ ಪೈಕಿ ಶ್ರೀರಾಮಸೇನೆಯ ಇತಿಹಾಸವೇ ಈ ಥರದ ಕೀಚಕ ಪ್ರವೃತ್ತಿಯ ಗಾಥೆಯಂತಿದೆ. ಇಲ್ಲಿಗೆ ಮೂರು ವರ್ಷದ ಹಿಂದೆ ಇದೇ ಶ್ರೀರಾಮ ಸೇನೆಯ ಅಧಿನಾಯಕ ಪ್ರಸಾದ ಅತ್ತಾವರ ಎಂಬಾತ ಮಂಗಳೂರಿನ ಐಸ್‌ಕ್ರೀಮ್ ಪಾರ್ಲರ್ ಒಂದಕ್ಕೆ ನುಗ್ಗಿ ಅಲ್ಲಿ ಐಸ್‌ಕ್ರೀಮ್ ತಿನ್ನುತ್ತಿದ್ದರೆಂಬ ಒಂದೇ ಕಾರಣಕ್ಕೆ ಮೂವರು ಕಾಲೇಜು ವಿದ್ಯಾರ್ಥಿನಿಯರನ್ನು ಹಿಡಿದುಬಡಿದಿದ್ದ.

ಅವತ್ತು ಹುಡುಗಿಯರ ಜೊತೆಗಿದ್ದ ಇಬ್ಬರು ಸಹಪಾಠಿಗಳು ಬದುಕುಳಿದಿದ್ದೇ ಹೆಚ್ಚು. ಆದಿ ಉಡುಪಿ ಬೆತ್ತಲೆ ಪ್ರಕರಣ, ಪದೇಪದೇ ಸಂಭವಿಸಿದ ಕೋಮು ಘರ್ಷಣೆಗಳು ಮತ್ತು ಗ್ಯಾಂಗ್‌ವಾರ್‌ಗಳು, ಮಧ್ಯೆಯೇ ಹಿಂದೂ ಯುವತಿಯರು ಮುಸ್ಲಿಂ ಹುಡುಗರ ಜೊತೆ ಬೆರೆಯದಂತೆ ಕಣ್ಣಿಡುವ ವ್ಯವಸ್ಥಿತ ನೆಟ್‌ವರ್ಕ್ ಒಂದನ್ನು ಹುಟ್ಟುಹಾಕುವ ಸಂಘ ಪರಿವಾರದ ಹುನ್ನಾರಕ್ಕೆ ಅತೀಹೆಚ್ಚು ಬಳಕೆಯಾದದ್ದು ಶ್ರೀರಾಮ ಸೇನೆ.

ಮುತಾಲಿಕ್ ಇದ್ದಷ್ಟೂ ದಿನ ಒಟ್ಟಾಗಿಯೇ ಇದೆಲ್ಲವನ್ನು ನಿಭಾಯಿಸುತ್ತಿದ್ದ. ಭಜರಂಗಿಗಳ ಮಧ್ಯೆ ಮೊದಲ ಬಾರಿಗೆ ಒಡಕುಂಟಾಗಿದ್ದು 2006 ರಲ್ಲಿ, ಬಜೆಪಿ ವಿರುದ್ಧ ಮುನಿಸಿಗೆ ಬಿದ್ದ ಮುತಾಲಿಕ್ ಭಜರಂಗದಳದಿಂದ ಸಿಡಿದು ಹಿಂದೂ ಯುವ ಸೇನೆ ಸ್ಥಾಪಿಸಿದಾಗ ಮಂಗಳೂರಿನ ಬಜ್ಪಲಕೇರಿಯ ಕಾರ್ಪೊರೇಟರ್ ಕಮಲಾಕ್ಷನೇ ಹಿಂದೂ ಯುವ ಸೇನೆಯ ನೇತೃತ್ವ ವಹಿಸಿಕೊಂಡ. ಪ್ರಸಾದ್ ಅತ್ತಾವರ, ಪ್ರವೀಣ್ ವಾಲ್ಕೆ, ಪುತ್ತೂರಿನ ಅಶೋಕ್ ಕುಮಾರ್ ಪುತ್ತಿಲ, ಸುಭಾಷ್ ಪಡೀಲು, ದಿನಕರ್ ಶೆಟ್ಟಿ, ಮಳಪಾಲ್ ಸುವರ್ಣ, ಲೋಹಿತ್ ಅಡ್ಯಾರ್ ಮುಂತಾದ ಎಲಿಮೆಂಟುಗಳೆಲ್ಲ ಹಿಂದೂ ಯುವ ಸೇನೆಯಲ್ಲೇ ಇದ್ದರು.

ಈ ಪೈಕಿ ಯಶಪಾಲ್ ಸುವರ್ಣ ಆದಿ ಉಡುಪಿ ಬೆತ್ತಲೆ ಪ್ರಕರಣದ ರೂವಾರಿಯಾಗಿ ಉಡುಪಿಯಿಂದ ನಗರಸಭೆ ಚುನಾವಣೆಗೂ ನಿಂತು ಗೆದ್ದುಬಿಟ್ಟ. ಒಂದು ಹಂತದಲ್ಲಿ ಹಿಂದೂ ಯುವಸೇನೆಗೆ ಕುಖ್ಯಾತಿ ಬರುತ್ತಿದ್ದಂತೆ ಅದೇ ಹಿಂದೂ ಸೇನೆಯಾಯಿತು. ಭಜರಂಗದಳದಿಂದ ಸಿಡಿದು ಬಂದಿದ್ದ ಮುತಾಲಿಕ್ ಶಿಷ್ಯರೇ ಹಿಂದೂ ಸೇನೆಯ ಹೆಸರಲ್ಲಿ ದಾಳಿಗಳನ್ನಾರಂಭಿಸಿದ್ದರು. ಹಾಗಂತ ಭಜರಂಗದಳ ತನ್ನ ಪ್ರತ್ಯೇಕ ಅಸ್ತಿತ್ವವನ್ನು ಬಿಟ್ಟುಕೊಡಲಿಲ್ಲ. ಆರೆಸ್ಸೆಸ್‌ನ


▶▶▶

ಪಬ್ ದಾಳಿಯ ದಿನವೇ ಮತ್ತೊಂದು ಅಟ್ಯಾಕ್

ಬಲ್ಮಠದ ಪಬ್ ದಾಳಿಯ ದಿನವೇ ಅದೇ ಬಲ್ಮಠ ರಸ್ತೆಯ ಮನೆಯೊಂದರ ಮೇಲೆ ದಾಳಿ ನಡೆಸಿದ ಶ್ರೀರಾಮಸೇನೆಯ ಮತ್ತೊಂದು ಗ್ಯಾಂಗ್ ಅಬ್ದುಲ್ ಹಮೀದ್ ಮತ್ತು ಶರೀಫ್ ಎಂಬಿಬ್ಬರು ಯುವಕರನ್ನು ಹಿಡಿದು ಕತ್ತರಿಸಿದೆ.

ಶ್ರೀರಾಮ ಸೇನೆಯ ಮತ್ತೊಬ್ಬ ನಾಯಕ ಮಧು ಊರ್ವ ಸ್ಟೋರ್ ನೇತೃತ್ವದ ಈ ಗ್ಯಾಂಗ್ ಖಚಿತ ಮಾಹಿತಿಯ ಮೇರೆಗೆ ನಡೆಸಿದ ದಾಳಿಗೆ ಹಮೀದ್ ಮತ್ತು ಶರೀಫ್ ಇಬ್ಬರೂ ಗಾಯಗೊಂಡು ಕದ್ರಿಯ ಆಸ್ಪತ್ರೆಯೊಂದಕ್ಕೆ ದಾಖಲಾಗಿದ್ದಾರೆ. ಹಕೀಕತ್ತೇನೆಂದರೆ ಅವತ್ತು ತಮ್ಮ ಗೆಳೆಯರಿಗೆಂದು ಪುಟ್ಟದೊಂದು ಪಾರ್ಟಿ ಇಟ್ಟುಕೊಂಡಿದ್ದ ಹಮೀದ್ ಮತ್ತು ಶರೀಫ್ ಮನೆಗೆ ಹಿಂದೂ ಗೆಳೆಯರೂ ಬಂದಿದ್ದರು. ಆ ಪೈಕಿ ಇಬ್ಬರು ಯುವತಿಯರಿದ್ದುದ್ದೇ ಶ್ರೀರಾಮಸೇನೆಯ ದಾಳಿಗೆ ಕಾರಣವಾಗಿತ್ತು.

ಪಬ್ ದಾಳಿ ದೇಶಾದ್ಯಂತ ಸುದ್ದಿಯಾದರೆ ಅವತ್ತೇ ನಡೆದ ಈ ಘಟನೆ ಏಕೋ ಸದ್ದಿಲ್ಲದೇ ಮುಚ್ಚಿಹೋಯಿತು. ಹುಡುಗಿಯರ ವಿಷಯದಲ್ಲಿ ಶ್ರೀರಾಮಸೇನೆ ಅದೆಷ್ಟು ಹುಷಾರಾಗಿದೆ ಎಂಬುದಕ್ಕೆ ಇದೊಂದು ಸಣ್ಣ ನಿದರ್ಶನವಷ್ಟೆ.





ಬಂದ್ ವೇಳೆ ಎಬಿವಿಪಿಯಿಂದ... ದಾಂಧಲೆ



ಬಂದ್ ವೇಳೆ ಎಬಿವಿಪಿಯಿಂದ... ದಾಂಧಲೆ



ಮಹಿಳಾ ಆಯೋಗದಿಂದ ವಿಚಾರಣೆ....





...ಾ ಪ್ರಾಂತಕಾರ್ಯವಾಹಕ ಕಲ್ಲಡ್ಕ ಪ್ರಭಾಕರ ಭಟ್ಟರ ಶಿಷ್ಯ ವಿನಯ್ ಎಲ್. ಶೆಟ್ಟಿಯ ನೇತೃತ್ವದಲ್ಲಿ ಸತ್ಯಜಿತ್ ...ತ್ಕಲ್, ತಿಲಕ್ ರಾಜ್, ತಲಪಾಡಿ ರಾಜಶೇಖರ ರೈ ...ಂತಾದವರೆಲ್ಲ ಹಿಂದೂ ಸೇನೆಗೆ ಪೈಪೋಟಿಯೆಂಬಂತೆ ...ರಂಗದಳದ ಸಂಘಟನೆಗೆ ನಿಂತರು.

ಬಹುಶಃ ಮುತಾಲಿಕ್‌ಗೆ ಹಿಂದೂ ಸೇನೆಗಿಂತಲೂ ...ರಾಮಸೇನೆ ಎಂಬ ಹೆಸರೇ ಆಕರ್ಷಕ ಎನಿಸಿರಬೇಕು. ...ಂದರೆ ಭಜರಂಗದಳ ಆಂಜನೇಯನಂತಾದರೆ ಹನು...ಂತನ ಪರಮದೈವವೇ ಶ್ರೀರಾಮನಲ್ಲವೇ? ...ರಾಮಸೇನೆ ಎಂಬ ಹೆಸರಿಟ್ಟುಬಿಟ್ಟರೆ ...ಜರಂಗದಳದ ಬಲತೇರು ಕಾರ್ಯಕರ್ತರೆಲ್ಲ ...ಗಿಬಿದ್ದು ಬಂದು ಸೇರುತ್ತಾರೆಂಬ ಮುತಾ...ನ ಭ್ರಮೆ ಅಷ್ಟಾಗಿ ಫಲ ಕೊಡಲಿಲ್ಲ. ...ಕ್ಕೆ ಪ್ರಸಾದ್ ಅತ್ತಾವರನೇ ಮಂಗಳೂರಿಗೆ ...ಡರಾದ. ಏಕ್ಕಂತೆ ಮುತಾಲಿಕ್ ...ನುಯಾಯಿಗಳಾಗಿದ್ದ ಪ್ರವೀಣ್ ವಾಲ್ಕೆ, ...ಶೋಕ್‌ಕುಮಾರ್ ಪುತ್ತಿಲ, ಸುಭಾಷ್ ...ೀಲು, ದಿನಕರ್ ಶೆಟ್ಟಿ, ಲೋಹಿತ್ ...ಾರ್ ಮುಂತಾದವರೆಲ್ಲ ಸಹಜವಾಗೇ ಶ್ರೀರಾಮಸೇನೆಯ ...ಪುಟ ಹಿಡಿದರು.



ಹೆಸರಷ್ಟೇ ವಿಭಿನ್ನ ಎಂಬುದನ್ನು ಬಿಟ್ಟರೆ ಭಜರಂಗದಳ, ...ದೂ ಸೇನೆ, ಹಿಂದೂ ಯುವ ಸೇನೆ, ಶ್ರೀರಾಮ ...ನೆ ಇತ್ಯಾದಿಗಳೆಲ್ಲದರ ಗುರಿ ಒಂದೇ ಆಗಿತ್ತು. ಇಲ್ಲಿಗೆ ...ರ್ಷದ ಹಿಂದೆ ಹಿಂದೂ ಜಾಗರಣ ವೇದಿಕೆಯ ಹಳೇ ...ಜಗದೀಶ್ ಕಾರಂತನ ನೇತೃತ್ವದಲ್ಲಿ ಕರಾವಳಿಯುದ್ದಕ್ಕೂ ...ಾಟ್ ಹಿಂದೂ ಸಮಾವೇಶಗಳಾದಾಗ ಶ್ರೀರಾಮ ...ನೆ ಸೇರಿದಂತೆ ಈ ಎಲ್ಲ ಸಂಘಟನೆಗಳೂ ಒಂದೇ ...ದಿಕೆಯಲ್ಲಿ ಕಾಣಿಸಿಕೊಂಡವು. ಸಾಕ್ಷಾತ್ ಪೇಜಾವರ ...ಠಾಧೀಶ ವಿಶ್ವೇಶತೀರ್ಥರಷ್ಟೇ ಅಲ್ಲ, ಸುಬ್ರಹ್ಮಣ್ಯ ...ಠಾಧಿಪತಿ, ಗುರುಪುರ ಮಠದ ವಜ್ರದೇಹಿ, ಕೊಲ್ಯದ ...ಮಾನಂದ ಸ್ವಾಮಿ, ಒಡಿಯೂರು ಸ್ವಾಮಿ ಮುಂತಾದ ...ದೂ ಮಠಾಧೀಶರೆಲ್ಲ ಹಿಂದೂ ಸಮಾವೇಶದ ಮೂಲಕ ...ಥ ಸಂಘಟನೆಗಳ ಜೊತೆ ಬಹಿರಂಗವಾಗಿ ಗುರುತಿಸಿ...ಕೊಂಡಿದ್ದು ಇಂಥ ಸಂಘಟನೆಗಳ ಅಟ್ಟಹಾಸಕ್ಕೊಂದು ...ಮಾಜಿಕ ಮನ್ನಣೆ ಸಿಕ್ಕಂತಾಯಿತು.

ಕಾಲದ್ದಕ್ಕೆ ಪೇಜಾವರ ಮಠಾಧೀಶರು ಇಂಥ ಚಿಕ್ಕಪುಟ್ಟ ...ಘಟನೆಗಳು ಹಮ್ಮಿಕೊಂಡ ಸಣ್ಣಪುಟ್ಟ ಕಾರ್ಯಕ್ರಮ...ಗೂ ಹೋಗಿ ಬಿಟ್ಟೀ ಆಶೀರ್ವಚನ ಕೊಡತೊಡಗಿದ್ದು ...ವುಗಳ ಹುಮ್ಮಸ್ಸಿಗೆ ಸಿಕ್ಕ ಕುಮ್ಮಕ್ಕಿನಂತಾಯ್ತು. ಪ್ರಸಾದ್ ...ತ್ತಾವರ ಮಂಗಳೂರಿನ ಜಪ್ಪು ಮತ್ತು ಅತ್ತಾವರ ...ಿಯಾಗಳಲ್ಲಿ ಗಣೇಶೋತ್ಸವಗಳ ಮೂಲಕ ಕೋಮು ...ಷಮ್ಯಕ್ಕೆ ಕೊಳ್ಳಿಯಿಟ್ಟರೆ ಅಶೋಕ್‌ಕುಮಾರ್ ಪುತ್ತಿಲ ...ವಿ. ಸದಾನಂದಗೌಡರ ವಿರುದ್ಧವೇ ಕತ್ತಿ ಮಸೆಯುತ್ತಾ ...ಮೂಹಿಕ ಶನಿಪೂಜೆಗಳನ್ನಾರಂಭಿಸಿದ. ಉಡುಪಿ...ಗದಲ್ಲಿ ಯಶಪಾಲ್ ಸುವರ್ಣನ ಸತ್ಯನಾರಾಯಣ ...ಜಾ ಸರಣಿಯೇ ಶುರುವಾಯಿತು.

ಈ ಮಧ್ಯೆಯೇ ಶ್ರೀರಾಮಸೇನೆ ಹಿಂದೂ ಯುವಕ...ನ್ನು ಆಕರ್ಷಿಸಲು ವಿಚಿತ್ರ ಪ್ರವೃತ್ತಿಯೊಂದನ್ನು ಹುಟ್ಟು ಹಾಕಿತು. ಅದು ಹಿಂದೂ ಯುವತಿಯರ ರಕ್ಷಣಾ ಶಪಥ. ಹಿಂದೂ ಹುಡುಗಿಯರನ್ನು ಪಟಾಯಿಸಿ ಮತಾಂತರ ಮಾಡುವ ವಿಶಿಷ್ಟ ತಂತ್ರವೊಂದನ್ನು ಮುಸ್ಲಿಮರು ಶುರು ಹಚ್ಚಿಕೊಂಡಿದ್ದಾರೆಂದೂ, ತನ್ಮೂಲಕ ಹಿಂದೂ ಧರ್ಮವನ್ನೇ ವಿನಾಶಕ್ಕೊಡ್ಡುವುದು ಅವರ ದುರಾಲೋಚನೆಯೆಂದೂ ಚಿತ್ರವಿಚಿತ್ರ ಕತೆಕಟ್ಟಿ ಪುಕಾರೆಬ್ಬಿಸಲಾಯ್ತು. ಇದಕ್ಕೆ ಮೊದಲ ತುತ್ತಾಗಿದ್ದು ವ್ಯಾಲಂಟೈನ್ಸ್ ಡೇ. ಮಂಗಳೂರಿನ ಎರಡು ಪ್ರಮುಖ ಮಳಿಗೆಗಳ ಮೇಲೆ ಶ್ರೀರಾಮಸೇನೆ ಮತ್ತು ಭಜರಂಗದಳಗಳು ಒಟ್ಟಾಗಿಯೇ ದಾಳಿ ನಡೆಸಿದವು.

ಅದರ ಮುಂದುವರಿಕೆಯೇ ಮಂಗಳೂರು ಹಾಸಲೆಯಲ್ಲಿ ನಡೆದ ನಿಗೂಢ ಸರಣಿ ದಾಳಿಗಳು. ಪ್ರಸಾದ್ ಅತ್ತಾವರನ ಗ್ಯಾಂಗ್ ಐಸ್‌ಕ್ರೀಮ್ ಪಾರ್ಲರ್ ಒಂದಕ್ಕೆ ನುಗ್ಗಿ ಮೂವರು ಯುವತಿಯರನ್ನು ಹೀನಾಮಾನ ಥಳಿಸಿದ ನಂತರ ಪ್ರತಿ ಕಾಲೇಜಿನಲ್ಲೂ ಎಬಿವಿಪಿಯ ಹುಡುಗರ ಹಿಂಡೇ ಅಣಿಯಾಯಿತು. ಯಾರೇ ಮುಸ್ಲಿಂ ವಿದ್ಯಾರ್ಥಿಯೊಬ್ಬ ಹಿಂದೂ ಯುವತಿಯ ಜೊತೆ ಮಾತಾಡುವಂತಿಲ್ಲ. ಅಂಥದ್ದೇನಾದರೂ ನಡೆದರೆ ಎಬಿವಿಪಿಯ ಹುಡುಗರೇ ಶ್ರೀರಾಮಸೇನೆಗೆ ಮಾಹಿತಿ ಕೊಡುತ್ತಾರೆ. ಒಟ್ಟಿಗೆ ಓಡಾಡುವುದಿರಲಿ ಮಾತಾಡಿದ್ದು ಗೊತ್ತಾದರೂ ಸಾಕು, ಶ್ರೀರಾಮಸೇನೆಯ ಗ್ಯಾಂಗ್ ಮುಲಾಜಿಲ್ಲದೇ ಹಿಡಿದು ಬಡಿಯುತ್ತದೆ.

ಐಸ್‌ಕ್ರೀಮ್ ಪಾರ್ಲರ್ ಘಟನೆ ನಡೆದ ಮೂರೇ ತಿಂಗಳಿಗೆ ಮಂಗಳೂರಿನ ಪಂಪ್‌ವೆಲ್ ಬಳಿ ಬಸ್ಸಲ್ಲಿ ಅಕ್ಕಪಕ್ಕ ಕೂತು ಪ್ರಯಾಣಿಸುತ್ತಿದ್ದ ಹುಡುಗ-ಹುಡುಗಿಯರ ಮೇಲೆ ಪ್ರಸಾದ್ ಅತ್ತಾವರನ ಗ್ಯಾಂಗ್ ಹಲ್ಲೆ ನಡೆಸಿತು. ಇದಾಗಿ ಒಂದೇ ತಿಂಗಳಿಗೆ ಉಡುಪಿಯ ಯಶಪಾಲ್ ಸುವರ್ಣನ ಗ್ಯಾಂಗ್ ಕ್ಯಾಂಟೀನಿನಲ್ಲಿ ಒಟ್ಟಿಗೇ ತಿಂದಿ ತಿನ್ನುತ್ತಿದ್ದ ಹುಡುಗ-ಹುಡುಗಿಯನ್ನು ಹಿಡಿದು ಬಡಿದು ಅವರ ಮೊಬೈಲ್ ಕಿತ್ತುಕೊಂಡಿತು. ಮಣಿಪಾಲದ ಎಂ.ಜೆ.ಸಿ ಕಾಲೇಜು, ಉಡುಪಿಯ ಎಂಜಿಎಂ ಕಾಲೇಜು, ಸುರತ್ಕಲ್‌ನ ಗೋವಿಂದಾಸ್ ಕಾಲೇಜು, ಪುತ್ತೂರಿನ ವಿವೇಕಾನಂದ ಕಾಲೇಜುಗಳಲ್ಲಿ ಮಾತಾಡಿದರೆಂಬ ಒಂದೇ ಕಾರಣಕ್ಕೆ ಮುಸ್ಲಿಂ ಹುಡುಗರಿಗೂ ಒದೆ ಬಿದ್ದವು. ಹಿಂದೂ ಯುವತಿಯರನ್ನು ಥಳಿಸಲಾಯ್ತು.



ಈ ಎಲ್ಲಾ ಘಟನೆಗಳ ಹಿಂದಿದ್ದ ಶ್ರೀರಾಮಸೇನೆಯ ಉಡುಪಿ ಜಿಲ್ಲಾಧ್ಯಕ್ಷ ಜೀತೇಶ್, ಆದಿ ಉಡುಪಿ ಚಿತ್ರಲಿ ಕಾಂಡದ ರೂವಾರಿ ಯಶಪಾಲ್ ಸುವರ್ಣ, ವಾಸುದೇವ ಭಟ್ಟ, ಮಧುಕರ ಮುದ್ರಾಡಿ, ಕುಮಾರ ಸ್ವಾಮಿ, ಪ್ರಸಾದ್ ಅತ್ತಾವರ, ಅಶೋಕ್‌ಕುಮಾರ್ ಪುತ್ತಿಲ ಮುಂತಾದವರಿದ್ದರಲ್ಲ; ಅವರಾದರೂ ಎಂಥವರು?

ಈ ಪೈಕಿ ಶ್ರೀರಾಮಸೇನೆಯ ಉಡುಪಿ ಜಿಲ್ಲಾಧ್ಯಕ್ಷ ಜೀತೇಶ್ ಕಾಲೇಜು ವಿದ್ಯಾರ್ಥಿನಿಯೊಬ್ಬಳನ್ನು ಕಿಡ್ನಾಪ್ ಮಾಡಿ ಅತ್ಯಾಚಾರಕ್ಕೆ ಯತ್ನಿಸಿದ ಕೇಸಿನಲ್ಲಿ ಜೈಲು ಪಾಲಾದರೆ, ಅದೇ ಶ್ರೀರಾಮಸೇನೆಯ ಮತ್ತೊಬ್ಬ ನಾಯಕ ಕುಮಾರಸ್ವಾಮಿ ಬ್ರಹ್ಮಾವರದ ಕೋಟ ಸಮೀಪದ ದೇವಸ್ಥಾನದ ಅರ್ಚಕ ಪಾತಾಳಿ ಎಂಬಾತನನ್ನು ಕೊಚ್ಚಿ ಕೊಂದು ಜೈಲುಪಾಲಾದ.

ಯಾವ ಗೃಹಮಂತ್ರಿ ವಿ.ಎಸ್. ಆಚಾರ್ಯ ಇವತ್ತು ಶ್ರೀರಾಮಸೇನೆಗೂ ಬಿಜೆಪಿಗೂ ಸಂಬಂಧವಿಲ್ಲ ಎಂದು ಎದೆಸೆಟೆದು ಡೈಲಾಗ್ ಹೊಡೆಯುತ್ತಿದ್ದಾರೋ ಅದೇ ವಿ.ಎಸ್. ಆಚಾರ್ಯ ಕುಮಾರಸ್ವಾಮಿ ಸಂಪುಟದಲ್ಲಿ ವೈದ್ಯಕೀಯ ಶಿಕ್ಷಣ ಮಂತ್ರಿಯಾಗಿದ್ದಾಗ ಶ್ರೀರಾಮಸೇನೆಯ ನಾಯಕ ಕುಮಾರಸ್ವಾಮಿಯನ್ನು ಅರ್ಚಕ ಪಾತಾಳಿಯ ಕೊಲೆ ಕೇಸಿನಿಂದ ಬಚಾವು ಮಾಡುತ್ತಾರೆ!

ಮಣಿಪಾಲದ ಕೆಎಂಸಿಯ ವೈದ್ಯರಿಗೆ ಧಮಕಿ ಹಾಕಿ ಅರ್ಚಕ ಪಾತಾಳಿ ಸತ್ತಿದ್ದು ಚೂರಿ ಇರಿತದಿಂದ ಅಲ್ಲವೇ ಅಲ್ಲ ಎಂಬಂತೆ ಪೋಸ್ಟ್‌ಮಾರ್ಟಂ ರಿಪೋರ್ಟು ಬರೆಸಿ ಹಂತಕ ಕುಮಾರಸ್ವಾಮಿಯನ್ನು ಕೊಲೆ ಕೇಸಿನಿಂದ ಬಚಾವು ಮಾಡಿದ ವಿ.ಎಸ್. ಆಚಾರ್ಯ ಯಾವ ಬಾಯಿಂದ ಈಗ ಬಿಜೆಪಿಗೂ ಶ್ರೀರಾಮ ಸೇನೆಗೂ ಸಂಬಂಧವಿಲ್ಲ ಎನ್ನುತ್ತಾರೆ?

ಹೆಸರಷ್ಟೇ ಬೇರೆಯಾದರೂ ಶ್ರೀರಾಮಸೇನೆ, ಭಜರಂಗದಳ, ಎಬಿವಿಪಿ, ಆರೆಸ್ಸೆಸ್, ಬಿಜೆಪಿಗಳ ಆತ್ಮ ಒಂದೇ. ಬ್ರಾಹ್ಮಣ್ಯವೇ ತಾಯಿ ವೈದಿಕವೇ ತಂದೆ. ಹೀಗೆ ಹಿಂದೂ ಮಿಲಿಟೆಂಟ್ ಗುಂಪಾಗಿ ತಲೆ ಎತ್ತಿದ್ದ ಶ್ರೀರಾಮ ಸೇನೆ ಕ್ರಮೇಣ ಮಂಗಳೂರಿನ ಪಬ್‌ಗಳು, ಲೈವ್ ಬ್ಯಾಂಡ್, ದನದ ದಲ್ಲಾಳಿಗಳು ಮತ್ತು ಹೊರರಾಜ್ಯದ ವಿದ್ಯಾರ್ಥಿಗಳಿಂದ 'ಮಂತ್ಲಿ' ರೋಲ್‌ಕಾಲ್‌ಗಿಳಿದಿದೆ. ಇಂಥದೊಂದು 'ವಸೂಲಿ' ಕಾಯಕದ ವಿಸ್ತರಣೆಯೇ ಜನವರಿ 24 ರ ಶನಿವಾರದ ಬಲ್ಮಠ ರಸ್ತೆಯ 'ಅಮ್ನೇಷಿಯಾ ದಿ ಲಂಚ್' ಎಂಬ ಪಬ್ ಮೇಲಿನ ದಾಳಿ.

ಸರಿಸುಮಾರು ನಲವತ್ತು ಮಂದಿ ಪುಂಡರ ಗ್ಯಾಂಗ್ ಕಟ್ಟಿಕೊಂಡು ಅಮ್ನೇಷಿಯಾ ಪಬ್ಬಿಗೆ ನುಗ್ಗಿದ ಪ್ರಸಾದ್ ಅತ್ತಾವರ ಮತ್ತು ಲೋಹಿತ್ ಅಡ್ಯಾರ್‌ನ ಗ್ಯಾಂಗ್‌ನ ಗುರಿಯಿದ್ದುದ್ದೇ ಜೀನ್ಸ್‌ಧಾರಿ ಯುವತಿಯರ ಮೇಲೆ. ಮೊದಲೇ ಟೀವಿ ವರದಿಗಾರರನ್ನು ಬರ ಮಾಡಿಕೊಂಡು ಸಿಕ್ಕಸಿಕ್ಕ ಯುವತಿಯರನ್ನು ಹಿಡಿದು ಬಡಿದ ಶ್ರೀರಾಮ ಸೈನಿಕರು ಯುವತಿಯೊಬ್ಬಳ ಜುಟ್ಟು ಹಿಡಿದು ಗೋಡೆಗೆ ಕುಕ್ಕಿದ್ದು, ನೆಲಕ್ಕೆ ಕೆಡವಿ ತುಳಿದದ್ದು ಹಿಡಿದು ಕಪಾಳಕ್ಕೆ ಹೊಡೆಯುತ್ತಿದ್ದ ದೃಶ್ಯಗಳಿಗೂ ಮಹಾಭಾರತದ ದ್ರೌಪದಿಯ ವಸ್ತ್ರಾಪಹರಣಕ್ಕೂ ಏನು ವ್ಯತ್ಯಾಸ?

ಕನಿಷ್ಠ ದ್ರೌಪದಿಗಾದರೂ ಶ್ರೀಕೃಷ್ಣ ಪರಮಾತ್ಮನಿದ್ದ. ಆದರೆ ಶ್ರೀರಾಮ ಸೈನಿಕರ ಕೈಗೆ ಸಿಕ್ಕಿಬಿದ್ದ ಅಸಹಾಯಕ ಯುವತಿಯರ ಪಾಲಿಗೆ ಯಾರಿದ್ದರು? ರಾಮನ ಹೆಸರಲ್ಲಿ ಕೀಚಕ ವಿಕೃತಿ ಮೆರೆಯಲು ಈ ಪುಂಡರಿಗೆ ಲೈಸೆನ್ಸ್ ಕೊಟ್ಟವರ್ಯಾರು? ■



ಹೆಜಮಾಡಿಯ ವನಿತಾ ಆತ್ಮಹತ್ಯೆ

ತಾಲೀಬಾನಿಕರಣಕ್ಕೆ ಮೊದಲ ಬಲಿ

ಭಜರಂಗಿಗಳ ತಾಲೀಬಾನಿಕರಣದ ಪರಮಾವಧಿಗೊಂದು ಉದಾಹರಣೆ ಅಂತಿದ್ದರೆ ಅದು ಹೆಜಮಾಡಿಯ ಬಿಲ್ಲವ ಯುವತಿ ವನಿತಾಳ ಆತ್ಮಹತ್ಯೆ.

ಹೆಜಮಾಡಿಯ ತನ್ನ ಮನೆಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ವನಿತಾ ಓರ್ವ ನಿರ್ಗತಿಕ ಯುವತಿ. ಇಲ್ಲಿಗೆ ನಾಲ್ಕೂವರೆ ವರ್ಷದ ಹಿಂದೆ ಹೆಜಮಾಡಿಯ ನಡುರಸ್ತೆಯಲ್ಲೇ ಆಕೆಯನ್ನು ಭಜರಂಗಿ ಗ್ಯಾಂಗ್ ಅಟ್ಟಾಡಿಸಿ ಹೊಡೆಯುತ್ತದೆ. ಅದಕ್ಕೆ ಕಾರಣ ಆಕೆ ಬಸ್ಸಿನಲ್ಲಿ ಮುಸ್ಲಿಂ ಯುವಕನೊಬ್ಬನ ಜೊತೆ ಮಾತಾಡಿದ್ದು. ಅಷ್ಟಕ್ಕೂ ಅದು ಪ್ರೇಮವಾಗಲಿ, ಅನೈತಿಕ ಸಂಬಂಧವಾಗಲಿ ಆಗಿರದೇ ಅಣ್ಣತಂಗಿಯಂಥ ಅಕ್ಕರೆಯಾಗಿತ್ತು.

ತಂದೆತಾಯಿಯನ್ನು ಕಳಕೊಂಡು ಕಡುಬಡತನದಲ್ಲಿದ್ದ ವನಿತಾಳನ್ನು ಮುಲ್ಕಿಯ ಕಾರ್ಖಾನೆಯೊಂದಕ್ಕೆ ಕರೆದೊಯ್ದು ಕೆಲಸಕ್ಕೆ ಸೇರಿಸಿದ್ದ ಆ ಮುಸ್ಲಿಂ ಹುಡುಗನ ಜೊತೆ ಬಸ್ಸಲ್ಲಿ ಮಾತಾಡಿದ್ದೇ ಆಕೆಯ ಅಪರಾಧವಾಗಿತ್ತು. ಯಾವತ್ತು ಹೆಜಮಾಡಿಯ ನಡುರಸ್ತೆಯಲ್ಲೇ ಭಜರಂಗಿ ಗ್ಯಾಂಗ್ ಹಿಡಿದು ಬಡಿಯಿತೋ ವನಿತಾ ಮುಲ್ಕಿ ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿದ್ದಾಳೆ. ಪೊಲೀಸರು ಯಾವೊಬ್ಬ ಭಜರಂಗಿಯನ್ನೂ ಮುಟ್ಟಲಿಲ್ಲ. ಬದಲಾಗಿ ಕೊಟ್ಟ ದೂರನ್ನೇ ವಾಪಸ್ಸು ಪಡೆಯುವಂತೆ ಕಾಟಕ್ಕಿಳಿದ ಭಜರಂಗಿ ಗ್ಯಾಂಗ್ ವನಿತಾಳ ಮನೆಗೇ ಬಂದು ಪೀಡಿಸಲಾರಂಭಿಸಿದೆ. ಮುಸ್ಲಿಂ ಹುಡುಗನ ಜೊತೆ ಇಲ್ಲದ ಸಂಬಂಧ ಕಲ್ಪಿಸಿ ಹೀಯಾಳಿಸಿದೆ. ಇದರಿಂದ ರೋಸತ್ತ ವನಿತಾ 2004 ರ ನವೆಂಬರ್ ತಿಂಗಳಲ್ಲಿ ತನ್ನ ಮನೆಯಲ್ಲೇ ನೇಣಿಗೆ ಹೆಣವಾಗಿದ್ದಾಳೆ. ಸಾಯುವ ಮುನ್ನ ಆಕೆ ಬರೆದಿಟ್ಟಿದ್ದ ಪತ್ರವನ್ನಷ್ಟೇ ಅಲ್ಲ, ಇಡೀ ಪ್ರಕರಣವನ್ನೇ ಮುಚ್ಚಿ ಹಾಕಿದ ಮುಲ್ಕಿ ಪೊಲೀಸರು ಭಜರಂಗಿಗಳ ಅಟ್ಟಹಾಸಕ್ಕೆ ನೀರೆರೆದರೇ ಹೊರತು ವನಿತಾಳ ದುರಂತಕ್ಕೆ ನ್ಯಾಯ ಕೊಡಲಿಲ್ಲ. ■



ಶ್ರೀರಾಮಸೇನೆ ವಿರುದ್ಧ ಹುಡುಗಿಯರ ಪ್ರತಿಭಟನೆ.....



ಪ್ರಗತಿಪರರಿಂದ ಪ್ರತಿಭಟನೆ....

'ಗುರುಭಕ್ತಿ'ಯ ಹೊಸ ವರಸೆ!

ಒಬ್ಬ 'ಕರ್ನಾಟಕವನ್ನು ಗುಜರಾತ್ ಮಾಡುತ್ತೇವೆ' ಎಂಬ ಉದ್ರೇಕ ಉಕ್ಕಿಸುವ ಮಾತನಾಡಿ ಹಿಂಬಾಲಕರನ್ನು ಪುಂಡಾಟಿಕೆಗೆ ಪ್ರೇರೇಪಿಸಿದರೆ, ಮತ್ತೊಬ್ಬ 'ಗುಜರಾತ್ ಮಾದರಿ ಎಂದರೆ ಅಭಿವೃದ್ಧಿಯ ಮಾದರಿ' ಎಂದು ಸೆರಗು ಸರಿಮಾಡಿಕೊಳ್ಳುವ ಮಂದಿಯಲ್ಲಿ ನೈತಿಕತೆ ನಿರೀಕ್ಷಿಸುವುದು ಕಷ್ಟ. ಆದರೆ 'ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್'ನ ಬಗ್ಗೆ ಕೂಡ ಬಿಜೆಪಿಯದ್ದು ಇದೇ ಧೋರಣೆಯೋ?

ಶ್ರೀರಾಮ ಸೇನೆಯವರು ಜನವರಿ 24, 2009ರಂದು ಮಂಗಳೂರಿನಲ್ಲಿ ನಡೆಸಿದ ಪಬ್ ದಾಳಿಯ ಬಗ್ಗೆ ಪ್ರತಿಕ್ರಿಯೆ ನೀಡಿರುವ ಗೃಹಮಂತ್ರಿಗಳು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಉಸ್ತುವಾರಿ ಸಚಿವರೂ ಆಗಿರುವ ವಿ.ಎಸ್.ಆಚಾರ್ಯ ಅವರು 'ಸೂಕ್ತ ಕಾನೂನುಕ್ರಮ'ದ ರಾಗ ಹಾಡುತ್ತಿರುವುದರ ಜೊತೆ, 'ಬಿಜೆಪಿಗೂ ಶ್ರೀರಾಮ ಸೇನೆಗೂ ಯಾವುದೇ ಸಂಬಂಧವಿಲ್ಲ' ಎಂದೂ ಹೇಳಿಕೆ ನೀಡಿದ್ದಾರೆ. ಸಾರ್ವಜನಿಕವಾಗಿ ಮುಜುಗರ ಉಂಟಾಗುವ ಪ್ರಸಂಗಗಳಲ್ಲಿ ಈ ನಾಯಕರು ಬಿಜೆಪಿಗೂ ಬಜರಂಗ ದಳ-ವಿಹಿಂಪಗಳಿಗೂ ಏನೂ ಸಂಬಂಧವಿಲ್ಲ ಎಂಬ ಸೋಗಲಾಡಿತನ ತೋರಿದ್ದೂ ಇದೆ. ತಾಂತ್ರಿಕವಾಗಿ ಇದೆಲ್ಲ ವಿದ್ಯಮಾನದ ಬಗ್ಗೆ ಮತ್ತೂ ವಿಸ್ತಾರವಾದ ಅಭಿಪ್ರಾಯವನ್ನು ನೀಡಬೇಕು ಎಂದು ಕೋರಿ, ಸ್ಥಳದಲ್ಲಿಯೇ ಅವರ ಮಾತುಗಳನ್ನು ಚಿತ್ರಿಸಿಕೊಂಡರು. ಇಲ್ಲಿಯೂ ಪಟ್ಟಾಭಿ ಮಂಗಳೂರಿನ ಪಬ್ ದಾಳಿ ಪ್ರತ್ಯೇಕವಾದ ಘಟನೆಯಲ್ಲ ವೆಂದು, ಕಳೆದ ಕೆಲವು ವರ್ಷಗಳಲ್ಲಿ ಇಂತಹ ಅನೇಕ ದಾಳಿಗಳನ್ನು ಸಂಘಪರಿವಾರದ ಸಂಘಟನೆಗಳು ನಡೆಸಿವೆ ಯೆಂದೂ ಉದಾಹರಣೆಗಳ ಸಹಿತ ವಿವರಿಸಿದ್ದಾರೆ. ವಿಶ್ವ ವಿದ್ಯಾಲಯ ಕಾಲೇಜಿನ ವಿದ್ಯಾರ್ಥಿ ಸಂಘ ಅಭಾವಿಪ ಹಿಡಿತದಲ್ಲಿದ್ದು, ಪಟ್ಟಾಭಿಯವರ ವಿರುದ್ಧ ಅವರು ಸದಾ ತಂಟೆ-ತಕರಾರು ಮಾಡಲು ಕಾಯುತ್ತಲೇ ಇರುತ್ತಾರೆ.



ಸರಿ. ಆದರೆ ಒಬ್ಬ 'ಕರ್ನಾಟಕವನ್ನು ಗುಜರಾತ್ ಮಾಡುತ್ತೇವೆ' ಎಂಬ ಉದ್ರೇಕ ಉಕ್ಕಿಸುವ ಮಾತನಾಡಿ ಹಿಂಬಾಲಕರನ್ನು ಪುಂಡಾಟಿಕೆಗೆ ಪ್ರೇರೇಪಿಸಿದರೆ, ಮತ್ತೊಬ್ಬ 'ಗುಜರಾತ್ ಮಾದರಿ ಎಂದರೆ ಅಭಿವೃದ್ಧಿಯ ಮಾದರಿ' ಎಂದು ಸೆರಗು ಸರಿಮಾಡಿಕೊಳ್ಳುವ ಮಂದಿಯಲ್ಲಿ ನೈತಿಕತೆ ನಿರೀಕ್ಷಿಸುವುದು ಕಷ್ಟ. ಆದರೆ 'ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್'ನ ಬಗ್ಗೆ ಕೂಡ ಬಿಜೆಪಿಯದ್ದು ಇದೇ ಧೋರಣೆಯೋ? ಎಂದು ಖಂಡಿತ ಕೇಳಬೇಕು. ಮೊನ್ನೆ ತಾನೆ ರಾಜ್ಯ ಸರಕಾರ ಅಭಾವಿಪವನ್ನು ಸೊಂಟದಲ್ಲಿ ಏರಿಸಿಕೊಂಡು 'ಭಯೋತ್ಪಾದನೆಯ ವಿರುದ್ಧ ಅಭಿಯಾನ' ಎಂದು ಸಂಭ್ರಮದಿಂದ ಓಡಾಡಿದೆ; ಇದೇ ಅಭಾವಿಪ, ಶ್ರೀರಾಮಸೇನೆ ಪಬ್ಬಿನಲ್ಲಿ ಶುರುಮಾಡಿದ ಭಯೋತ್ಪಾದನೆಯನ್ನು ಮಂಗಳೂರಿನ ಕಾಲೇಜುಗಳಲ್ಲಿ ಮುಂದುವರೆಸಿಕೊಂಡು ಹೋಗುತ್ತಿದೆ!

ಪಬ್‌ನಲ್ಲಿ ನಡೆದ ಹಲ್ಲೆಯನ್ನು ಖಂಡಿಸಲು ಜನವರಿ 28ರಂದು ಎಸ್‌ಎಫ್‌ಐ ಹಾಗೂ ಎನ್‌ಎಸ್‌ಯುಐ ವಿದ್ಯಾರ್ಥಿ ಸಂಘಟನೆಗಳ ನೇತೃತ್ವದಲ್ಲಿ ಮಂಗಳೂರಿನ 13 ಕಾಲೇಜಿನ ವಿದ್ಯಾರ್ಥಿಗಳು ಒಟ್ಟಾಗಿ ಸೇರಿ ಪ್ರತಿಭಟನೆ ನಡೆಸಿದರು. ಈ ಪ್ರತಿಭಟನೆಗೆ ಹೊರಟ ವಿದ್ಯಾರ್ಥಿಗಳನ್ನು ಅಭಾವಿಪದವರು ಧಮಕಿ ಹಾಕಿ ಬಲಾತ್ಕಾರದಿಂದ ತಡೆಯಲು ಯತ್ನಿಸಿದರು. ಯಶಸ್ವಿಯಾಗಿ ನಡೆದ ಆ ಪ್ರತಿಭಟನೆಯಲ್ಲಿ ವಿದ್ಯಾರ್ಥಿಗಳು ಶ್ರೀರಾಮ ಸೇನೆಯ ದಾಳಿಯನ್ನು ಮಾತ್ರವಲ್ಲದೆ ಅಭಾವಿಪದ ದುಂಡಾವರ್ತಿಯನ್ನು ಸಹ ಖಂಡಿಸಿದರು ('ದಿ ಹಿಂದು', 29.1.2009 ಪು.4). ಪಬ್‌ನಲ್ಲಿ ನಡೆದ ಹಲ್ಲೆ ಈ ಹೊತ್ತಿಗೆ ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗಿ ಪ್ರಮುಖ ಟಿ.ವಿ. ಚಾನೆಲ್ ಎನ್‌ಡಿಟಿವಿಯ ವರದಿಗಾರರು ಮಾಹಿತಿ ಸಂಗ್ರಹಕ್ಕಾಗಿ ಮಂಗಳೂರಿಗೆ ಬಂದಿದ್ದರು. ಜನವರಿ 27ರಂದು ಎನ್‌ಡಿಟಿವಿ ಆಯೋಜಿಸಿದ್ದ ಚರ್ಚಾ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ, ಸಂಘಪರಿವಾರದ ಕೋಮುವಾದದ ವಿರುದ್ಧ ಸತತ ಕಾರ್ಯಶೀಲರಾಗಿರುವ ಮಂಗಳೂರಿನ ವಿಶ್ವವಿದ್ಯಾಲಯ ಕಾಲೇಜಿನ ಇಂಗ್ಲಿಷ್ ಅಧ್ಯಾಪಕ ಪಟ್ಟಾಭಿರಾಮ ಸೋಮಯಾಜಿಯವರನ್ನು ಚಾನೆಲ್ ಆಹ್ವಾನಿಸಿತ್ತು, ನೇರ ಪ್ರಸಾರವಾದ ಆ ಕಾರ್ಯಕ್ರಮದಲ್ಲಿ ಪಟ್ಟಾಭಿ ತಮ್ಮ ಎಂದಿನ ನೇರ ಮತ್ತು ನಿಖರ ಶೈಲಿಯಲ್ಲಿ ಕರಾವಳಿಯಲ್ಲಿ ಸಂಘಪರಿವಾರ ನಡೆಸುತ್ತಿರುವ ಹಿಂಸೆಯ ಸ್ವರೂಪವನ್ನು ವಿವರಿಸಿದರು. ಮರುದಿನ ಪಟ್ಟಾಭಿಯವರು ತಮ್ಮ ಕಾಲೇಜಿನಲ್ಲಿದ್ದಾಗ ಎನ್‌ಡಿಟಿವಿಯ ವರದಿಗಾರರು ಅಲ್ಲಿಗೆ ಹೋಗಿ ಪ್ರಸ್ತುತ

ಈಗ್ಗೆ ಎರಡು ವರ್ಷದ ಕೆಳಗೆ, ವಿಜಯ ಕರ್ನಾಟಕದ ಅಂಕಣಕಾರನೊಬ್ಬ ಪಟ್ಟಾಭಿ, ರಾಜೇಂದ್ರ ಚೆನ್ನಿ ಮತ್ತು ಅನಂತಮೂರ್ತಿಯವರ ಬಗ್ಗೆ 'ನಕ್ಸಲೈಟ್ ಬೆಂಬಲಿಗರು, ಕಾಮುಕರು' ಇತ್ಯಾದಿಯಾಗಿ ತುಚ್ಛವಾಗಿ ಬರೆದದ್ದು ಓದುಗರಿಗೆ ನೆನಪಿರಬಹುದು. ಮಲ ವಿಸರ್ಜನೆಗೂ, ಮಾತಿಗೂ ಇರುವ ವ್ಯತ್ಯಾಸವನ್ನೇ ಅರಿಯದ ಆ ಅಂಕಣಕಾರ ಹೇಳಿದ್ದೇ ಪರಮ ಸತ್ಯವೆನ್ನುವ ಹಾಗೆ ವಿ.ವಿ. ಕಾಲೇಜಿನ ಅಭಾವಿಪದ ದೊಣ್ಣೆನಾಯಕರು ಪಟ್ಟಾಭಿಯವರನ್ನು ಕೆಲಸದಿಂದ ತೆಗೆಯಬೇಕು ಎಂದು ಒತ್ತಾಯಿಸಿದ್ದರು. ಅಷ್ಟಕ್ಕೆ ನಿಲ್ಲದೆ, ನಂತರದ ಕೆಲವು ದಿನಗಳ ಕಾಲ ಪಟ್ಟಾಭಿಯವರು ತರಗತಿಯಲ್ಲಿ ಪಾಠ ಮಾಡುತ್ತಿದ್ದಾಗ ಹೊರಗೆ ಗುಂಪು ಕಟ್ಟಿಕೊಂಡು ಗದ್ದಲವೆಬ್ಬಿಸಿ ಮಾನಸಿಕ ಹಿಂಸೆ ನೀಡುವ ತಂತ್ರವನ್ನೂ ಪ್ರಯೋಗಿಸಿದರು. ಇಂಥ ಸಬ್‌ಜೂನಿಯರ್ ಚೆಡ್ಡಿಗಳಿಗೆ ಪಟ್ಟಾಭಿ ಕಾಲೇಜಿನಲ್ಲಿ ಟಿ.ವಿ. ಮಾಧ್ಯಮದವರಿಗೆ ಸಂದರ್ಶನ ನೀಡಿದ್ದೇ ಅವರ ವಿರುದ್ಧ ತಂಟೆ ಮಾಡಲು ನೆಪವಾಯಿತು. ಪಟ್ಟಾಭಿಯವರೇ ಟಿ.ವಿ.ಯವರನ್ನು ಕಾಲೇಜಿಗೆ ಕರೆಸಿಕೊಂಡು, ಹಿಂದು ಧರ್ಮಕ್ಕೆ ಅವಹೇಳನ ಮಾಡುವ ಮಾತುಗಳನ್ನಾಡಿದ್ದಾರೆ ಎಂಬ ಹಸಿ ಸುಳ್ಳು ಆರೋಪ ಮಾಡಿ, ಪಟ್ಟಾಭಿಯವರ ಮೇಲೆ ತಕ್ಷಣವೇ ಕ್ರಮ ಕೈಗೊಳ್ಳಬೇಕು ಎಂದು ಕಾಲೇಜಿನ ಪ್ರಿನ್ಸಿಪಾಲರಿಗೆ ದೂರು ನೀಡಿ, ಮರುದಿನ ಕಾಲೇಜು ಬಂದ್ ಮಾಡುತ್ತೇವೆ ಎಂದು ಘೋಷಿಸಿದರು. "ನಾನು ಟಿ.ವಿ.ಯವರನ್ನು ಹೇಳಿ ಕರೆಸಿಲ್ಲ, ಕಾಲೇಜು ಸಾರ್ವಜನಿಕ ಸ್ಥಳವಾದ್ದರಿಂದ ಅವರೇ ಖುದ್ದಾಗಿ ಬಂದಿದ್ದಾರೆ. ಅವರಿಗೆ ನೀಡಿದ ಸಂದರ್ಶನದಲ್ಲಿ ನಾನು ಒಬ್ಬ ಜವಾಬ್ದಾರಿಯುತ ನಾಗರಿಕ ಹಾಗು ಉಪಾಧ್ಯಾಯನಾಗಿ ಪಬ್‌ನಲ್ಲಿ ನಡೆದ ದಾಳಿಯ ಬಗ್ಗೆ ನನ್ನ ಅಭಿಪ್ರಾಯ ವ್ಯಕ್ತಪಡಿಸಿದ್ದೇನೆ" ಎಂದು ಪಟ್ಟಾಭಿರಾಮ ಸೋಮಯಾಜಿ ಸ್ಪಷ್ಟವಾಗಿ ಹೇಳಿದ್ದಾರೆ (ದಿ ಹಿಂದು, 30.1.2009, ಪು.5). ಆದರೂ, ಜನವರಿ 29ರಂದು ಬೆಳಗ್ಗೆ ಕಾಲೇಜು ಯಥಾಪ್ರಕಾರ ಶುರುವಾದ ನಂತರ ಅಭಾವಿಪಕ್ಕೆ ಸೇರಿದ 70-80 ಮಂದಿ, ಮಾಧ್ಯಮಗಳ ವರದಿಗಾರರು ಮತ್ತು ಪೊಲೀಸರ ಮೇಳ ಸಹಿತ, ಕಾಲೇಜಿನ ಆವರಣದಲ್ಲಿ ಜಮಾಯಿಸಿ "ಶ್ರೀರಾಮ ಸೇನೆ ಕೀ ಜೈ", "ಪಟ್ಟಾಭಿ ಡೌನ್ ಡೌನ್" ಎಂದು ಘೋಷಣೆ ಹಾಕತೊಡಗಿದರು.

ಇವರ ಬಂದ್ ಕರೆಗೆ ಹೆಚ್ಚಿನ ವಿದ್ಯಾರ್ಥಿಗಳ ಬೆಂಬಲ ವಿರಲಿಲ್ಲವಾಗಿ, ಮುಕ್ಕಾಲುವಾಸಿ ವಿದ್ಯಾರ್ಥಿಗಳು ತರಗತಿಯಲ್ಲಿ ಪಾಠ ಕೇಳುತ್ತಿದ್ದರು. ಆದರೆ ಪ್ರತಿಭಟನೆ ಮಾಡುತ್ತಿದ್ದವರು ತರಗತಿಗಳಿಗೂ ಹೋಗಿ, ಪಾಠ ಮಾಡುತ್ತಿದ್ದ ಅಧ್ಯಾಪಕರ ವಿರೋಧವನ್ನು ಲೆಕ್ಕಿಸದೆ ಬಲಾತ್ಕಾರದಿಂದ ವಿದ್ಯಾರ್ಥಿಗಳನ್ನು ಹೊರಗೆ ಕಳಿಸಿ ಕಾಲೇಜು ಬಂದ್ ಮಾಡಿದರು. ಹೀಗೆ ಹೊರಗೆ ವಿದ್ಯಾರ್ಥಿಗಳನ್ನು ತಂದು ಹಾಕಿದ ಗುಂಪು ಮತ್ತದೇ ಘೋಷಣೆಗಳನ್ನು ಕೆಟ್ಟ ನರ್ತನದೊಟ್ಟಿಗೆ ಮುಂದುವರೆಸಿತು. ಒತ್ತಾಯದಲ್ಲಿ ತರಗತಿ ವಂಚಿತೆಯಾದ ವಿದ್ಯಾರ್ಥಿಯನ್ನು 'ದಿ ಹಿಂದು' ವರದಿಗಾರರು ಮಾತನಾಡಿಸಿದಾಗ ಆಕೆ "ಪಟ್ಟಾಭಿಯವರಿಗೆ ಶ್ರೀರಾಮ ಸೇನೆಯನ್ನು ಖಂಡಿಸುವ ಹಕ್ಕು ಇದೆ. ನಾನು ಸಹ ಅದೇ ಅಭಿಪ್ರಾಯ ಹೊಂದಿದ್ದೇನೆ..." ಎಂದು ಹೇಳುತ್ತಿದ್ದ ಹಾಗೆಯೇ ಪ್ರತಿಭಟನಾಕಾರರು ಆಕೆಯನ್ನು ಸುತ್ತುವರೆದು ಬಾಯಿ ಮುಚ್ಚಿಸಿದರು (ದಿ ಹಿಂದು, 30.1.2009, ಪು.5).

ತಾಲಿಬಾನೀಕರಣ: ಎರಡೂ ಕಡೆಗಳಿಂದ

"ಜನಜೀವನವನ್ನು ತಾಲಿಬಾನೀಕರಣಗೊಳಿಸುವ ಸಂಘಪರಿವಾರದ ಕಾರ್ಯಕ್ರಮದಲ್ಲಿ ಮುಸ್ಲಿಮ್ ಕೋಮುವಾದಿಗಳು ಸಹ ಅವರ ಜೊತೆ ಕೈಜೋಡಿಸಿದ್ದಾರೆ. ಕರಾವಳಿಯ ಕೆಲವು ಶಿಕ್ಷಣ ಸಂಸ್ಥೆಗಳಲ್ಲಿ ಮುಸ್ಲಿಮ್ ವಿದ್ಯಾರ್ಥಿನಿಯರು ಬುರ್ಖಾ ಧರಿಸಿ ತರಗತಿಗೆ ಹಾಜರಾಗಬಾರದು ಎಂದು ಎಬಿವಿಪಿ ಈಗ ಆಗ್ರಹಪಡಿಸುತ್ತಿದೆ. ಆದರೆ ಅದೇ ವೇಳೆ 'ನಮ್ಮ ಮಹಿಳೆಯರು' ಬುರ್ಖಾ ಧರಿಸದೆ ಮನೆಯಿಂದ ಹೊರಗೆ ಕಾಲಿಡಬಾರದು ಎಂದು ಕೆಲವು ಮುಸ್ಲಿಮ್ ಸಂಘಟನೆಗಳು ತಾಕೀತು ಮಾಡುತ್ತಿವೆ. ಸೌಹಾರ್ದ ಸಂಸ್ಕೃತಿಯನ್ನು ಪ್ರತಿಪಾದಿಸುತ್ತಿರುವವರು ಈ ಎರಡೂ ಬಗೆಯ ತಾಲಿಬಾನೀಕರಣವನ್ನು ವಿರೋಧಿಸಬೇಕು"


– ಪಬ್ ದಾಳಿಯನ್ನು ಪ್ರತಿಭಟಿಸಲು ಮಂಗಳೂರು ಪುರಭವನದ ಎದುರು ಜನವರಿ 30ರಂದು ನಡೆದ ಸಭೆಯಲ್ಲಿ ಖ್ಯಾತ ಲೇಖಕಿ ಸಾರಾ ಅಬೂಬಕರ್ ಹೇಳಿದ ಮಾತುಗಳು.

ಪಟ್ಟಾಭಿರಾಮ ಸೋಮಯಾಜಿ ಕಳೆದ 20 ವರ್ಷಗಳಿಂದ ವಿಶ್ವವಿದ್ಯಾಲಯ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಅವಧಿಯಲ್ಲಿ ಅವರು ಅಮೆರಿಕದ ಬಹುರಾಷ್ಟ್ರೀಯ ಕಂಪೆನಿ ಕೊಜೆಂಟ್ರಿಕ್ಸ್ ದಕ್ಷಿಣ ಕನ್ನಡದ ನಂದಿಕೂರಿನಲ್ಲಿ ಸ್ಥಾಪಿಸಲು ಹೊರಟಿದ್ದ ಉಷ್ಣವಿದ್ಯುತ್ ಸ್ಥಾವರದ ವಿರುದ್ಧ ನಡೆದ ಬೃಹತ್ ಆಂದೋಲನ, ಕುದುರೆಮುಖ ಗಣಿಗಾರಿಕೆಯ ವಿರುದ್ಧ ನಡೆದ ಚಳವಳಿ, ಕುದುರೆ ಮುಖ ರಾಷ್ಟ್ರೀಯ ಉದ್ಯಾನದಲ್ಲಿ ಆದಿವಾಸಿಗಳ ಹಕ್ಕಿಗಾಗಿ ನಡೆದ ಚಳವಳಿ, ಬಾಬಾಬುಡನ್‌ಗಿರಿಯ ಸೌಹಾರ್ದ ಪರಂಪರೆಯನ್ನು ಉಳಿಸಲು ನಡೆಯುತ್ತಿರುವ ಚಳವಳಿ, ಈಗ್ಗೇ ಎರಡು ವರ್ಷಗಳಿಂದ ಶುರುವಾಗಿರುವ ಎಸ್.ಇ.ಜೆಡ್. ಸಂತ್ರಸ್ತರ ಚಳವಳಿ ಮತ್ತು ಸಂಘಪರಿವಾರದ ಕೋಮು ಹಿಂಸೆಯನ್ನು ವಿರೋಧಿಸುವ ಎಲ್ಲ ಪ್ರಗತಿಪರ ಚಳವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ನಿರ್ಭಿಡೆಯಿಂದ ದಮನಕ್ಕೆ ತುತ್ತಾದವರ ಪರವಾಗಿ ಮಾತನಾಡುತ್ತ ಬಂದಿದ್ದಾರೆ. ಇದನ್ನೆಲ್ಲ ಪಟ್ಟಾಭಿ ಭಾರತದ ಪ್ರತಿ ಪ್ರಜೆಗೂ ಲಭ್ಯವಿರುವ ಸಂವಿಧಾನಿಕ ಹಕ್ಕುಗಳ ವ್ಯಾಪ್ತಿಯೊಳಗೆ ಮಾಡುತ್ತ ಬಂದಿದ್ದಾರೆ. ಹಾಗಂತ, ಸೋಮಯಾಜಿ ಕಾಲೇಜಿನ ತಮ್ಮ ಬೋಧನೆಯ ವೃತ್ತಿಗೆ ಚ್ಯುತಿಯುಂಟು ಮಾಡಿಲ್ಲ.

ಇಂಥ ಪಟ್ಟಾಭಿಯವರ ವಿರುದ್ಧ ಅಭಾವಿಪ ಮಾಡುವ ಆರೋಪ – ಅವರು ಹಿಂದೂಗಳ ವಿರುದ್ಧ ಮಾತನಾಡುತ್ತಾರೆ ಮತ್ತು ಎಡಪಂಥೀಯ ಧೋರಣೆಗಳನ್ನು ವಿದ್ಯಾರ್ಥಿಗಳಲ್ಲಿ ತುಂಬುತ್ತಾರೆ. ಸಂಘಪರಿವಾರದ ರಾಜಕೀಯವನ್ನು ವಿರೋಧಿಸುವುದು ಹಿಂದೂ ವಿರೋಧಿ ನಿಲುವು ಎನ್ನುವುದು ಸಂಘಪರಿವಾರ ರೂಢಿಸಿರುವ ಹಸಿ ಸುಳ್ಳು; ಅಂತಹ ಆರೋಪಕ್ಕೆ ಭಾರತದ ಸಂವಿಧಾನದ ಚೌಕಟ್ಟಿನಲ್ಲಿಯೂ, ಪರಂಪರೆಯ ಲೋಕಗ್ರಹಿಕೆಯಲ್ಲಿಯೂ ಯಾವುದೇ ಸ್ಥಾನವಿಲ್ಲ. ಇನ್ನು ಪಟ್ಟಾಭಿ ತರಗತಿಯಲ್ಲಿ ಬೋಧಿಸುವುದು ಇಂಗ್ಲಿಷ್ ಸಾಹಿತ್ಯ ಮತ್ತು ವ್ಯಾಕರಣ; ಮಂಗಳೂರು ವಿ.ವಿ. ಈ ವಿಷಯಗಳಲ್ಲಿ ನಿಗದಿಪಡಿಸಿರುವ ಪಠ್ಯಗಳನ್ನು ಸೋಮಯಾಜಿ ಕ್ರಮಪ್ರಕಾರ ಬೋಧಿಸಿಕೊಂಡು ಬರುತ್ತಿದ್ದಾರೆ ಹಾಗು ಅವರು ತಮ್ಮ ಕೆಲಸವನ್ನು ನಿರ್ವಹಿಸುತ್ತಿದ್ದಾರೋ ಇಲ್ಲವೋ ಎಂದು ಗಮನಿಸಲಿಕ್ಕೆ ಕಾಲೇಜಿನ ಮುಖ್ಯಸ್ಥರಿದ್ದಾರೆ – ಇದರಲ್ಲಿ ಈ ಸಬ್‌ಜೂನಿಯರ್‌ಗಳ ನೇರ ಉಸ್ತುವಾರಿಗೆ ಯಾವ ವಿಶ್ವವಿದ್ಯಾಲಯದ ನಿಯ... ವಳಿಗಳೂ ಅವಕಾಶ ಮಾಡಿಕೊಡುವುದಿಲ್ಲ, ... ವಿವೇಕ ಇಟ್ಟುಕೊಂಡವರಿಗೆ, ಸೋಮಯಾಜಿಯ... ವಿರುದ್ಧ ಅಭಾವಿಪ ಮಾಡಿರುವ ಆರೋಪದಲ್ಲಿ ಸ... ಕಿರುಕುಳದ ಮೂಲಕ ಬಾಯ್ಮುಚ್ಚಿಸುವ ಉದ್ದೇಶದ ಹೊರ... ಬೇರೆ ಸತ್ವವಿಲ್ಲ ಎನ್ನುವುದು ಗೊತ್ತಾಗಿ ಹೋಗುತ್ತದೆ.

ಮಂಗಳೂರು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾ... ರುವ ಪಿ.ವಿ.ಮೋಹನ್ ಇಂತಹ ವಿವೇಕವುಳ್ಳ ... ಜನವರಿ 29ರಂದು ಅಭಾವಿಪ ಕಾಲೇಜಿನಲ್ಲಿ ಗದ್ದಲವೆ... ದಾಗ ಮೋಹನ್ ಬಿಕ್ಕಟ್ಟನ್ನು ಪರಿಹರಿಸುವ ಸದಾಶ... ದಿಂದ ಪ್ರಿನ್ಸಿಪಾಲರ ಹತ್ತಿರ ಸಮಾಲೋಚಿಸಿ, ಪ್ರತಿಭಟನ... ರತ ವಿದ್ಯಾರ್ಥಿಗಳ ಹತ್ತಿರ ಮಾತುಕತೆಗೆ ಬಂದರೆ, ಅಭಾ... ವಿಪದ ಅಧ್ಯಕ್ಷ "ನಿಮ್ಮ ಹತ್ತಿರ ಮಾತನಾಡುವ ಅವಶ್ಯಕ... ಇಲ್ಲ, ನಾವು (ಕರ್ನಾಟಕದ ಉನ್ನತ ಶಿಕ್ಷಣ ಸಚಿವ... ಲಿಂಬಾವಳಿಯವರ ಜೊತೆ ನೇರ ಸಂಪರ್ಕದಲ್ಲಿದ್ದೇವ... ಎಂದನಂತೆ! ಮೋಹನ್ ಸಹ ಸಂಘಪರಿವಾರದ ರಾಜ... ಕೀಯದ ವಿರೋಧಿ ಹಾಗು ಕಾಂಗ್ರೆಸ್ ಪಕ್ಷಕ್ಕೆ ಸೇರಿದವರು... ಹಾಗಾಗಿ ಅವರೂ ಆರೋಪಿಗಳ ಪಾಳೆಯದವರು ಎನ್ನುವುದು ಅಭಾವಿಪದ ಮೂಲಗ್ರಹಿಕೆ. ಇದನ್ನು ಕಂಡು... ಮೋಹನ್ "ಈ ಕಾಲೇಜಿನಲ್ಲಿ ಇರುವ ಮತೀಯ... ಒಡಕನ್ನು ಕಂಡರೆ ಭಯವಾಗುತ್ತದೆ" ಎಂದರಂತೆ (ದಿ ಹಿಂದು, 30.1.2009, ಪು.5).

ಮೋಹನ್ ಹಾಗೆ ಹೇಳುವುದಕ್ಕೆ ಕಾರಣವಿದೆ... ಕರಾವಳಿಯಲ್ಲಿ ಕಾಲೇಜುಗಳು ಸಂಘಪರಿವಾರದ... ಕೂಡುದೊಡ್ಡಿಗಳಾಗುತ್ತಿವೆ. ಮಂಗಳೂರಿನ ವಿಶ್ವವಿದ್ಯಾಲಯ... ಕಾಲೇಜು ಸೇರಿದ ಹಾಗೆ ಕೆಲವು ಕಾಲೇಜುಗಳಲ್ಲಿ... ಅಭಾವಿಪ "ಇದು ಹಿಂದೂಗಳ ಕಾಲೇಜು. ಇಲ್ಲಿಗೆ... ಮುಸಲ್ಮಾನ ಹುಡುಗಿಯರು ಬುರ್ಖಾ ಹಾಕಿಕೊಂಡು... ಬರಕೂಡದು" ಎಂದು ಫರ್ಮಾನು ಹೊರಡಿಸಿದೆ... ವಿಶ್ವವಿದ್ಯಾಲಯ ಕಾಲೇಜಿನ ಮುಸಲ್ಮಾನ ವಿದ್ಯಾರ್ಥಿಯೊಬ್ಬ... ಒಂದು ದಿನ ನಮಾಜು ಮುಗಿಸಿ, ಟೋಪಿ ಹಾಕಿಕೊಂಡೇ... ಕಾಲೇಜಿಗೆ ಬಂದ. ಅವನನ್ನು ಕಂಡದ್ದೇ ಕೇಸರಿ ಶಾಲು... ಹಾಕಿಕೊಂಡ ಅಭಾವಿಪದ ಸಂಸ್ಕೃತಿ ಪೊಲೀಸರು ಅವನ... ಟೋಪಿಯನ್ನು ಕಿತ್ತೆಸೆದು "ಇದು ಹಿಂದೂಗಳ ಕಾಲೇಜು"... ಎಂದು ತಳ್ಳಾಡಿದರು. ಆ ವಿದ್ಯಾರ್ಥಿ ಪ್ರಿನ್ಸಿಪಾಲರ ಬಳಿ... ದೂರು ಕೊಟ್ಟರೆ, ಅವರು "ಅಯ್ಯೋ ಅವಕ್ಕೆ ದಿನಕ್ಕೊಂದು... ಇಂಥದ್ದು ಮಾಡದಿದ್ದರೆ ತಿಂದ ಅನ್ನ ಅರಗುವುದಿಲ್ಲ"... ಎಂದು ಅಸಹಾಯಕತೆ ತೋರಿಕೊಂಡರಂತೆ! ಈಗ... ಕಾಲೇಜುಗಳಲ್ಲಿ ಮುಸಲ್ಮಾನ ವಿದ್ಯಾರ್ಥಿಗಳು ಒಬ್ಬಂಟಿಯಾಗಿ... ಓಡಾಡುವುದಕ್ಕೆ ಹೆದರುವ ಪರಿಸ್ಥಿತಿ ಇದೆ.



ಕರಾವಳಿಯಲ್ಲಿ ವಿದ್ಯಾಲಯಗಳು ಎಷ್ಟು ಪವಿತ್ರವಾಗಿವೆ... ಹಾಗು ಅಲ್ಲಿ ಗುರುವಿಗೆ ಎಂತಹ ಗೌರವದ ಸ್ಥಾನವಿದೆ... ಎಂಬುದಕ್ಕೆ ಒಂದು ಉದಾಹರಣೆ ಕೊಡಬಹುದು. ಕರಾವಳಿಯ ಊರೂರು ಸುಸಂಸ್ಕೃತವೇ; ಇಂತಿಪ್ಪ ಒಂದೂ... ರಿನ ಒಂದು ಹೈಸ್ಕೂಲಿನಲ್ಲಿ ಒಬ್ಬ ಮೇಷ್ಟ್ರು 25 ವರ್ಷ... ಗಳಿಂದ ಕೆಲಸ ಮಾಡಿಕೊಂಡಿದ್ದಾರೆ. ಅವರು ಒಬ್ಬ... ಹಿಂದೂ, ಒಬ್ಬ ಸಂಸಾರಸ್ಥ. ಆದರೆ, ಸಂಘಪರಿವಾರದ... ರಾಜಕೀಯವನ್ನು ಒಪ್ಪದವರು ಮತ್ತು ಸಂಘಪರಿವಾರದ... ಹಿಂಸೆಯ ವಿರುದ್ಧ ನಡೆಯುವ ಸಭೆಗಳಲ್ಲಿ ಭಾಗವಹಿಸುವ... ವರು. ಅವರ ಮೇಲೆ ಆರೋಪ ಹೋರಿಸಲಿಕ್ಕೆ ಇಷ್ಟು... ಸಾಕು. ಒಂದು ದಿನ ಸಂಘಪರಿವಾರದ ದಂಡನಾಯಕರು... ಮುಖ್ಯೋಪಾಧ್ಯಾಯರ ಕೊಠಡಿಗೆ ಅವರನ್ನು ಕರೆಸಿ... ಮುಖ್ಯೋಪಾಧ್ಯಾಯರ ಸಮ್ಮುಖದಲ್ಲೇ ಅವರ ವಿಚಾರಣೆ... ನಡೆಸುತ್ತಾರೆ. ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಹಿಂದೂಗಳ... ಬಗ್ಗೆ ತಪ್ಪು ಕಲ್ಪನೆ ಬರುವ ಹಾಗೆ ಪಾಠಮಾಡುತ್ತೀರೆಂದು... ಆರೋಪಿಸಿ, ಅದಕ್ಕಾಗಿ ಬೇಷರತ್ ಕ್ಷಮೆಯಾಚಿಸ ಬೇಕು... ಎಂಬ ಶಿಕ್ಷೆ ನೀಡಿ, ಮುಂದೆ ಅಂತಹ ತಪ್ಪು ಮಾಡದ... ಹಾಗೆ ಬುದ್ಧಿವಾದವನ್ನೂ ಹೇಳುತ್ತಾರೆ. ಅವರ ತೀರ್ಪನ್ನು... ಈ ಅನುಭವಿ ಗುರು ಪಾಲಿಸದಿದ್ದಲ್ಲಿ ಪರಿಣಾಮ ನೆಟ್ಟಗಿರು... ವುದಿಲ್ಲ ಎಂದು ಎಚ್ಚರಿಸುವುದನ್ನು ಮಾತ್ರ ಮರೆಯುವು... ದಿಲ್ಲ. ಈ ದಂಡನಾಯಕರ ಗುಂಪಿನಲ್ಲಿ, ಅದೇ ಶಾಲೆಯಲ್ಲಿ... ಈ ಗುರುವಿನಿಂದಲೇ ಪಾಠ ಕಲಿತ ಹಳೆ ವಿದ್ಯಾರ್ಥಿಗಳೂ... ಇರುತ್ತಾರೆ ಮತ್ತು 'ಗುರು ಭಕ್ತಿ' ಪ್ರಕಟಿಸುವ ಹೊಸ... ವರಸೆಯ ದರ್ಶನ ಮಾಡಿಸುತ್ತಾರೆ.

■ ಕೆ.ಫಣಿರಾಜ್



ಮಂಗಳೂರು ಪಬ್ ದಾಳಿ: ಸರ್ಕಾರ ಪರಿಹಾರವಲ್ಲ; ಸರ್ಕಾರವೇ ಸಮಸ್ಯೆ

ಕಳೆದ ಶನಿವಾರ, ಜನವರಿ 24 ರಂದು ಮಂಗಳೂರಿನ ಬ್ ಒಂದರ ಮೇಲೆ ನಡೆದ ದಾಳಿ ಈಗ ರಾಷ್ಟ್ರಮಟ್ಟದಲ್ಲಿ ದ್ದಿ ಮಾಡಿದೆ. ಬಹುಶಃ ಈ ದಾಳಿಯನ್ನು ಸಂಘಟಿಸಿದ ರಾಮ ಸೇನೆಯವರಿಗೆ ಬೇಕಾಗಿದ್ದುದೂ ಅದೇ. ಂಗಳೂರಿನ ಟೀವಿ ಚಾನೆಲ್ಲುಗಳವರಿಗೆ ಈ ದಾಳಿ ಬಿತು ಮೊದಲೇ ಸೂಚನೆ ಕೊಡಲಾಗಿತ್ತು, ಅವರು ಷ್ಟು ಮುಂಚಿತವಾಗಿಯೇ ಸ್ಥಳಕ್ಕೆ ಆಗಮಿಸಿ ತಮ್ಮ ಮೆರಾಗಳನ್ನು ಸೂಕ್ತ ಜಾಗಗಳಲ್ಲಿ ಇರಿಸಿ ಘಟನೆಯ ತ್ರೀಕರಣಕ್ಕೆ ರೆಡಿಯಾಗಿದ್ದರು. ಒಬ್ಬ ಕ್ಯಾಮರಾಮನ್ ಕ್ಷನ್' ಎಂದು ಹೇಳಿದ ಮೇಲೆಯೇ, ಪಬ್‌ನ ಆವರಣದಲ್ಲಿ ದಿದ್ದ ಯುವಕರು ತಮ್ಮ ಕೆಲಸ ಪ್ರಾರಂಭಿಸಿದರಂತೆ!

ಟಿವಿ ಚಾನೆಲ್ಲುಗಳು ಪದೇಪದೇ ತೋರಿಸಿದ ಈ ಳಿಯ ಚಿತ್ರಿಕೆಗಳು ಯಾವುದೇ 'ಬಿ' ಗ್ರೇಡ್ ಕನ್ನಡ ನಿಮಾದ ದೃಶ್ಯಗಳಿಗಿಂತಲೂ ಹೆಚ್ಚು ಭಯಾನಕವಾಗಿವೆ. ಮಾಗಳಲ್ಲಿ ಈ ಬಗೆಯ ದೃಶ್ಯಗಳಲ್ಲಿ ಕೊನೆಗೆ ಗೆಲ್ಲುವುದು ಳ್ಳೆಯವರೇ. ಅಕಸ್ಮಾತ್ ಅದೊಂದು ಟ್ರಾಜೆಡಿ ನಿಮಾವಾಗಿದ್ದು ಒಳ್ಳೆಯವರು ಸೋತರೂ, ಒಳ್ಳೆಯತನ ಗೆದ್ದಿರುತ್ತದೆ. ಮಂಗಳೂರಿನ ಪಬ್ ಮೇಲೆ ನಡೆದ ದಾಳಿ ದೃಶ್ಯಗಳನ್ನು ಟಿವಿಯಲ್ಲಿ ನೋಡಿದ ನಾಡಿನ ಕೋಟ್ಯಂತರ ಪ್ರೇಕ್ಷಕರೂ ಅದೇ ತೀರ್ಮಾನಕ್ಕೆ ಬಂದಿರಬಹುದು.

ಇದು ತೀರಾ ಸಿನಿಕತನದ ಮಾತು ಅನ್ನಿಸುತ್ತದೆಯೇ? ರಾಜ್ಯದಲ್ಲಿ ಈಗ ಯಾರ ಸರ್ಕಾರವಿದೆ ಎಂದು ಯೋಚಿಸಿ. ಖ್ಯಾತ ಎಡಪಂಥೀಯ ವಿಮರ್ಶಕ ವಾಲ್ಟರ್ ಬೆಂಜಮಿನ್ ಫ್ಯಾಸಿಸಂ ತನ್ನ ಸಿದ್ಧಾಂತವನ್ನು ಪ್ರದರ್ಶಕ ಕಲೆಯಾಗಿ ಮಾರ್ಪಡಿಸಿ, ಜನರನ್ನು ವಶಕ್ಕೆ ತೆಗೆದುಕೊಳ್ಳುತ್ತದೆ" ಎಂದು ಹೇಳಿದ. ಬೆಂಜಮಿನ್ ಜರ್ಮನಿಯವನು. ಜರ್ಮನಿಯಲ್ಲಿ ನಾಜಿಯ ಆಳ್ವಿಕೆ ಪ್ರಾರಂಭವಾದಾಗ ಬೆಂಜಮಿನ್ ಸೆರೆಯಾಳಾಗುವುದನ್ನು ತಪ್ಪಿಸಿಕೊಳ್ಳಲು ವಿಫಲನಾಗಿ ಆತ್ಮಹತ್ಯೆ ಮಾಡಿಕೊಂಡ. ರಾಷ್ಟ್ರೀಯತೆಯ ಹೆಸರಿನಲ್ಲಿ ಜನಾಂಗ ದ್ವೇಷ, ಹಿಂಸೆ ಮತ್ತು ಆಕ್ರಮಣಗಳನ್ನು ನಾಝಿಗಳು ಜನರಿಗೆ ಆಕರ್ಷಕ ಪ್ರದರ್ಶನಗಳನ್ನಾಗಿ ಮಾರ್ಪಡಿಸಿದರು ಎಂಬುದನ್ನು ಹಿಟ್ಲರನ ಬೃಹತ್ ರ್‍ಯಾಲಿಗಳಲ್ಲಿ ಬೆಂಜಮಿನ್ ಸ್ಪಷ್ಟವಾಗಿ ಕಂಡಿದ್ದ. ಯಾಹೂದಿಗಳನ್ನು ಕೊಲ್ಲುವುದು ನ್ಯಾಯ ಸಮ್ಮತ; ಅವರು ಯಹೂದಿ ಎಂಬ ಕಾರಣಕ್ಕೇನೆ ಅಪರಾಧಿಗಳು ಎಂದು ಜರ್ಮನಿಯ ಸಾಮಾನ್ಯ ಪ್ರಜೆಗಳಿಗೆ ನಾಝಿಗಳು ಮನವರಿಕೆ ಮಾಡಿಕೊಟ್ಟದ್ದು ಹಿಂಸೆಯನ್ನು ಒಂದು ಸಾರ್ವಜನಿಕ ಪ್ರದರ್ಶನ ಮತ್ತು ಕಾರ್ಯಕ್ರಮವನ್ನಾಗಿ ಮಾರ್ಪಡಿಸುವುದರ ಮುಖಾಂತರ. ವಾಲ್ಟರ್ ಬೆಂಜಮಿನ್ ನನ್ನು ದ್ವೇಷಿಸಲು ನಾಝಿಗಳಿಗೆ ಎರಡು ಕಾರಣಗಳಿದ್ದವು. ಆತ ಒಬ್ಬ ಮಾರ್ಕ್ಸ್‌ವಾದಿ ಚಿಂತಕನಾಗಿದ್ದ; ಸಾಲದ್ದಕ್ಕೆ ಯಹೂದಿಯೂ ಆಗಿದ್ದ.

ಮಂಗಳೂರಿನ ಪಬ್ ದಾಳಿಯನ್ನು ಸಂಘಟಿಸಿದ ಶ್ರೀರಾಮಸೇನೆ ಮೇಲೆ ಹೇಳಿದ ನಾಝಿ ತಂತ್ರವನ್ನು ಅನುಸರಿಸಿ ನಾಡಿನ ಮೂಲೆಮೂಲೆಗೂ ತನ್ನ ಸಂದೇಶವನ್ನು ತಲುಪಿಸುವುದರಲ್ಲಿ ಯಶಸ್ವಿಯಾಗಿದೆ. ಶ್ರೀರಾಮಸೇನೆಯ ರಾಜ್ಯ ಉಪಸಂಚಾಲಕನೂ ಸ್ವತಃ ಮಂಗಳೂರು ನಿವಾಸಿಯೂ ಆಗಿರುವ ಪ್ರಸಾದ್ ಅತ್ತಾವರ ಎಂಬಾತ, ಆ ದಾಳಿಯನ್ನು ತಾವೇ ನಡೆಸಿರುವುದಾಗಿಯೂ, ಭಾರತೀಯ ಸಂಸ್ಕೃತಿಗೆ ತಕ್ಕುದಲ್ಲದ ರೀತಿಯಲ್ಲಿ ವರ್ತಿಸುತ್ತಿದ್ದ ತರುಣಿಯರನ್ನು ಸರಿದಾರಿಗೆ ತರಲು ನಡೆದ ಆ ಕಾರ್ಯಕ್ರಮದಲ್ಲಿ ಜನರು ಸ್ವಯಂ ಪ್ರೇರಿತವಾಗಿಯೇ ಮುಂದೆ ಬಂದು ಭಾಗವಹಿಸಿದ್ದಾರೆ ಎಂದೂ ಪತ್ರಕರ್ತರ ಎದುರು ಹೇಳಿಕೊಂಡಿದ್ದಾನೆ. ಭಾರತೀಯ ಸಂಸ್ಕೃತಿಯ ರಕ್ಷಣೆಯ ಹೊಣೆಯನ್ನು ತನಗೆ ತಾನೇ ಆರೋಪಿಸಿಕೊಂಡಿರುವ ಶ್ರೀರಾಮಸೇನೆಯ ರಾಜ್ಯ ಸಂಚಾಲಕ ಪ್ರಮೋದ್ ಮುತಾಲಿಕನೂ ಮಂಗಳೂರಿನ ಘಟನೆಯನ್ನು ಹಾಗೆಯೇ ಸಮರ್ಥಿಸಿಕೊಂಡಿದ್ದಾನೆ. ಕರ್ನಾಟಕದ ದಾರಿತಪ್ಪಿದ ತರುಣಿಯರನ್ನು ಸರಿದಾರಿಗೆ ತರಲು ಅವರ ಹೆತ್ತವರು, ಕುಟುಂಬದ ಹಿರಿಯರು, ಅಧ್ಯಾಪಕರು ಯಾರೂ ಇಲ್ಲವೋ? ಅಥವಾ ಈ ಗುರುಹಿರಿಯರೇ ತಮ್ಮ ಹೆಣ್ಣುಮಕ್ಕಳ ಜವಾಬ್ದಾರಿಯನ್ನು ಪ್ರಸಾದ್ ಅತ್ತಾವರ ಪುಂಡ ಗೈರೆಗಳಿಗೆ ವಹಿಸಿಕೊಟ್ಟಿದ್ದಾರೋ? ಪಬ್ ಸಂಸ್ಕೃತಿಯ ಬಗ್ಗೆ ಪ್ರಸಾದ್ ಅತ್ತಾವರ ಮತ್ತು ಅವನ ಸಂಘಟನೆಯವರು ಅಷ್ಟು ಸಿಟ್ಟಾಗಿರುವುದು, ತರುಣಿಯರು ಪಬ್‌ಗೆ ಹೋಗಿ ಅಂಡಿತ ಇತ್ಯಾದಿ ಮಾಡುತ್ತಾರೆ ಎಂಬ ಕಾರಣಕ್ಕಾಗಿ ಮಾತ್ರವಲ್ಲ. "ಈ ಹಿಂದೂ ತರುಣಿಯರು ಮುಸ್ಲಿಮ್ ಹುಡುಗರ ಜೊತೆ 'ಕ್ಲೋಸ್' ಆಗುವ ದಾಷ್ಟ್ಯ ತೋರಿಸುತ್ತಿದ್ದಾರೆ" ಎಂಬುದೂ ಪ್ರಸಾದ್ ಅತ್ತಾವರನನ್ನು ಕೆರಳಿಸಿದೆ. ಹಾಗೆಂದು ಅವನೇ ಸ್ಪಷ್ಟವಾಗಿ ಹೇಳಿದ್ದಾನೆ. (ದ ಹಿಂದು, ತಾ 25.1.09 ಪುಟ 3)

ಪಬ್ ದಾಳಿಯ ಉದ್ದೇಶದ ಕುರಿತು ಪ್ರಸಾದ್ ಅತ್ತಾವರ ಮತ್ತು ಪ್ರಮೋದ್ ಮುತಾಲಿಕ್ ಹೇಳಿಕೆಗಳ ಹಿನ್ನೆಲೆಯಲ್ಲಿ ಈ ದಾಳಿಗೂ ಸಂಘ ಪರಿವಾರಕ್ಕೂ ಯಾವುದೇ ಸಂಬಂಧವಿಲ್ಲವೆಂಬ ರಾಜ್ಯ ಗೃಹಮಂತ್ರಿಗಳ ಮಾತನ್ನು ನಾವು ನಂಬಬಹುದೆ? ಅವರ ವ್ಯಕ್ತಿತ್ವವೇ ನಂಬಿಕೆಗೆ ಯೋಗ್ಯವಾದದ್ದಲ್ಲ ಎಂಬುದು ಕಳೆದ 200 ದಿನಗಳ ಅವರ ಕಾರ್ಯನಿರ್ವಹಣೆಯಿಂದಲೇ ಸ್ಪಷ್ಟವಾಗಿದೆ. ಶ್ರೀರಾಮಸೇನೆಯ ಕೃತ್ಯಗಳಿಗೆ ತಾವು ಉತ್ತರದಾಯಿಯಲ್ಲ ಎಂಬ ಅವರ ನಿಲುವಂತೂ ನೈತಿಕ ಬೇಜವಾಬ್ದಾರಿತನದ್ದು.

ಶ್ರೀರಾಮಸೇನೆ ಸಂಘ ಪರಿವಾರಕ್ಕೆ ಅಧಿಕೃತವಾಗಿ ಸೇರಿದ ಸಂಘಟನೆ ಹೌದೋ ಅಲ್ಲವೋ ಎಂದು ಕಟ್ಟಿಕೊಂಡು ಪ್ರಜೆಗಳಿಗೆ ಏನಾಗಬೇಕಾಗಿದೆ? ಶ್ರೀರಾಮ ಸೇನೆ ಸಹ ಅನುಸರಿಸುತ್ತಿರುವುದು ಅನ್ಯಮತೀಯರನ್ನು ದ್ವೇಷಿಸುವ ಸಂಘ ಪರಿವಾರದ ಸಿದ್ಧಾಂತವನ್ನೇ. ಶ್ರೀರಾಮಸೇನೆ, ಹಿಂದೂ ಯುವ ಸೇನೆ, ಹಿಂದೂ ಜಾಗರಣ ವೇದಿಕೆ, ಭಜರಂಗದಳ, ಶಿವಸೇನೆ ಮತ್ತು ಸಂಘ ಪರಿವಾರ ಇವುಗಳ ನಡುವೆ ಏನು ವ್ಯತ್ಯಾಸವಿದೆ ಎಂದು ನಮಗಂತೂ ತಿಳಿಯದು. 'ಅಳಿಯ ಅಲ್ಲ; ಮಗಳ ಗಂಡ' ಎಂದು ಹೇಳಿದ ರಾಜ್ಯ ಗೃಹಮಂತ್ರಿಗಳು, ಶ್ರೀರಾಮಸೇನೆ ಸಂಘ ಪರಿವಾರಕ್ಕೆ ಸೇರಿದ ಸಂಘಟನೆ ಅಲ್ಲ ಎನ್ನುತ್ತಿದ್ದಾರೆ. ಗಾಂಧೀಜಿ ಕೊಲೆಯಿಂದ ಹಿಡಿದು ಮಾಲೆಗಾಂವ್ ಬಾಂಬ್ ಪ್ರಕರಣದವರೆಗೆ ನಡೆದ ಹಲವು ಅಕೃತ್ಯಗಳಲ್ಲಿ ತನ್ನ ಜವಾಬ್ದಾರಿಯಿಂದ ಕಳಚಿಕೊಳ್ಳಲು ಸಂಘಪರಿವಾರ ಅನುಸರಿಸುತ್ತಿರುವ ತಂತ್ರ ಇದು. ಟೆಕ್ನಿಕಲ್ ಕಾರಣಗಳನ್ನು ಮುಂದಿಟ್ಟು ಈ ಕೃತ್ಯಗಳನ್ನು ಎಸಗಿದವರು ತಮ್ಮ ಸಂಘಟನೆಗೆ ಸೇರಿದವರಲ್ಲ ಎಂಬ ಸಂಘ ಪರಿವಾರದ ಮಾಮೂಲಿ ತಂತ್ರವನ್ನೇ ರಾಜ್ಯ ಗೃಹಮಂತ್ರಿಗಳು ಪಬ್ ದಾಳಿ ಪ್ರಕರಣದಲ್ಲೂ ಅನುಸರಿಸಿದ್ದಾರೆ. ಜೊತೆಗೆ ಅದು ಹಣ ವಸೂಲಿ ತಂಡದ ಕ್ರಿಮಿನಲ್ ಕೃತ್ಯವೆಂದು ವರ್ಣಿಸಿ ಮತ್ತೊಂದು ಹಸಿ ಸುಳ್ಳನ್ನು ಹೇಳಿದ್ದಾರೆ.

ಮಂಗಳೂರಿನಲ್ಲಿ ಮೊನ್ನೆ ನಡೆದ ಘಟನೆ, ಕೋಮು ದ್ವೇಷ ಮತ್ತು ಸಾಂಸ್ಕೃತಿಕ ಅಸಹನೆಯ ಹಿಂದೂತ್ವ ಸಿದ್ಧಾಂತದ ಒಂದು ಸಾರ್ವಜನಿಕ ಕಾರ್ಯಕ್ರಮವಾಗಿದ್ದರೂ ಅದು ಒಂದು ಮಾಮೂಲಿ ಕ್ರಿಮಿನಲ್ ಕೃತ್ಯವೆಂಬಂತೆ ರಾಜ್ಯ ಗೃಹಮಂತ್ರಿಗಳೇ ಹಾರಿಕೆಯ ಮಾತಾಡಿದ್ದಾರೆ. ರಾಜ್ಯದ ಪ್ರಜೆಗಳು ಹಾಗಿರಲಿ, ಸ್ವತಃ ಗೃಹಮಂತ್ರಿಗಳೇ ತಮ್ಮ ಮಾತನ್ನು ನಂಬುತ್ತಾರೆಯೆ? ಉಡುಪಿಯವರೇ ಆದ ಗೃಹಮಂತ್ರಿಗಳಿಗೆ, ಕಳೆದ ಹತ್ತಾರು ವರ್ಷಗಳಿಂದ ಉಡುಪಿ, ಮಂಗಳೂರು ನಗರಗಳ ಆಸುಪಾಸಿನಲ್ಲಿ ನಡೆದಿರುವ ಇಂತಹ ಹಲವು ಘಟನೆಗಳು ಗೊತ್ತಿಲ್ಲವೆ? ಕರಾವಳಿಯಲ್ಲಿ ಇಂತಹ ಘಟನೆಗಳಿಗೆ ಒಂದು ಸುದೀರ್ಘ ಪರಂಪರೆಯೇ ಇದೆ. ಉದಾಹರಣೆ: 2006 ಡಿಸೆಂಬರ್ 13 ರಂದು ಮಂಗಳೂರಿನ ಅತ್ಯಂತ ಜನನಿಬಿಡ ಪ್ರದೇಶವಾದ ಬಸ್‌ಸ್ಟ್ಯಾಂಡ್ ಸಮೀಪದ ಐಡಿಯಲ್ ಐಸ್‌ಕ್ರೀಮ್ ಪಾರ್ಲರಿನಲ್ಲಿ ಇಬ್ಬರು ಹಿಂದೂ ತರುಣಿಯರ ಜೊತೆ ಕೂತಿದ್ದರು ಎಂಬ ಕಾರಣಕ್ಕೆ ಮಹಮದ್ ಸಾಹುಲ್, ನವೀದ್ ಹಮೀದ್ ಮತ್ತು ಮಿಸ್‌ಬಾ ಅರ್ಷದ್ ಎಂಬ ಮೂವರು ಮುಸ್ಲಿಮ್ ತರುಣರ ಮೇಲೆ ಮಾರಕ ಹಲ್ಲೆ ನಡೆಯಿತು. ಈ ಘಟನೆ ನಡೆದದ್ದು ನಡುಹಗಲಿನ 2.30 ರ ಸುಮಾರಿಗೆ. ಈ ಮುಸ್ಲಿಮ್ ತರುಣರು ಮತ್ತು ಇವರ ಜೊತೆಗಿದ್ದ ಹಿಂದೂ ತರುಣಿಯರು, ಆ ಐಸ್‌ಕ್ರೀಮ್ ಪಾರ್ಲರಿನ ಸಮೀಪದಲ್ಲಿ ಒಂದು 'ಟ್ಯುಟೋರಿಯಲ್ಸ್'ನ ವಿದ್ಯಾರ್ಥಿಗಳಾಗಿದ್ದರು. ಇವರಿಗೆ ಹೊಡೆದ ತಂಡದಲ್ಲಿ ಹಿಂದೂ ಯುವ ಸೇನೆಯವರು ಎನ್ನಲಾದ ಸುಮಾರು 15 ಜನರಿದ್ದರು. ಮಂಗಳೂರು ಮತ್ತು ಉಡುಪಿಗಳಲ್ಲಿ ಇಂತಹ ಹಲವು ಘಟನೆಗಳು ನಡೆದಿದ್ದರೂ ಅದುವರೆಗೆ ಹಿಂದೂ ತರುಣಿಯರ ಮೇಲೆ ಕೈ ಮಾಡಿದ ಪ್ರಸಂಗ ನಡೆದಿರಲಿಲ್ಲ, ಆದರೆ ಈ ಪ್ರಕರಣದಲ್ಲಿ ಪೆಟ್ಟುತಿಂದ ಮುಸ್ಲಿಮ್ ಹುಡುಗರ ಜೊತೆಗಿದ್ದ ಇಬ್ಬರು ಹುಡುಗಿಯರ ಮೇಲೂ ಹಲ್ಲೆ ನಡೆಸಲಾಯಿತು. ಈ ತಂಡದ ನಾಯಕತ್ವ ವಹಿಸಿದ್ದು ಪ್ರಸಾದ್ ಅತ್ತಾವರ ಮತ್ತು ಶ್ರೀರಾಮ ಸೇನೆಯ ಕಾನೂನು ಸಲಹೆಗಾರ ದಿನಕರ ಶೆಟ್ಟಿ. ಮೊನ್ನೆ ನಡೆದ ಪಬ್ ದಾಳಿ ಪ್ರಕರಣದಲ್ಲೂ ಸಹ ಈ ಇಬ್ಬರು ಪ್ರಮುಖ ಆರೋಪಿಗಳಾಗಿದ್ದಾರೆ. ಈ ಪ್ರಸಾದ ಅತ್ತಾವರ ಮತ್ತು ದಿನಕರ ಶೆಟ್ಟಿ ಎಂತಹ ಚಾಲೂಗಳೆಂದರೆ ಆವತ್ತು ಮುಸ್ಲಿಮ್ ಹುಡುಗರಿಗೆ ಹೊಡೆದ ನಂತರ ಅವರನ್ನು ಹಿಡಿದುಕೊಂಡು ಹೋಗಿ ಮಂಗಳೂರು ಪಾಂಡೇಶ್ವರ ಠಾಣೆಗೆ ಒಪ್ಪಿಸಿ, ಅವರ ವಿರುದ್ಧವೇ ದೂರು ದಾಖಲು ಮಾಡಿದ್ದರು. ಈ ಮೂವರು ತರುಣರು ಪಾಂಡೇಶ್ವರ ಠಾಣೆಯ ಪೊಲೀಸರಿಂದಲೂ ಸಮಾ ಹೊಡೆತ ತಿಂದರು. ಮಂಗಳೂರಿನ ಯುವ ಕಾಂಗ್ರೆಸ್‌ನ ವಿ.ಸಿ. ಮೋಹನ್ ರಿಗೆ ಈ ಸಂಗತಿ ಗೊತ್ತಾಗಿ ಅವರು ಠಾಣೆಗೆ ಹೋಗಿ, ನಡೆದ ಸಂಗತಿಯನ್ನು ಅಲ್ಲಿನ ಅಧಿಕಾರಿಗಳಿಗೆ ಒತ್ತಾಯ ಪೂರ್ವಕವಾಗಿ ತಿಳಿಸದೆ ಇದ್ದರೆ ಪೆಟ್ಟುತಿಂದ ಆ ಹುಡುಗರ ಮೇಲೇನೆ ಕ್ರಿಮಿನಲ್ ಕೇಸು ಕೂಡ ದಾಖಲಾಗುತ್ತಿತ್ತು!



2008 ಡಿಸೆಂಬರ್ 26 ರಂದು ಮಂಗಳೂರಿನ ಶ್ರೀ ಮಾತಾ ಎಜುಕೇಷನ್ ಟ್ರಸ್ಟ್‌ನ ವಿದ್ಯಾರ್ಥಿಗಳು ಮೈಸೂರು ಬೆಂಗಳೂರು ಪ್ರವಾಸಕ್ಕೆ ಹೊರಟದ್ದರು. ಅವರ ಬಸ್ಸನ್ನು ನಗರದ ಹೊರವಲಯದಲ್ಲಿ ಭಜರಂಗದಳದವರು ಬಲಾತ್ಕಾರವಾಗಿ ತಡೆದು, ಬಸ್ಸಿನ ಗಾಜುಗಳನ್ನು ಪುಡಿ ಮಾಡಿ ಪ್ರವಾಸವನ್ನು ನಿಲ್ಲಿಸಿದರು. ಭಜರಂಗದಳದ ಸ್ಥಳೀಯ ಲೀಡರ್ ಶರಣ್ ಪಂಪ್‌ವೆಲ್ ಸ್ವತಃ ಪತ್ರಕರ್ತರ ಜೊತೆ ಹೇಳಿದ ಪ್ರಕಾರ, ಆ ಪ್ರವಾಸೀ ತಂಡದಲ್ಲಿ ಹಿಂದೂ ತರುಣಿಯರ ಜೊತೆ ಕೆಲವು 'ಅನ್ಯಮತೀಯ' ತರುಣರೂ ಇದ್ದುದರಿಂದ ಹಿಂದೂ ತರುಣಿಯರ ರಕ್ಷಣೆಗಾಗಿ ಭಜರಂಗದಳ ಆ ಪ್ರವಾಸೀ ಬಸ್ ಮೇಲೆ ದಾಳಿ ನಡೆಸಿತು.



ಎ.ಎಸ್.ಆಚಾರ್ಯ

2005 ಜೂನ್ 4 ರಂದು ಮಂಗಳೂರಿನ ಸ್ಯಾರೀ ಪ್ಯಾಲೇಸ್ ಎಂಬ ಜವಳಿ ಮಳಿಗೆಯ ಮಾಲೀಕರು, ತಮ್ಮ ನೌಕರರಿಗೆ ಒಂದು ಪ್ರವಾಸವನ್ನು ಏರ್ಪಡಿಸಿದ್ದರು. ಅವರು ಪ್ರತಿ ವರ್ಷವೂ ತಮ್ಮ ನೌಕರರಿಗೆ ಇಂತಹ ಪ್ರವಾಸಗಳನ್ನು ನಡೆಸುತ್ತಿದ್ದರು. ಸ್ವತಃ ಮಾಲೀಕರೂ ಭಾಗವಹಿಸಿದ್ದ ಈ ಪ್ರವಾಸೀ ತಂಡದಲ್ಲಿ ಸಂಸ್ಥೆಯ ಅನೇಕ ನೌಕರರು ತಮ್ಮ ಕುಟುಂಬ ಸಮೇತರಾಗಿ ಭಾಗವಹಿಸಿದ್ದರು. ಆದಾಗ್ಯೂ ಅವರ ಬಸ್ಸನ್ನು ಮಂಗಳೂರಿನ ಹೊರವಲಯದಲ್ಲಿ 15-20 ಜನ ಗುಂಪೊಂದು ತಡೆದು ಬಸ್ಸನ್ನು ಜಖಂಗೊಳಿಸಿ, ಬಸ್‌ನ ಒಳಗಿದ್ದ ಮಹಿಳೆಯರನ್ನೂ ಬಿಡದೆ ಹೊಡೆದರು; ಪ್ರಯಾಣಿಕರ ಸೊತ್ತುಗಳನ್ನು ಲೂಟಿ ಮಾಡಿದರು. ಪ್ರವಾಸ ರದ್ದಾಗಿ, ಕೆಲವರು ಆಸ್ಪತ್ರೆಗೆ ದಾಖಲಾದರೆ, ಉಳಿದವರು ಮನೆ ಸೇರಿದರು. ಈ ದಾಳಿಗೂ ಕಾರಣ ಅದೇ-ಹಿಂದೂ ಮಹಿಳೆಯರ ಜೊತೆ ಅನ್ಯಮತೀಯರು ಪ್ರಯಾಣ ಬೆಳೆಸಿದ್ದು.

2003 ರ ಫೆಬ್ರವರಿ ತಿಂಗಳಿನ ಒಂದು ದಿನ ಪುತ್ತೂರಿನ ಒಂದು ಥೇಟರಿನಲ್ಲಿ ಹಿಂದೂ ತರುಣಿಯರ ಜೊತೆ ಅನ್ಯಮತೀಯ ಯುವಕರು ಸಿನಿಮಾ ನೋಡುತ್ತಿದ್ದರು ಎಂಬ ಕಾರಣಕ್ಕೇ ಥೇಟರಿನ ಎದುರು ನೂರಾರು ಜನ ಜಮಾಯಿಸಿ, ಗಲಾಟೆ ಆಗಿ ಪುತ್ತೂರಿನಲ್ಲಿ ಮೂರು ದಿನ ಸೆಕ್ಷನ್ 144 ಜಾರಿಯಾಯಿತು.

2005 ಫೆಬ್ರವರಿ 4 ರಂದು ಉಡುಪಿಯ ಸಮೀಪದ ಹೇಜಮಾಡಿ ಎಂಬಲ್ಲಿನ ವನಿತ ಎಂಬ ತರುಣಿ ಆತ್ಮಹತ್ಯೆ ಮಾಡಿಕೊಂಡಳು. ಕೂಲಿ ಕೆಲಸ ಮಾಡಿ ಜೀವನ ನಿರ್ವಹಿಸುತ್ತಿದ್ದ ತನ್ನ ಹಾಗೆಯೇ ಕೂಲಿ ಕೆಲಸ ಮಾಡುತ್ತಿದ್ದ ಇಸ್ಮಾಯಿಲ್ ಎಂಬ ಸ್ಥಳೀಯ ಮುಸ್ಲಿಮನ ಜೊತೆ ಮಾತಾಡುತ್ತಿದ್ದಳು ಎಂಬ ಕಾರಣಕ್ಕೆ ಭಜರಂಗದಳದ ಪ್ರಭಾವಕ್ಕೆ ಒಳಗಾಗಿ ಆ ಹಳ್ಳಿಯ ಕೆಲವು ತರುಣರು ಆಕೆಯನ್ನು ಹೀನಾಮಾನ ಬೈದು ಅವಮಾನಿಸಿದ್ದರು; ಇಸ್ಮಾಯಿಲ್‌ಗಂತೂ ಮಾರಕವಾಗಿ ಥಳಿಸಿದ್ದರು. ವನಿತ, ಅವರ ವಿರುದ್ಧ ಮೂಲ್ಕಿ ಪೊಲೀಸು ಠಾಣೆಯಲ್ಲಿ ದೂರು ದಾಖಲಿಸಿದ್ದಳು. ಭಜರಂಗಿಗಳು ಆಕೆಯ ಮನೆಗೂ ಬಂದು ದೂರು ವಾಪಸು ಪಡೆಯಬೇಕೆಂದೂ, ವಾಪಸು ತೆಗೆದುಕೊಳ್ಳದಿದ್ದರೆ ಏನು ಮಾಡಬೇಕು ಎಂದು ತಮಗೆ ಗೊತ್ತಿದೆ ಎಂದೂ ಬೆದರಿಕೆ ಹಾಕಿದ್ದರಿಂದ ವನಿತ ದಿಕ್ಕುತೋಚದೆ ಆತ್ಮಹತ್ಯೆ ಮಾಡಿಕೊಂಡಳು.

ಇಂತಹ ಎಷ್ಟೋ ಘಟನೆಗಳನ್ನು ಉದಾಹರಿಸಬಹುದು. ಒಂದು ಸಮೀಕ್ಷೆಯ ಪ್ರಕಾರ ಜೂನ್ 2008 ರಿಂದ ಈಚೆಗೆ ಅಂದರೆ ಕೇವಲ ಕಳೆದ 6 ತಿಂಗಳ ಅವಧಿಯಲ್ಲಿ ಮಂಗಳೂರಿನಲ್ಲಿ ಈ ಬಗೆಯ ಕೋಮು ದ್ವೇಷದ 14 ಪ್ರಕರಣಗಳು ನಡೆದಿವೆ. (ದ ಹಿಂದು- ಸಂಪಾದಕೀಯ. ತಾ. 28.1.09 ಪುಟ 14).

ಹೀಗಿರುತ್ತ ಮಂಗಳೂರಿನ ಪಬ್ ದಾಳಿಯ ಪೂರ್ವಾಪರ ತಮಗೇನೂ ತಿಳಿಯದು ಎಂಬಂತೆ ರಾಜ್ಯ ಗೃಹ ಸಚಿವರು ನಟಿಸುತ್ತಿದ್ದಾರೆ. ನಿದ್ರೆ ಬಂದವರನ್ನು ಎಬ್ಬಿಸಬಹುದು; ಆದರೆ ನಿದ್ರೆ ನಟಿಸುವವರನ್ನು ಎಬ್ಬಿಸಲು ಸಾಧ್ಯವಿಲ್ಲ. ಗೃಹ ಸಚಿವರು ತಮ್ಮ ಖಾತೆಗೆ ಹೊಸಬರೇ ಇರಬಹುದು. ಆದರೆ ದಕ್ಷಿಣ ಕನ್ನಡ ಜಿಲ್ಲೆ ಮತ್ತು ತಮ್ಮ ಹುಟ್ಟೂರು ಉಡುಪಿಗಳಲ್ಲಿ ಕಳೆದ 10 ವರ್ಷಗಳಲ್ಲಿ ಸಂಭವಿಸಿರುವ ಕರಾಳ ವಿದ್ಯಮಾನಗಳಿಗೆ ಅವರೇನೂ ಹೊಸಬರಲ್ಲ.

ಹಾಗೆಯೇ ಮಂಗಳೂರಿನ ಹಿರಿಯ ಪೊಲೀಸ್ ಅಧಿಕಾರಿಗಳು ಪಬ್ ದಾಳಿಯ ಮುನ್ಸೂಚನೆ ತಮಗಿಂತ ಮೊದಲೇ ಮಾಧ್ಯಮದವರಿಗೆ ದೊರೆತ ಬಗ್ಗೆ ಈಗ ಹಾರಾಡುತ್ತಿರುವುದು ಹಾಸ್ಯಾಸ್ಪದವಾಗಿದೆ. ಪ್ರಸಾದ್ ಅತ್ತಾವರ, ದಿನಕರ ಶೆಟ್ಟಿಯಂತಹವರು ಮಂಗಳೂರು ಪೊಲೀಸರಿಗೆ ಅಪರಿಚಿತರೇನಲ್ಲ, ವಾಸ್ತವವಾಗಿ ಈ ಆಸಾಮಿಗಳಿಗೆ ಮಂಗಳೂರಿನ ಪೊಲೀಸರ ಜೊತೆ ಇರುವ ಗಾಢಸ್ನೇಹವೇ ಒಂದು ಸಮಸ್ಯೆ. ಮೊನ್ನೆ ಪಬ್‌ಗಳಿಗೆ ಸಂಬಂಧಿಸಿದ ಹಾಗೆ ಪ್ರಸಾದ್ ಅತ್ತಾವರನನ್ನು ಬಂಧಿಸುವುದಕ್ಕೆ ಮೊದಲು ಪೊಲೀಸರೇ ಅವನಿಗೆ ಸುದ್ದಿ ತಿಳಿಸಿದ್ದರು.

ಈ ಹಿನ್ನೆಲೆಯಲ್ಲಿ ಕಾನೂನು ತನ್ನ ಹಾದಿಯಲ್ಲಿ ನಡೆಯುವುದು ಎಂಬ ಮುಖ್ಯಮಂತ್ರಿಯವರ ಮಾತು ವ್ಯಂಗ್ಯದ ಹಾಗೆ ಕೇಳಿಸುತ್ತದೆ. ರಾಜ್ಯದಲ್ಲಿ ಕಾನೂನಿನ ಆಳ್ವಿಕೆಯ ಹಂದರವೇ ನಾಶವಾಗಿದೆ. ಬಿಜೆಪಿ ಕೈಗೆ ರಾಜ್ಯದ ಅಧಿಕಾರ ಸಿಕ್ಕ ಮೇಲೆ ಸಂಘ ಪರಿವಾರದವರ ಮೇಲೆ ಪೊಲೀಸರು ಒಲ್ಲದ ಮನಸ್ಸಿನಿಂದ ಹಾಕಿದ ಕೇಸುಗಳನ್ನೂ ಸರ್ಕಾರ ಒಂದೊಂದಾಗಿ ಹಿಂದಕ್ಕೆ ತೆಗೆದುಕೊಳ್ಳುತ್ತಿದೆ. ಮೊದಲು 1999 ರ ಸುರತ್ಕಲ್ ಹಿಂಸಾಕೃತ್ಯಗಳಿಗೆ ಸಂಬಂಧಿಸಿದ ಮೊಕದ್ದಮೆಗಳನ್ನು ಹಿಂದಕ್ಕೆ ತೆಗೆದುಕೊಳ್ಳಲಾಯಿತು. ಈಗ ಹುಬ್ಬಳ್ಳಿ ಈದ್ಗಾ ಮೈದಾನ ಪ್ರಕರಣ ಮತ್ತು ಚಿಕ್ಕಮಗಳೂರು ಬಾಬಾಬುಡನ್‌ಗಿರಿ ವಿವಾದ ಕುರಿತಾದ ಕ್ರಿಮಿನಲ್ ಮೊಕದ್ದಮೆಗಳನ್ನೂ ಸರ್ಕಾರ ಹಿಂದೆ ತೆಗೆದುಕೊಂಡಿದೆ. ಉಡುಪಿ ಮತ್ತು ದ.ಕ. ಜಿಲ್ಲೆಯ ಅನೇಕ ಪೊಲೀಸು ಠಾಣೆಗಳು ಬಿಜೆಪಿ ರಾಜಕಾರಣಿಗಳ ಪಾರ್ಟ್‌ಟೈಮ್ ಕಚೇರಿಗಳಾಗಿ ಮಾರ್ಪಟ್ಟಿವೆ. ಸಂಘ ಪರಿವಾರದ "ಅನ್ಯಮತೀಯ"ರನ್ನು ಕುರಿತ ದ್ವೇಷದ ಸಿದ್ಧಾಂತ, ರಾಜ್ಯ ಸರ್ಕಾರದ ಅಧಿಕೃತ ಧೋರಣೆಯಾಗಿ ಮಾರ್ಪಟ್ಟಿದೆ. ಹೀಗಿರುತ್ತ ಮಂಗಳೂರಿನಲ್ಲಿ ಮೊನ್ನೆ ನಡೆದ ಘಟನೆಯಲ್ಲಿ ನೊಂದವರಿಗೆ ರಾಜ್ಯ ಸರ್ಕಾರ ನ್ಯಾಯ ಒದಗಿಸಲಾರದು; ಯಾಕೆಂದರೆ ಈ ಸರ್ಕಾರದ ಧೋರಣೆಗಳೇ ಆ ಘಟನೆಗೆ ಕಾರಣವಾಗಿವೆ.

■ ಜಿ. ರಾಜಶೇಖರ



ಹೌದು
ನಾವು ಸೀತೆಯರಲ್ಲ
ಕಲ್ಲಾಗಿ ನಿಂತ ಅಹಲ್ಯೆಯರಲ್ಲ
ಸತ್ತ ಗಂಡನಿಗೆ ರೋದಿಸಿದ
ಸತ್ಯವಾನನ ಸಾವಿತ್ರಿಯರಲ್ಲ
ಶೂರ್ಪನಖಿಯರಂತೂ ಅಲ್ಲವೇ ಅಲ್ಲ...

ನೀವು
ಹಚ್ಚಿಟ್ಟು ಬಂದ ಬೆಂಕಿ
ಗುಡಿ-ಚರ್ಚು-ಮಸೀದಿಗಳ ನುಗ್ಗಿ
ಮನೆ-ಮನಗಳ ಸುಟ್ಟು
ಬಯಲು-ಆಲಯದೊಳು
ಬೆತ್ತಲಾಗಿ ನಿಂತವರು....

ಹಗಲು ಕಳೆದರೆ ಸಾಕು
ಕುಣಿಯಲು ಹೇಳುತ್ತದೆ
ತುತ್ತಿನ ಚೀಲ
ಮಸುಕು ಮಬ್ಬಿನಲಿ
ಯಾರದೋ ಬಾಟಲಿಗೆ
ಸುರಿಯುವಾಗ ಮದ್ಯ
ಥಟ್ಟನೆ ನೆನಪಾಗುತ್ತದೆ
ಖಾಲಿಯಾದ ಅಪ್ಪನ ಔಷಧಿ ಬಾಟಲು
ಬಿಟ್ಟ ಕಣ್ಣು ಬಿಡದೆ
ನೋಡುತ ಕುಳಿತವನಿಗೆ
ಹೇಳಬೇಕಿದೆ
ತೊಟ್ಟ ತುಂಡು ಬಟ್ಟೆಯೊಳಗೆ
ಅಪ್ಪನ ರೋಗಕೆ
ಡಾಕ್ಟರು ಕೊಟ್ಟ ಚೀಟಿಯಿದೆಯೆಂದು.....

ನಾವು ನಿಮಗೆ ಹೇಳಬೇಕಿದೆ
ನಿಮ್ಮ ಶ್ರೀ ಶ್ರೀ...ಗಳ ದಿವ್ಯಸಾನ್ನಿಧ್ಯದಲ್ಲಿ
ಹಚ್ಚಿಟ್ಟ ದೀಪವೊಂದು
ಧರೆಯ ಸುಡುವುದಾದರೆ
ಹೆಜ್ಜೆ ಹಾಕುವುದಿಲ್ಲ
ನಾವು ಸೀತೆಯರಂತೆ
ಕಾಡಿನೆಡೆಗೆ....

ನೀವು ಹಿಡಿದ ಪಂಜು
ಬೆಳಕು ತೋರದೆ
ಸುಟ್ಟು ಬೂದಿ ಮಾಡುವುದಾದರೆ

ನಾವು ಕಲ್ಲಾಗಿ ನಿಲ್ಲುವುದಿಲ್ಲ
ನೀವು ಕೊಟ್ಟ ಶಾಪಕೆ....

ದರದರನೆ ಎಳೆದಾಡಿ
(ನಿಮ್ಮ?) ರಾಮರಾಜ್ಯ ಸ್ಥಾಪಿಸುವುದಾದರೆ
ಬಿಲ್ಲು ಬಾಣ ಹೂಡುವುದಾದರೆ

ನಾವು ಬೇಡುವುದಿಲ್ಲ
ಮಾನ ಉಳಿಸಿರೆಂದು
ಜೀವ ಉಳಿಸಿರೆಂದು

ಬದಲಾಗಿ
ಶೀಲ ಶಂಕಿಸಿದ ರಾಮ
ಕಲ್ಲಾಗಿಸಿದ ಗೌತಮ
ಮೂಗು ಕೊಯ್ದ ಲಕ್ಷ್ಮಣರನ್ನ
ಸಾಲಾಗಿ ನಿಲ್ಲಿಸಿ
ಕೈಯ್ಯ ಬಿಲ್ಲು ಕಸಿದು
ಬಾಣ ಹೂಡುತ್ತೇವೆ.....


ನಿಮ್ಮ ಶಾಪಗಳು
ನಮ್ಮನ್ನು ತಟ್ಟದಂತೆ

ಸೀತೆ ಕಾಡಿಗ್ಹೋಗದಂತೆ
ಅಹಲ್ಯೆ ಕಲ್ಲಾಗದಂತೆ
ತಡೆಯುತ್ತೇವೆ...

■ ಬಿ. ಶ್ರೀನಿವಾಸ

ಪುಸ್ತಕ ವಿಮರ್ಶೆ

ಕನ್ನಡ ಕಥನ ಪರಂಪರೆಯ ಸಾತತ್ಯ



ಪುಸ್ತಕ; ಹಳ್ಳ ಬಂತು ಹಳ್ಳ
ಲೇಖಕ: ಶ್ರೀನಿವಾಸ ವೈದ್ಯ
ಪ್ರಕಾಶನ; ಮನೋಹರ ಗ್ರಂಥ

ಕೆಲ ವರ್ಷಗಳ ಹಿಂದೆ ಪ್ರಕಟವಾದ ಶ್ರೀನಿವಾಸ ವೈದ್ಯರ ಪ್ರಥಮ ಕಾದಂಬರಿ 'ಹಳ್ಳ ಬಂತು ಹಳ್ಳ' ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಪಡೆದಿರುವುದು ಸಂತೋಷದ ಸಂಗತಿ. ಇದು ಪ್ರಕಟವಾದ ಕೂಡಲೇ ಸಾಹಿತ್ಯಾಸಕ್ತರ ಗಮನವನ್ನು ಸೆಳೆದುಕೊಂಡರೂ, ಹೆಚ್ಚಿನ ವಿಮರ್ಶೆ-ವ್ಯಾಖ್ಯಾನ ಬಂದಿರಲಿಲ್ಲ ಎನ್ನುವುದು ಸಮಕಾಲೀನ ವಿಮರ್ಶಾ ಲೋಕದ ಶೂನ್ಯತೆಯನ್ನು ಎತ್ತಿ ತೋರಿಸುವಂತಿದೆ. ಹಾಸ್ಯ-ಹರಟೆಯನ್ನು ಪ್ರಧಾನ ನೆಲೆಯಾಗಿಸಿ ಬರವಣಿಗೆ ಪ್ರಾರಂಭಿಸಿದ ವೈದ್ಯರು ತಮ್ಮ ನಿವೃತ್ತಿಯ ನಂತರ ಪ್ರಕಟಿಸಿದ 'ಮನಸುಖರಾಯನ ಮನಸು' ಹಾಗೂ ಇತ್ತೀಚಿನ 'ಅಗ್ನಿಕಾರ್ಯ' ಸಂಕಲನ ಇವರ ಬರವಣಿಗೆಯ ಹೊರಳಿಕೆಯನ್ನು ಹಾಗೂ ಹರಳುಗಟ್ಟುತ್ತಿರುವ ಇವರ ಜೀವನ ದರ್ಶನವನ್ನು ನಿರೂಪಿಸುತ್ತದೆ.

ಖಾಸಗೀಕರಣ ಹಾಗೂ ಜಾಗತೀಕರಣದ ಈ ಕಾಲದಲ್ಲಿ ಪ್ರಕಟವಾದ ಕಾದಂಬರಿಯ ವಸ್ತು 19ನೇ ಶತಮಾನದ ಮೊದಲ ಘಟ್ಟದಲ್ಲಿ ಉತ್ತರ ಕರ್ನಾಟಕದಲ್ಲಿ ಸಂಭವಿಸಿದ ಸಾಮಾಜಿಕ-ರಾಜಕೀಯ-ಆರ್ಥಿಕ-ಸಾಂಸ್ಕೃತಿಕ ಪಲ್ಲಟಗಳು. ತನ್ನ ಭಾಷಿಕ ನೆಲೆ ಹಾಗೂ ಅನುಸಂಧಾನದಲ್ಲಿ ಕಾದಂಬರಿ ಹಿಮ್ಮುಖವಾಗಿ ಚಲಿಸಿ ಭೂತಕಾಲವನ್ನು ಸಮಕಾಲೀನಗೊಳಿಸುವ ಪ್ರಯತ್ನ ಮಾಡಿರುವುದು ಕುತೂಹಲವೇ ಸರಿ. ಏಕೆಂದರೆ, ಲೇಖಕರು ಮುಖಾಮುಖಿಯಾಗುವ ವಾಸ್ತವ ಹಿಂದೆ ಕಾರಂತ, ಕುವೆಂಪು, ಮಾಸ್ತಿ, ಅನಂತಮೂರ್ತಿಯವರಂತಹ ಲೇಖಕರುಗಳು ಕಳೆದ ಒಂದು ಶತಮಾನದಲ್ಲಿ ಸಂಭವಿಸಿದ ಆಧುನೀಕತೆ, ಪರಂಪರೆ, ಇಂಗ್ಲಿಷ್ ಶಿಕ್ಷಣ ಪದ್ಧತಿ, ವಸಾಹತುಶಾಹಿ ಅನುಭವ, ಕರ್ಮಠ ಧಾರ್ಮಿಕ ವ್ಯವಸ್ಥೆ ಇತ್ಯಾದಿ ಅನುಭವಗಳೊಂದಿಗೆ ನಡೆಸಿದ ಗುದ್ದಾಟದ ಪ್ರಕ್ರಿಯೆಗಳನ್ನೆ. ಅದ್ದರಿಂದ 'ಹಳ್ಳ ಬಂತು ಹಳ್ಳ' ಕನ್ನಡ ಕಥನ ಪರಂಪರೆಯ ಸಾತತ್ಯವನ್ನು ಪುನಃ ನಿರೂಪಿಸಿದೆ. ವಸಾಹತುಶಾಹಿ ಆಧುನಿಕತೆಯೊಂದಿಗಿನ ನಮ್ಮ ಗುದ್ದಾಟ ಇನ್ನೂ ಮುಗಿಯದೆ ಇರುವುದರಿಂದ ನಾವು ಆಧುನಿಕೋತ್ತರ ಘಟ್ಟಕ್ಕೆ ಚಲಿಸಿದ್ದೇವೆ ಎಂಬುದು ಕೇವಲ ಹೇಳಿಕೆಯಾಗಬಹುದಷ್ಟೆ.

ಬಹಳ ವಿಶಾಲ ನೆಲಗಟ್ಟನ್ನು ಹೊಂದಿರುವ ಈ ಕೃತಿ ಶಿವರಾಮ ಕಾರಂತರ 'ಮರಳಿ ಮಣ್ಣಿಗೆ'ಯ ಕಥಾ ಹಂದರವನ್ನು ನೆನಪಿಸುತ್ತದೆ. ಕಾರಂತರು ದಕ್ಷಿಣ ಕನ್ನಡದಲ್ಲಿ ಆಧುನಿಕತೆ ತಂದಿಟ್ಟ ಪಲ್ಲಟಗಳನ್ನು ಮೂರು ತಲೆಮಾರುಗಳ ಮೂಲಕ ದಾಖಲಿಸಿದರೆ, ವೈದ್ಯರು ಉತ್ತರ ಕರ್ನಾಟಕದಲ್ಲಿನ ಸಾಮಾಜಿಕ -ರಾಜಕೀಯ ಪಲ್ಲಟಗಳನ್ನು ಮೂರು ತಲೆಮಾರಿನ ಕತೆಯ ಮೂಲಕ ದಾಖಲಿಸುತ್ತಾರೆ. ಇದರ ಕಥೆ ಆರಂಭವಾಗುವುದೇ 19ನೇ ಶತಮಾನದ ಉತ್ತರಾರ್ಧದಲ್ಲಿ ಸಂಭವಿಸಿದ ನರಗುಂದದ ಐತಿಹಾಸಿಕ ಕ್ರಾಂತಿಯಿಂದ. ಈ ಸಂಕಥನದ ಒಂದು ಮಗ್ಗುಲಿನಲ್ಲಿ ವಸಾಹತುಶಾಹಿ ಅನುಭವದ ಮೊದಲ ಹೆಜ್ಜೆಗಳಿದ್ದರೆ ಇನ್ನೊಂದು ಮಗ್ಗುಲಿನಲ್ಲಿ ತೀವ್ರ ರಾಷ್ಟ್ರೀಯ ಪ್ರಜ್ಞೆ ಇದೆ. ಇವುಗಳೊಂದಿಗೆ ಕೌಟುಂಬಿಕ-ಸಾಮಾಜಿಕ-ಆರ್ಥಿಕ ಆಯಾಮಗಳು ಬೇರ್ಪಡಿಸಲಾರದಂತೆ ಜೊತೆ-ಜೊತೆಗೆ ಬೆರೆತುಕೊಂಡಿರುವುದು ಈ ಕಾದಂಬರಿಯ ಯಶಸ್ಸಿಗೆ ಕಾರಣವಾಗಿದೆ. ಅಂದರೆ, ಲೇಖಕರು ಒಂದು ವಿಸ್ತೃತ ಸಾಮಾಜಿಕ ನೆಲೆಗಟ್ಟನ್ನು ಸೃಷ್ಟಿಸಿ ತನ್ಮೂಲಕ ವಿಭಿನ್ನ ಬಹುಮುಖೀ ನೆಲೆಗಳಿಂದ ಕಥನ ಕಟ್ಟುತ್ತಾರೆ. ನರಗುಂದದ ಕ್ರಾಂತಿ ಹಾಗೂ ಭಾರತದ ಸ್ವತಂತ್ರ ಪ್ರಕ್ರಿಯೆ ನಡುವಿನ ಸ್ಥಿತ್ಯಂತರವನ್ನು ದಾಖಲಿಸುವ ಈ ಕೃತಿಗೆ ಐತಿಹಾಸಿಕ ಆಯಾಮವೂ ಸಹಜವಾಗಿಯೇ ದಕ್ಕಿದೆ.

ವೈದ್ಯರಿಗೆ ನವ್ಯ ಕಾದಂಬರಿಗಳ ರೀತಿ ವ್ಯಕ್ತಿ ಪ್ರಜ್ಞೆಯ ಮೂಲಕವೇ ಸಾಮಾಜಿಕ ಪ್ರಜ್ಞೆಯನ್ನು ಅರಿಯುವ ಮಾದರಿಯಲ್ಲಿ ಆಸಕ್ತಿ ಇಲ್ಲ. ಕತೆಗೆ ಮಾಧ್ವ ಬ್ರಾಹ್ಮಣ ಕೌಟುಂಬಿಕ ಚೌಕಟ್ಟಿದ್ದರೂ ಇದರ ಮಹತ್ವ ಇರುವುದು ಕೃತಿಗೆ ದಕ್ಕಿರುವ ಬಹುಕೇಂದ್ರಿತ ದೃಷ್ಟಿಕೋನದಿಂದಲೆ. ಹಲವು ಬಗೆಯ ಜೀವನ ಕ್ರಮ, ಜೀವನ ದೃಷ್ಟಿಗಳು ಕಥನದಲ್ಲಿ ಇಣುಕಿ ನೋಡಿವೆ. ಇದು 'ಸಂಸ್ಕಾರ'ದ ಪ್ರಾಣೇಶಾಚಾರ್ಯರನ್ನು ನೆನಪಿಸುವ ವಾಸುದೇವಾಚಾರ್ರ ಕತೆಯೂ ಹೌದು. ಹಾಗೆಯೇ ವಿಧವೆ ಅಂಬಕ್ಕ, ಮದುವೆ ಎಂಬ ಸಂಸ್ಥೆಯಲ್ಲಿ ಕರಟಹೋದ ಸೋನಕ್ಕ, ದಾರಿ ತಪ್ಪಿದ ವೆಂಕಣ್ಣ, ತನ್ನದೆ ದಾರಿ ಕಂಡುಕೊಂಡ ನಾರಾಯಣ, ವಿಭಿನ್ನ ದಾರಿ ಹಿಡಿದ ಆಚಾರ್ರ ಮಕ್ಕಳಾದ ರಾಮು-ಕೇಶವ ಇವರುಗಳ ಜಗತ್ತಿನ ಸಂಕೀರ್ಣ ಅನಾವರಣವೂ ಹೌದು. ಇದರೊಂದಿಗೆ ಕಥನವು ಭಾರತ ದೇಶವು

ಪದ್ಮ ಪ್ರಶಸ್ತಿಗಳು: ಅಸಂಗತ ವೈರುಧ್ಯ

ಈ ಬಾರಿಯ ಪದ್ಮಪ್ರಶಸ್ತಿಗಳನ್ನು ಗಮನಿಸಿದರೆ, ನಮ್ಮ ಕೇಂದ್ರ ಸರ್ಕಾರದ ಸಾಮಾಜಿಕ, ಸಾಂಸ್ಕೃತಿಕ ಪ್ರಜ್ಞೆಗೆ ವೈಕಲ್ಯ ಬಂದಿರುವುದು ಸ್ಪಷ್ಟವಾಗುತ್ತದೆ.



ಒಂದು ಸರ್ಕಾರಕ್ಕೆ ಯಾವುದು ಮುಖ್ಯವೆಂಬ ಪ್ರಜ್ಞೆ ಇಲ್ಲದಿದ್ದರೆ ಅದು ಪ್ರಾತಿನಿಧಿಕವೂ ಆಗಿರುವುದು ಸಾಧ್ಯವಿಲ್ಲ, ಮಾಯಿ ಬಾಪ್ ಪಾತ್ರಕ್ಕೂ ಅರ್ಹವಾಗುವುದಿಲ್ಲ.

ಪ್ರಶಸ್ತಿಗಳಲ್ಲಿ ಸ್ಥೂಲವಾಗಿ ಮೂರು ವಿಭಾಗಗಳ ಆಯ್ಕೆಗಳನ್ನು ಗಮನಿಸಿ.

1. ಸರ್ಕಾರಿ ಅಧಿಕಾರಿಗಳಿಗೆ ಸಲ್ಲುತ್ತಿರುವ ಪ್ರಶಸ್ತಿ. ನಮ್ಮ ದೇಶದ ಮಹತ್ವಾಕಾಂಕ್ಷೆಯ ದ್ಯೋತಕವಾಗಿರುವ ಅಣುಶಕ್ತಿ ಇಲಾಖೆ ಮತ್ತು ಬಾಹ್ಯಾಕಾಶ ಇಲಾಖೆಯ ಮುಖ್ಯರಿಗೆ ಈ ಪ್ರಶಸ್ತಿ ಲಾಗಾಯ್ತಿನಿಂದ ಸಿಗುತ್ತಲೇ ಇದೆ. ಪ್ರಶ್ನೆ ಏನೆಂದರೆ, ಸರ್ಕಾರಿ ಸೇವೆಯಲ್ಲಿದ್ದು ಮಾಡಲೇಬೇಕಾಗಿರುವ ಕೆಲಸ ಮಾಡಿದರೆ ಅದು ಸಾಧನೆ ಹೇಗಾಗುತ್ತದೆ?

ಇದಕ್ಕಿಂತ ಅಪಾಯಕಾರಿ ಎಂದರೆ, ಈ ಎರಡೂ ಇಲಾಖೆಗಳ ಖರ್ಚು-ವೆಚ್ಚ ಎಷ್ಟು ನಿರಂಕುಶವಾಗಿದೆಯೆಂದರೆ ಅದನ್ನು ಕೇಳುವ ಹಕ್ಕು ಜನಸಾಮಾನ್ಯರಿಗಿಲ್ಲ.

ಇತ್ತೀಚೆಗೆ ಭಾರತ ಸರ್ಕಾರದ ಮಹಾಲೇಖಪಾಲರು ಇಸ್ರೋದಲ್ಲಿ ಸುಮಾರು 8000 ಕೋಟಿ ರೂಪಾಯಿಗಳ ಅಂದಾದುಂದಿ ವೆಚ್ಚವಾಗಿರುವುದನ್ನು ಎತ್ತಿ ತೋರಿಸಿದ್ದಾರೆ. ಅದರ ಬಗ್ಗೆ ಕ್ರಮ ಕೈಗೊಳ್ಳುವ ಧೈರ್ಯ ಸರ್ಕಾರ ತೋರಿಲ್ಲ.

ಈ ಎರಡೂ ಇಲಾಖೆಗಳೂ ಪವಿತ್ರ ಗೋವುಗಳು!

ಸರ್ಕಾರಕ್ಕೆ ಆಪ್ತವೂ, ಮುಖ್ಯವೂ ಆಗಿರುವ ವಲಯದಲ್ಲಿದ್ದರೆ ಎಲ್ಲವೂ ಸಲೀಸಷ್ಟೇ ಅಲ್ಲ, ಪ್ರಶಸ್ತಿಗಳೂ ದೊರಕುತ್ತವೆ ಎಂಬುದು ಸ್ಪಷ್ಟ.

2. ಸಾಮಾಜಿಕ ಪ್ರಜ್ಞೆಗೆ ಸಂಬಂಧಪಟ್ಟದ್ದು.

ಈ ವರ್ಷವೂ ಈ ಪ್ರಶಸ್ತಿ ಪಡೆದವರಲ್ಲಿ ಬ್ರಾಹ್ಮಣರ ಸಂಖ್ಯೆ ಎಷ್ಟಿದೆಯೆಂದರೆ, ಸಾಧಕರೆಲ್ಲ ಅವರೇ ಎಂಬ ಭ್ರಮೆ ಹುಟ್ಟಿಸುವಷ್ಟು!

ಉದಾಹರಣೆಗೆ ಕರ್ನಾಟಕದ ಇಬ್ಬರು ವಿಜೇತರನ್ನು ಗಮನಿಸಿ- ಬನ್ನಂಜೆ ಮತ್ತು ಸುತ್ತೂರು ಅವರವರ ವೈದಿಕ ವಲಯಗಳಲ್ಲಿ ಪರಮಸಾಧಕರೇ ಇರಬಹುದು. ಅತ್ತ ಸೃಜನಶೀಲವೂ ಅಲ್ಲದ, ಇತ್ತ ಪುರೋಗಾಮಿ ಕ್ರಿಯಾಶೀಲವೂ ಅಲ್ಲದ ಈ ಇಬ್ಬರೂ ವ್ಯಾಖ್ಯಾನ, ಪ್ರವಚನ ಪರಿಣತಿಗಿಂತ ಹೆಚ್ಚೇನನ್ನು ಸಾಧಿಸಿದಂತಿಲ್ಲ.


ಕಂಬಾರ್

ಇನ್ನಿಬ್ಬರೂ ಅಷ್ಟೇ- ರಾಮಚಂದ್ರ ಗುಹಾ ಮತ್ತು ಶಶಿ ದೇಶಪಾಂಡೆ. ಇವರಿಬ್ಬರು ಇಂಗ್ಲಿಷ್‌ನಲ್ಲಿ ಬರೆಯುತ್ತಾರೆ ಅನ್ನುವುದು ಬಿಟ್ಟರೆ ಆದ್ಯರೆನಿಸಿಕೊಳ್ಳುವ ಶ್ರೇಷ್ಠರೇನೂ ಅಲ್ಲ.

ಈ ನಾಲ್ವರ ಸಂವೇದನೆ, ಸಜ್ಜನಿಕೆಗಳನ್ನು ನಾನು ಪ್ರಶ್ನಿಸುತ್ತಿಲ್ಲ. ಆದರೆ ಎಸ್.ಶೆಟ್ಟರ್, ಕಲ್ಬುರ್ಗಿಯವರಂಥ ಮೇಧಾವಿ ಸಂಶೋಧಕರೆದುರು ಗುಹಾ ಜನಪ್ರಿಯ ಚರಿತ್ರಕಾರ ಅಷ್ಟೇ.

ನಮ್ಮ ಸರ್ಕಾರಕ್ಕೆ ಇವರೇ ಯಾಕೆ ಕಾಣಿಸುತ್ತಾರೆ? ಶೆಟ್ಟರ್, ಕಲ್ಬುರ್ಗಿ, ವೈದೇಹಿ, ಜಯಶ್ರೀ, ದೇವನೂರ ಮಹಾದೇವ ಯಾಕೆ ಕಾಣಿಸುವುದಿಲ್ಲ?

ಇಂದಿಗೂ ವೈದಿಕ ನೆಲೆ ಮತ್ತು ಇಂಗ್ಲಿಷ್ ನೆಲೆಗಳೇ ಪ್ರಜ್ಞೆಯ ಗ್ರಹಿಕೆಯನ್ನು ನಿಯಂತ್ರಿಸುತ್ತಿರುವುದು ಇದಕ್ಕೆ ಕಾರಣ.

50 ವರ್ಷ ಹಿಂದಿನ ನಮ್ಮ ಬರವಣಿಗೆಗಳಲ್ಲಿ

ಗಮಾನ್ಯ ಪದ್ಧತಿಯಿಂದ ರಾಷ್ಟ್ರ ಪ್ರಭುತ್ವದತ್ತ ಎತ್ತಿರುವ ಪ್ರಕ್ರಿಯೆಯನ್ನು ದಾಖಲಿಸಿದೆ.

ಮುಖ್ಯವಾಗಿ ಇಲ್ಲಿನ ಸ್ತ್ರೀ ಪಾತ್ರಗಳು ಎಷ್ಟು ಾಗಿದೆಯೆಂದರೆ ವಿಧವೆ ಅಂಬಕ್ಕ ತನ್ನ ತನ, ಜೀವನ ಪ್ರೀತಿ, ವೈಧವ್ಯದಿಂದ ವಾದ ಅಭದ್ರತೆ-ತಲ್ಲಣಗಳು, ಇದಕ್ಕೆ ಾರವಾಗಿ ತಾಳುವ ರೌದ್ರಾವತಾರಗಳಿಂದ ಭಸುತ್ತಾಳೆ. ಕರ್ಮಠ ಕೌಟುಂಬಿಕ ಸ್ಥೆಯಲ್ಲಿದ್ದೇ ಶುಷ್ಕ ರೀತಿ-ರಿವಾಜುಗಳನ್ನು ಯುವ ತುಳಸಕ್ಕ ಆಧುನೀಕತೆ-ಪರಂಪರೆ ಕಲ್ಪನೆಗಳು ಒಂದರೊಳಗೆ ಮತ್ತೊಂದು ಕೊಂಡಿರುವ ವಿಶಿಷ್ಟ ಸಾಧ್ಯತೆಗಳನ್ನು ಡುತ್ತಾಳೆ. ವೈದ್ಯರ ಇತರ ಕಥನಗಳಲ್ಲಿ ಪಾತುಶಾಹಿ ಅನುಭವ ನಿರ್ಮಿಸಿದ ಆಧುನೀಕತೆ ಪರಂಪರೆ ಎಂಬ ದ್ವಿದಳ ವಿಭಜನೆ ತರವಾಗಿ ನಿರಾಕರಿಸಲ್ಪಟ್ಟಿದೆ. ಇದು ನಿಸ್ಟ್' ಸೆಳೆತದ ನಿರೂಪಣೆ ಅಲ್ಲದಿದ್ದರೂ ಳೆಯರ ಅಸ್ತಿತ್ವದ ದೊಡ್ಡ ಪ್ರಶ್ನೆಯನ್ನು ತ್ತದೆ. ವಿಧವೆ ರುಕುಮ್ಮಾ ಹಾಗೂ ಇತರೆ ್ಣ ಪಾತ್ರಗಳು ತಮ್ಮ ಅಸ್ತಿತ್ವವನ್ನು ದುಕಿಕೊಳ್ಳುವ ನಿರಂತರ ಪ್ರಕ್ರಿಯೆ ಕಾದಂಬರಿಗೆ ೊಂದು ಆಯಾಮವನ್ನು ಒದಗಿಸಿಕೊಟ್ಟಿದೆ. ಂತರ ಅಜ್ಜಿಯರಂತೆ ಇಲ್ಲಿನ ಹೆಣ್ಣುಮಕ್ಕಳು ಗಿತ್ತಿಯರು. ಆದರೆ ವೈದ್ಯರು ನಮ್ಮ ಮಾಜಿಕ ವ್ಯವಸ್ಥೆ ನಿರ್ಮಿಸಿದ-ಮುಖ್ಯವಾಗಿ ್ಣು ಮತ್ತು ಜಾತಿಯ ಕಾರಣದಿಂದ-ಹಿಂಸೆಯ ಯನ್ನು ಅನಾವರಣ ಮಾಡುತ್ತಾರೆ. ಇವರ ಕಥೆ ದಂಬರಿಗಳು ಹಿಮ್ಮುಖವಾಗಿ, ಬಾಲ್ಯದ ಜಿನತ್ತ ಚಲಿಸಿದರೂ ಅದು ಗತಕಾಲದ ಮುಖ ವಿಜೃಂಭಣೆಯಲ್ಲ ಎಂಬುದನ್ನು ಿಡಬೇಕು.

ಧಾರವಾಡದ ವಿಶಿಷ್ಟ ಭಾಷಾ ಪ್ರಯೋಗ ದಂಬರಿಯ ನೆಲೆಯನ್ನು ಇನ್ನೂ ತ್ತಾರಗೊಳಿಸಿದೆ. ಕಥಾನಕ ಒಂದೇ ಕಡೆ ಗಿರಕಿ ಡೆಯದೇ ನವಲಗುಂದ, ಧಾರವಾಡ, ಬಾಂಬೆ ್ಯಾದಿಗಳ ತುಂಬೆಲ್ಲಾ ಚಾಚಿಕೊಂಡಿದೆ. ಮನುಷ್ಯ ಪಂಚವನ್ನು ವೈದ್ಯರು ನದಿ ಹರಿಯುವಿಕೆಯ ಜೊತೆಗೆ ಸಮೀಕರಿಸಿ ಒಂದು ಶತಮಾನದ ್ಯಂತರವನ್ನು ಚಲನೆಯನ್ನು ದಾಖಲಿಸಿದ್ದಾರೆ. ಾವ ಕೃತಕ ತಂತ್ರಗಾರಿಕೆಗೂ ಜೋತು ಬೀಳದ ಕಥನ ಇತಿಹಾಸವನ್ನು ಒಂದು ಕಸದ ುಟ್ಟಿಯಂತೆ ಗ್ರಹಿಸದೆ ಅದಕ್ಕಿರುವ ಮಾನವೀಯ ೆಯಲ್ಲಿಯೇ ಕಥಿಸಿದೆ.

■ ಟಿ.ಅವಿನಾಶ್

ದರಲ್ಲೂ ಪ್ರಬಂಧ, ಜೀವನ ಚರಿತ್ರಗಳ ಇಡೀ ೋಕವೇ ಬ್ರಾಹ್ಮಣಲೋಕದ ಕೊಡು-ಕೊಳ್ಳು, ೂಟ-ಕೂಟಕ್ಕೆ ಸಂಬಂಧಿಸಿದ್ದನ್ನು ನೆನೆಸಿಕೊಂಡರೆ ರಿಸ್ಥಿತಿ ಏನೂ ಬದಲಾದಂತಿಲ್ಲ.

3. ಇದಕ್ಕಿಂತಲೂ ಅಪಾಯಕಾರಿ ಎಂದರೆ ಂಸ್ಕೃತಿಕ ಪ್ರಜ್ಞೆಗೆ ಬಡಿದಿರುವ ಲಕ್ವಾ.

ಐಶ್ವರ್ಯಾ ರೈ, ಅಕ್ಷಯಕುಮಾರ್‌ಗೆ ಪದ್ಮಶ್ರೀ ನೀಡುತ್ತದೆಂದರೆ ಇಲ್ಲಿ ಏನೋ ಗಂಭೀರ ಾಯಿಲೆ ಶುರುವಾಗಿದೆ ಎಂದರ್ಥ.

ನಮ್ಮ ಜಯಶ್ರೀ, ಕಾಸರವಳ್ಳಿಯಂಥಾ ಆಯಾ ಸ್ಥಳೀಯ ಭಾಷಾ, ಸಾಂಸ್ಕೃತಿಕ ಾಧಕರು ಈ ದೇಶದ ಬಹುರೂಪಿ ಸಾಧನೆಯ ಪ್ರತೀಕಗಳೆಂದು ಗಣರಾಜ್ಯ ಪ್ರಭುತ್ವಕ್ಕೆ ಅನ್ನಿಸದಿದ್ದರೆ ಅದು ತೀರಾ ಅಪಾಯಕಾರಿ.

ಅದು ಸಾಯಲಿ, ತೀರಾ ಅಗ್ಗವಾದ ಡಾಮಿನೆಂಟ್ ವಲಯದ ಪ್ರಭೆಗೆ ಮಾರುಹೋಗುವ ಪಡ್ಡೆ ವಯಸ್ಸಿನ ಮನೋಭಾವ ಇನ್ನೂ ಗಂಡಾಂತರಕಾರಿ.


ಒಬ್ಬ ಅಮೋಲ್ ಪಾಲೇಕರ್, ಕಾಸರವಳ್ಳಿ ಮುಖ್ಯವಾಗದೇ ಅಕ್ಷಯಕುಮಾರ್, ಐಶ್ವರ್ಯ ರೈ ಮುಖ್ಯವೆನಿಸುವುದರ ವಿರುದ್ಧ ಪ್ರತಿಕ್ರಿಯಿಸಬೇಕಾಗಿದೆ.

ನಮ್ಮ ಕಾಲದ ಶ್ರೇಷ್ಠ ಚಿಂತಕ, ಕವಿ, ಲೇಖಕ ಚಂದ್ರಶೇಖರ ಕಂಬಾರರಿಗೂ ಪದ್ಮಶ್ರೀ ಬಟ್ಟೆಯಂಗಡಿಯ ಬೊಂಬೆಯಂತಿರುವ ಐಶ್ವರ್ಯ ರೈಗೂ ಇದೇ ಪದ್ಮಶ್ರೀ... ಅಸಂಗತ ವೈರುಧ್ಯಕ್ಕೆ ಇದಕ್ಕಿಂತ ದೊಡ್ಡ ರೂಪಕ ಬೇರೆ ಇದೆಯಾ?

■ ಕೆ.ಪಿ. ಸುರೇಶ

ಕಡಿದಾಳು ಶಾಮಣ್ಣ

ಕಾಡ ತೊರೆಯ ಜಾಡು 6



ಅಕ್ಷರ ರೂಪ: ಅಕ್ಷತಾ ಕೆ.


ಬ್ರೇಕ್ ಫಾಸ್ಟ್‌ಗೆ ಬಂದು ಕೊಲೆಯಾದ ಹಂದಿ

ಹಂದಿ ಬಂದು ತನ್ನ ಬ್ರೇಕ್ ಫಾಸ್ಟ್‌ಗೆ ಬಾಯಿ ಹಾಕಿದ ಕೂಡಲೇ ದಯಾನಂದನಿಂದ ಸೂಚನೆ ಪಡೆದು ರೆಡಿಯಾಗಿದ್ದ ತೇಜಸ್ವಿ ಕಕ್ಕಸ್ಸು ಮಾಡಿದ್ದು ಕೆಳಗಿನ ಡಬ್ಬಿಗೆ ಬೀಳುವ ತೂತದಿಂದ ಹಾರೆಕೋಲಿಂದ ಅದರ ತಲೆಗೆ ಸರಿಯಾಗಿ ಮೇಲಿನಿಂದ ಇಡಕಿದ್ದ ಹೊಡತಕ್ಕೆ ಹಂದಿ ರಕ್ತ ಸುರಿಸುತ್ತಾ ಕಿರ್ರೋ ಮರ್ರೋ ಎಂದು ಕೂಗಿಕೊಳ್ಳುತ್ತಾ ರಸ್ತೆ ಬದಿ ಓಡಿತು.

ಭೆಗವತೀಕೆರೆಯಲ್ಲಿ ಚಳವಳಿಯ ರೀತಿ ನಡೆದ ಶೌಚಾಲಯ ನಿರ್ಮಾಣದ ಬಗ್ಗೆ ಹೇಳಲು ಹೊರಟ ನನಗೆ ಈ ಸಂಬಂಧದ ಇನ್ನೊಂದು ಘಟನೆ ನೆನಪಾಗುತ್ತಿದೆ. ಅದು ಮೈಸೂರಿನಲ್ಲಿ ನಾನು ಓದುತ್ತಿದ್ದಾಗ ನಡೆದಿದ್ದು ಅದನ್ನು ಹಿಂದೆ ಪ್ರಸ್ತಾಪಿಸಿಲ್ಲವಾದ್ದರಿಂದ ಈಗ ಹೇಳಿಬಿಡುತ್ತೇನೆ. ಮೈಸೂರಿನಲ್ಲಿ ಆಗ ಹೆಚ್ಚಿನ ಮನೆಗಳಲ್ಲಿ ಫ್ಲಶ್ ಔಟ್ ಕಕ್ಕಸ್ ಇರಲಿಲ್ಲ, ತಲೆ ಮೇಲೆ ಮಲ ಹೊರುವ ಪದ್ಧತಿಯ ಕಕ್ಕಸ್‌ಗಳೇ ಎಲ್ಲೆಲ್ಲೂ ಇದ್ದವು. ನಮ್ಮ ಮನೆಯ ಕಕ್ಕಸ್‌ಗಂತೂ ಯಾವಾಗಲೂ ಹಂದಿಗಳು ದಾಳಿಯಿಟ್ಟಿರುತ್ತಿದ್ದವು. ಡಬ್ಬಿಯಲ್ಲಿ ಸಂಗ್ರಹವಾಗುತ್ತಿದ್ದ ಕಕ್ಕಸ್‌ಗೆ ಬಾಯಿ ಹಾಕಿ ತಮ್ಮ ಬ್ರೇಕ್ ಫಾಸ್ಟ್ ಮುಗಿಸಿಕೊಂಡು ಅಷ್ಟೂ ಸಾಲದೆಂಬಂತೆ ನಮ್ಮ ಮನೆಯ ಕಾಂಪೌಂಡ್ ಗೋಡೆಗೆ ಬಾಯಿ ಒರೆಸಿ ಹೋಗುತ್ತಿದ್ದವು. ಮನೆಯ ಸುತ್ತಮುತ್ತ ಕಕ್ಕಸಿನ ದುರ್ನಾತ ತುಂಬಿಕೊಂಡು ಅಸಹನೀಯವಾಗಿರುತ್ತಿತ್ತು. ನಮಗೆ ದಿನಬೆಳಗಾದರೆ ಹಂದಿಗಳನ್ನು ಕಲ್ಲಿನಲ್ಲಿ ಹೊಡೆದು ಬೆರಸುವುದೇ ಕೆಲಸ ಆಗ್ಬಿಟ್ಟಿತ್ತು, ಆದರೆ ಅವುಗಳೇನು ನಮ್ಮ ಕಲ್ಲಿನ ಹೊಡೆತಕ್ಕೆಲ್ಲ ಜಗ್ಗುವವಾಗಿರಲಿಲ್ಲ.

ಒಂದು ದಿನ ಹೀಗೆ ನಾನು, ನನ್ನ ತಮ್ಮಂದಿರು-ಎಂದ್ರೆ ದಯಾನಂದ, ಸದಾನಂದ-ಸೇರಿ ಹಂದಿಗಳನ್ನು ಹೊಡೆದು ಬೆರಸುತ್ತಿರುವಾಗ ತೇಜಸ್ವಿ ಬಂದ್ರು. "ಈ ಹಂದಿಗಳಿಂದ ಗೋಳಾಗ್ಬಿಟ್ಟಿದೆ ಮಾರಾಯ್ರ. ಕೆಟ್ಟ ದುರ್ನಾತದಲ್ಲಿ ಇರಕ್ಕೇ ಸಾಧ್ಯವಿಲ್ಲ, ಬೇರೆ ಬಾಡಿಗೆ ಮನೆ ಹುಡುಕೋದೆ ಸೈ" ಎಂದು ಅವರತ್ರ ಹೇಳಿದೆ. "ಒಂಟಿಕೊಪ್ಪಲಿನ ಹೆಚ್ಚು ಮನೆಗಳಲ್ಲಿ ಇದೇ ಕಥೆ ಕಣ್ರಿ" ಎಂದ ತೇಜಸ್ವಿ "ಏ ದಯಾನಂದ, ಪಕ್ಕದ ಪಡುವಾರಳ್ಳಿಯ ಯಾರಾದ್ರೂ ರೈತರ ಮನೆಯಿಂದ ಕಬ್ಬಿಣದ ಹಾರೆಕೋಲನ್ನು ಸಂಜೆ ವಾಪಸ್ ಕೊಡ್ತೀವಂತ ಹೇಳಿ ತಂದಿಡು. ನಾಳೆ ಬೆಳಗ್ಗೆ ಆ ದಗಡಿ ಹಂದಿನ ಮತ್ತದರ ಮರಿಗಳನ್ನು ಮತ್ತೆ ಈ ಕಡೆ ಸುಳಿಯದಂತೆ ಹಲ್ಲು ಚೆಲ್ಲಿಸ್ತೀನಿ" ಎಂದು ಹೇಳಿಹೋದರು. ನಾನು, ದಯಾ ಇಬ್ಬರೂ ಅವತ್ತೆ ನಮ್ಮ ಗುರ್ತಿನ ಜಟಕಾ ಗಾಡಿ ಮಾಲೀಕ ಪುಟ್ಟಸ್ವಾಮಿಯಿಂದ ಹಾರೆಕೋಲು ಕೇಳಿ ತಂದಿಟ್ಟುಕೊಂಡೆವು. ಮರುದಿನ ತೇಜಸ್ವಿ ಹಂದಿಗಳು ಬ್ರೇಕ್ ಫಾಸ್ಟ್‌ಗೆ ಬರುವ ಬೆಳಗಿನ ಸಮಯಕ್ಕೆ ಸರಿಯಾಗಿ ಬಂದರು. ಕಕ್ಕಸ್ಸಿಗೆ ಹಂದಿಗಳು ಕನ್ಸರ್‌ವೆನ್ಸಿ ಮೂಲಕ ಬರುವಾಗ ನನಗೆ ಸೂಕ್ಷ್ಮ ಕೊಡು ಎಂದು ದಯಾನಿಗೆ ಹೇಳಿದ್ದರು ತೇಜಸ್ವಿ. ಹಂದಿ ಬಂದು ತನ್ನ ಬ್ರೇಕ್ ಫಾಸ್ಟ್‌ಗೆ ಬಾಯಿ ಹಾಕಿದ ಕೂಡಲೇ ದಯಾನಂದನಿಂದ ಸೂಚನೆ ಪಡೆದು ರೆಡಿಯಾಗಿದ್ದ ತೇಜಸ್ವಿ ಕಕ್ಕಸ್ಸು ಮಾಡಿದ್ದು ಕೆಳಗಿನ ಡಬ್ಬಿಗೆ ಬೀಳುವ ತೂತದಿಂದ ಹಾರೆಕೋಲಿಂದ ಅದರ ತಲೆಗೆ ಸರಿಯಾಗಿ ಮೇಲಿನಿಂದ ಇಡಕಿದ್ದ ಹೊಡತ ಕೊಟ್ಟರು. ಹೊಡೆತ ತಿಂದ ಹಂದಿ ರಕ್ತ ಸುರಿಸುತ್ತಾ ಕಿರ್ರೋ ಮರ್ರೋ ಎಂದು ಕೂಗಿಕೊಳ್ಳುತ್ತಾ ರಸ್ತೆ ಬದಿ ಓಡಿತು. ಅದರ ಜೊತೆಯಲ್ಲಿದ್ದ ಹಿಂಡು ಹಂದಿಗಳು ಪ್ರಾಣಭಯದಿಂದ ಅದರ ಹಿಂದೆ ಕೂಗಿಕೊಳ್ಳುತ್ತಾ ಓಡಿದವು. "ಏಯ್ ದಯಾನಂದ, ಇನ್ನು ಈ ಕಡೆ ಹಂದಿಗಳು ತಲೆ ಹಾಕಿದರೆ ಕೇಳು. ಇಷ್ಟು ಮಾಡಲಿಕ್ಕೆ ನಿನಗೆ ತಿಳಿಯಲಿಲ್ಲ" ಎಂದರು ತೇಜಸ್ವಿ.

ಅದಾದಮೇಲೆ ನಾವಿಬ್ಬರು ಪೇಟೆಗೆ ಹೋಗಿ ಓಡಾಡಿಕೊಂಡು ವಾಪಸ್ ಬಂದಾಗ ನಮ್ಮನೆ ಎದುರಿಗೆ ಬಹಳಷ್ಟು ಜನ ಸೇರಿದ್ದು ಕಂಡುಬಂತು. ಅವರಲ್ಲಿ ಎಲ್ಲೋ ಮಧ್ಯದಲ್ಲಿ ಜಟಕಾ ಪುಟ್ಟಸ್ವಾಮಿಯ ಮುಖ ಕಂಡಿತು. ಅವನನ್ನು ಕರೆದು ಏನು ವಿಷಯ ಎಂದು ವಿಚಾರಿಸಿದೆವು. ತೇಜಸ್ವಿ ಹಾರೆಕೋಲನ್ನು ಹಂದಿಗೆ ಇಡಕಿದ್ದ ಹೊಡ್ತಕ್ಕೆ ಹಂದಿ ಪ್ರಾಣ ಬಿಟ್ಟಿರಲಿಲ್ಲ ಅಷ್ಟೆ. ಅದರ ಸ್ಥಿತಿ ಆಗಲೋ ಈಗಲೋ ಎಂಬಂತೆ ಇತ್ತು, ಅದರ ಮಾಲೀಕ ಕೆಂಪ. ನಮ್ಮ ಮನೆಯ ಕಕ್ಕಸ್ಸನ್ನು ಹೊರುವವನೂ ಅವನೇ ಆಗಿದ್ದ. ಕೆಂಪ ತನ್ನ ಕಡೆಯ ಜನರನ್ನು ಕರೆದುಕೊಂಡು ಜಗಳಕ್ಕೆ ಬಂದಿದ್ದಾನೆ ಎಂದು ಪುಟ್ಟಸ್ವಾಮಿ ತಿಳಿಸಿದ. "ನಾವೇನು ಹಂದಿಯನ್ನು ಸಾಯಿಸಬೇಕೆಂದು ಹೊಡೆದಿಲ್ಲ, ಸ್ವಲ್ಪ ಹೆದರಿಸಿದೆವು ಅಷ್ಟೆ. ನೀವುಗಳೇ ಏನೋ ಮಾಡ್ಬಿಟ್ಟು ಹಂದಿ ಸತ್ತೋಯ್ತು ಅಂತ ನಮ್ಮನೆ ಬಾಗಿಲಿಗೆ ತಂದ್ರೆ ನಾವೇನು ಮಾಡದು" ಅಂತ ನಾನು, ತೇಜಸ್ವಿ ದಬಾಯಿಸಿದೆವು. ಆದರೆ ಕೆಂಪ ಮತ್ತು ಅವನ ಹೆಂಡತಿ ನಮ್ಮ ಮಾತನ್ನು ಕಿಮ್ಮತ್ತಿಗೂ ತೆಗೆದುಕೊಳ್ಳದೆ "ಅದರ ತಲೆ ಮೇಲೆ ನೀವು ಬಲವಾಗಿ ಗಿಡಿಯದಿದ್ದರೆ ಅದ್ಯಾಕೆ ಹಾಗೆ ರಕ್ತ ಕಾರಿಕೊಂಡು ಸಾಯ್ತಿತ್ತು, ಅದೆಲ್ಲ ಬೇಡ ಈಗ ಅದು ಸಾಯ್ತದೆ. ಸತ್ತಿದ್ದೇನು ಮತ್ತೆ ಬರಾಕಿಲ್ಲ, ನಾಕು ಜನ ಏನು ದರ ಕಟ್ಟುತ್ತಾರೋ ಅದನ್ನ ಮಡಗ್ತಿನಿ" ಎಂದು ಕೂಗಿದರು. ಒಂದ್ವೇಳೆ ಹೊಡೆದಾಟಕ್ಕೆ ನಾವು ತಯಾರಾದ್ರೆ ಅದಕ್ಕೂ ಇರಲಿ ಎಂದು ಜನರನ್ನ ಕರೆದುಕೊಂಡೆ ಬಂದಿದ್ದನಾದ್ದರಿಂದ ಮೆತ್ತಗೆ ಇದನ್ನು ಬಗೆಹರಿಸಿ ಕೊಳ್ಳುವುದೆ ಸೂಕ್ತ ಎಂದು ಭಾವಿಸಿ ಸಾಯೋ ಹಾಗೇನು ನಾವು ಹೊಡೆದಿಲ್ಲ, ಹೆದರಿಕೆ ಇರಲೆಂದು ಕೋಲಿಂದ ಒಂದೆರಡು ಹೊಡೆತ ಹೊಡೆದಿದ್ದಷ್ಟೆ. ನಾಲ್ಕಾರು ಹಂದಿಗಳು ಒಟ್ಟಿಗೆ ಹೇಲು ಡಬ್ಬಿಗೆ ತಲೆ ಹಾಕಿಕೊಂಡಾಗ ಕಚ್ಚಾಡಿ ಕೊಂಡು ಹೀಗಾಗಿರಬಹುದೆಂದು ವಾದಿಸಿದೆವು. ಅದಕ್ಕೆ ಕೆಂಪ "ನೀವು ಬರುವುದಕ್ಕೆ ಮುಂಚೆ ನಿಮ್ಮನೆಯಲ್ಲಿರೋರೆ ನಡೆದ ವಿಷಯ ಎಲ್ಲ ಹೇಳಿದ್ದಾರೆ. ಸುಳ್ಳು ಸುಳ್ಳೆ ಏನೇನೋ ಹೇಳಬೇಡಿ" ಎಂದು ಕೂಗಿದ. ತೇಜಸ್ವಿ ಇದ್ದವರು "ಯಾರು ಶಾಮಣ್ಣ ಇವರಿಗೆ ಸುಳ್ಳು ಸುದ್ದಿ ಕೊಟ್ಟೋರು" ಎಂದು ಕೇಳಿದರು. ಅದಕ್ಕೆ ನನ್ನ ಕೊನೆ ತಮ್ಮ ಪ್ರಕಾಶ "ಮತ್ಯಾರು, ರಣಹದ್ದು" ಎಂದ. ರಣಹದ್ದು ಎಂದರೆ ನಮ್ಮನೆ ಅಡುಗೆಯವರಾದ ಅಣ್ಣಯ್ಯಗೌಡ್ರು. ಅವರು ಎರಡೂ ಕೈಯಲ್ಲಿ ಕಾಫಿ ಲೋಟ ಹಿಡ್ಕೊಂಡು ಅದರಲ್ಲಿ ತಮ್ಮ ಬೆರಳನ್ನು ಅದ್ದಿಕೊಂಡು ತಂದು ಕೊಡ್ತಿದ್ದರು. ಅದಕ್ಕೆ ತೇಜಸ್ವಿ ಇದ್ದವರು "ಇದ್ಯಾರಿ ಒಳ್ಳೆ ರಣಹದ್ದು ಎತ್ಕಂಬಂದ ಹಾಗೆ ಕಾಫಿ ಲೋಟ ತಂದ್ಕೊಡತಾರಲ್ರಿ" ಎನ್ನೋರು.



ನೋಡನೋಡುತ್ತಿದ್ದಂತೆ ಹಂದಿ ನೆಗೆದು ಬಿತ್ತು. "ನೀವೇನಾದ್ರೂ ಸತ್ಗಳಿ, ನಾನು ಮನೆಗೆ ಹೋಗ್ತೀನಿ" ಅಂತ ತೇಜಸ್ವಿ ರ‍್ಯಾಲಿ ಸೈಕಲ್ ಹತ್ತಿ ಹೊರಟೋದ್ರು. "ನೀವೇನಾದ್ರೂ ಹಂದಿ ದರ ಕೊಡ್ಲಿಲ್ಲ ಅಂದ್ರೆ, ನಾನು, ನಾಳೆಯಿಂದ ನಿಮ್ಮ ಕಕ್ಕಸ್‌ನ್ನ ಹೊರಕ್ಕೆ ಬರಲ್ಲ. ಅದೇನು ಮಾಡ್ತೀರೋ ಮಾಡ್ಕಳಿ" ಎಂದು ಕೆಂಪ ಬೆದರಿಕೆ ಹಾಕಿದ. ಹಾಗೇನಾದ್ರೂ ಅವನು ಮಾಡಿದ್ರೆ ನಮ್ಮ ಕಥೆ ನಿಜಕ್ಕೂ ಕಷ್ಟವಾಗ್ತಿತ್ತು, ಇದನ್ನರಿತ ನಾನು ಪುಟ್ಟಸ್ವಾಮಿ ಎಷ್ಟು ದಂಡ ಕೊಡ್ಬೇಕು ಹೇಳಿ ನಾನು ಕೊಡ್ತೀನಿ ಎಂದು ಒಪ್ಪಿಕೊಂಡೆ. ಜಟಕಾ ಪುಟ್ಟಸ್ವಾಮಿ ಇದ್ದೋನು "ಅದೆಲ್ಲ ಲೆಕ್ಕಾಚಾರ ಪಡುವಾರಳ್ಳಿಯಲ್ಲೆ ನಡೆಯಲಿ. ಜೊತೆಗೆ ದಂಡ ಕಟ್ಟಿದವರಿಗೆ ಸತ್ತ ಹಂದಿ ಪಾಲನ್ನು ಕೊಡಬೇಕಲ್ಲ" ಎಂದು ಹೇಳಿದಾಗ ಕೆಂಪ ಮತ್ತು ಅವನ ಜೊತೆ ಬಂದಿದ್ದವರು ಅದಕ್ಕೆ ಒಪ್ಪಿ ವಾಪಸ್ ಹೊರಟರು. ಸತ್ತ ಹಂದಿಯನ್ನು ಹಗ್ಗ ಕಟ್ಟಿ ಮಧ್ಯೆ ದೊಣ್ಣೆ ಹಾಕಿ ಇಬ್ಬರು ಹೆಗಲ ಮೇಲೆ ಹೊತ್ತುಕೊಂಡು ನಡೆದರು. ನಾನು, ದಯಾ, ಅಣ್ಣಯ್ಯಗೌಡ್ರು ಮೂವರು ಅವರ ಜೊತೆಗೆ ನಡೆದೆವು. ಪಡುವಾರಳ್ಳಿಯಲ್ಲಿ ಹಳ್ಳವೊಂದಿತ್ತು, ಅದರ ಬದಿಯಲ್ಲಿ ಹಂದಿಯನ್ನು ಇಳಿಸಿದರು. ನನ್ನ ಬಳಿ 50 ರೂ. ದಂಡ ಕಟ್ಟಿಸಿಕೊಳ್ಳುವುದು ಹಾಗೂ ಸತ್ತ ಹಂದಿಯನ್ನು ಮೂರು ಪಾಲು ಮಾಡುವುದೆಂದು ತೀರ್ಮಾನಿಸಿದರು. ಒಂದು ಪಾಲು ಅದರ ಮಾಲೀಕನಿಗೆ, ಇನ್ನೊಂದು ಪಾಲು ಪಂಚಾಯ್ತಿದಾರರಿಗೆ (ಅಂದರೆ ಹಂದಿ ಸಂಬಂಧವಾಗಿ ಕೆಂಪನ ಜೊತೆ ನನ್ನ ಮೇಲೆ ಜಗಳಕ್ಕೆ ಬಂದಿದ್ದರಲ್ಲ ಅವರಿಗೆ) ಮತ್ತು ಮೂರನೇ ಪಾಲು ತಪ್ಪಿತಸ್ಥನಾದ ನನಗೆ (ಮಾಡಿದ ತಪ್ಪಿಗೆ ದಂಡ ಕಟ್ತುತಿದ್ದೇನಲ್ಲ ಅದರ ಬದಲಿಗೆ ಹಂದಿ ಮಾಂಸ). ಆದರೆ ನಾವು ಮನೆಯಿಂದ ಹೊರಡುವಾಗಲೇ "ಆ ಹಂದಿಯ ಮಾಂಸವನ್ನ ಮನೆಗೇನಾದ್ರೂ ತಂದ್ರೆ ನಾನು ಸುಮ್ಮನಿರಲ್ಲ" ಎಂದು ನನ್ನ ತಂಗಿ ಚಂದ್ರಾವತಿ ಎಚ್ಚರಿಕೆ ಕೊಟ್ಟೆ ಕಳಿಸಿದ್ದಳು. ಜೊತೆಗೆ ಅದು ದಿನವ್ರೂ ಬ್ರೇಕ್ ಫಾಸ್ಟಿಗೆ ಬರುತಿದ್ದುದನ್ನು ಕಣ್ಣಾರೆ ಕಂಡಿದ್ದ ನನಗೆ ಹೇಸಿಗೆಯಾಗಿ ನಮ್ಮ ಪಾಲಿನ ಮಾಂಸ ಬೇಡ ಎಂದು ಹೇಳಿಬಿಡೋಣ ಎಂದುಕೊಂಡೆ. ಆದರೆ ಅಡುಗೆಯ ಅಣ್ಣಯ್ಯ ಗೌಡ್ರಿದ್ದೋರು "ಶಾಮಯ್ಯ ನಿಂಗೊತ್ತಾಗಲ್ಲ, ಮಾಂಸ ಬಹಳ ಚೆನ್ನಾಗಿದೆ. ಕಡಿಮೆ ಅಂದ್ರೂ ನಮ್ಮ ಪಾಲಿಗೆ 10 ಕೆ.ಜಿ. ಮಾಂಸ ಬರುತ್ತೆ. ನೂರು ರೂಪಾಯಿ ಆಗತ್ತೆ 10 ಕೆ.ಜಿಗೆ. ಅದನ್ಯಾಕೆ ಇವರಿಗೆ ಬಿಡೋದು. ಹಂದಿಯ ಕಳ್ಳು ತೆಗೆದು ಹಾಕಿದರೆ ಅಲ್ಲಿಗೆ ಅದು ತಿಂದಿದ್ದೇನೂ ಉಳಿಯಲ್ಲ" ಎಂದರು. "ಇರಬಹುದು ಮಾರಾಯ್ರೆ, ಆದರೆ ನಾವು ಅದು ತಿನ್ನೋದನ್ನ ನೋಡಿಬಿಟ್ಟಿರೋದ್ರಿಂದ ನನಗೆ ತಿನ್ನಕೆ ಹೇಸಿಗೆ ಆಗತ್ತೆ, ಚಂದ್ರಾ ಬೇರೆ ತರಲೇ ಕೂಡದು ಅಂತ ಹೇಳಿ ಕಳಿಸಿದ್ದಾಳೆ. ಮತ್ತೆ ತಗಂಡು ಹೋದ್ರೆ ವಾರಗಟ್ಟಲೆ ವಾಂತಿ ಮಾಡಿಕೊಳ್ತಾಳೆ. ದುಡ್ಡು ಹೋದ್ರು ಪರವಾಗಿಲ್ಲ ಮಾಂಸ ಬೇಡವೇ ಬೇಡ" ಎಂದೆ. ಅಲ್ಲಿಗೂ ಅವರು ಸುಮ್ಮನಾಗದೇ ದಯಾನಂದನನ್ನು ಈ ವಿಷಯದಲ್ಲಿ ಒಪ್ಪಿಸಲು ಪ್ರಯತ್ನಿಸಿದರು. ಅವನಿದ್ದೋನು ನನ್ನ ಕಡೆ ಕೈ ತೋರಿಸಿ ಅಣ್ಣಯ್ಯ ಹ್ಯಾಗೆ ಹೇಳ್ತಾರೋ ಹಾಗೆ ಎಂದ. ನಾನು ಕೆಂಪನನ್ನು ಕರೆದು "ದಂಡದ ಜೊತೆ ನನ್ನ ಪಾಲಿನ ಮಾಂಸವನ್ನು ನೀನೆ ಇಟ್ಕೋ. ಆದರೆ ಕಕ್ಕಸ್ ಹೊರೋಕೆ ಮಾತ್ರ ಬರದೇ ಇರಬೇಡ" ಎಂದು ಹೇಳಿದೆ.

ದಂಡವನ್ನೂ ಕಟ್ಟಿ, ಹಂದಿ ಮಾಂಸವನ್ನೂ ಅವರಿಗೆ ಕೊಟ್ಟು ಖಾಲಿ ಕೈಯಲ್ಲಿ ಮನೆಗೆ ಬರುತ್ತಿರುವಾಗ ದಯಾನಂದ ಇದ್ದೋನು "ಅಣ್ಣಯ್ಯ ಪ್ರತಿ ಭಾನುವಾರ ನಮ್ಮನೆಗೆ ಹಂದಿ ಮಾಂಸ ತರ್ತಿದ್ನಲ್ಲ, ಅದನ್ನ ಎಲ್ಲಿಂದ ತರ್ತಿದ್ದೆ ಅನ್ಕಂಡಿದೀಯಾ? ಇಲ್ಲಿಂದಲೇ ತಗಂಬರ್ತಿದಿದ್ದು ಮತ್ತೆ ಕೆಂಪನೇ ರೆಡಿ ಮಾಡಿ ಕೊಡ್ತಿದಿದ್ದು. ತೇಜಸ್ವಿ ಬಾಳ ಚೆನ್ನಾಗಿದೆ ಎಂದು ಸರಿಯಾಗಿ ತಿಂತಿದ್ದರು. ಆದ್ದರಿಂದ ತೇಜಸ್ವಿಯವರ ಮನೆಗೂ ಸ್ವಲ್ಪ ಕಳುಹಿಸಬಹುದಿತ್ತು ಬೇಡ ಎಂದು ಬಿಟ್ಟುಬಂದದ್ದನ್ನು ತಂದಿದ್ದರಾಗುತ್ತಿತ್ತು" ಎಂದ.

(ಮುಂದುವರೆಯುವುದು)

ರಾಮಸೇನೆವುಕೆ ಗಂಡುಸ್ತನ ಕಡಮೆ ಕಣೊ ಉಗ್ರಿ

ಸೀರನ ಮುಖದಲ್ಲಿ ಯಾವುದೂ ಕುಟೋದ್ಯದ ನಗು ತಾಂಡವವಾಡುತ್ತಿತ್ತು. ಬೀಡಿ ಹಚ್ಚಿ ಎರಡು ದಂ ಎಳೆದ ನಂತರ.

"ಅಲ್ಲ ಕಿದ್ನಿ ಅಂತ ಇಂಗೂ ಕೆಟ್ಟರೆ?" ಎಂದ.

"ಯಾರು ಮಾವ ಕೆಟ್ಟೋರು?" ಎಂದಳು ಜುಮ್ಮಿ.

"ಅವುನ್ಯಾರೊ ಯಮ್ಮೆಲ್ಲೆ ಇದಾನುಭವಿಳಗಡೆಲೆ ಲಂಚ ವದಿವಾಗ ಸಿಗಾಯ್ಕುಂಡವುನೆ. ಮಂಗ ಮುಂಡೆದು. ಮನೆಲೂ ಎಲ್ಲೋ ಈಸುಗಳಕ್ಕೇನಾಗಿತ್ತು?" ಎಂದು ನಕ್ಕ.

ಬಯಲುಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಅಂತು ಈಸಗುಂದಿದ್ದು ಸರಿ ಅಂತಿ ನೀನು?" ಎಂದ ಉಗ್ರಿ.

"ಇವತ್ತಿನ ಸರ್ಕಾರದಲ್ಲಿ ಲಂಚ ಈಸಗಳದಂಗೆ ಕ್ಯಲಸ ಮಾಡೋರ್‍ಯಾರವುರೆ ತೋರ್‍ಸ."

"ಜನಾರ್ದನ ರೆಡ್ಡಿ, ಕರುಣಾಕರ ರೆಡ್ಡಿ, ರಾಮುಲು ಇವುರ್‍ಯಲ್ಲ ಲಂಚ ಮುಟ್ಟದಿಲ್ಲ ಕಣೊ."

"ಕುರಿ ತಿಂತಾಯಿರೋರತ್ತಕೆ ಇಲಿಯಸ್ಟೆ ಮುಟ್ಟರ್ಲ?" ಎಂದ ಕಾಳಮಾವ.

"ಅಂಗನ್ನ ಬ್ಯಾಡ ನೀನು. ಅದೂ ಇರ್ಲಿ ಅಂತ ಯಸಗಳರವುರೆ ಈ ಸರಕಾರದಲ್ಲಿ" ಎಂದ ಸೀರ.

"ದ್ಯಾವೇಗೌಡ ಮುಖ್ಯಮಂತ್ರಿಯಾಗಿದ್ದ ಕಾಲ್ದಲ್ಲಿ ಗೋವಿಂದೇಗೌಡ ಅನ್ನೋನು ಒಂದು ಪೈಸನೂ ಮುಟ್ಟತಿರಲಿಲ್ಲವಂತೆ. ಅದು ಬುಟ್ರೆ ಅಮ್ಯಾಲೆ ಬಂದ ಸರ್ಕಾರದಲ್ಲಿ ಅಂತ ಮಂತ್ರಿನೆ ನೋಡಲಿಲ್ಲ" ಎಂದ ಕಾಳಮಾವ.

"ಅಂತೂ ದ್ಯಾವೇಗೌಡನ ಕೈಯ್ಯೂ ನ್ಯಟ್ಟಗಿರಲಿಲ್ಲ ಅನ್ನದ ಒಪ್ಗಿಗಂಡೆ ನೀನು" ಎಂದ ಉಗ್ರಿ.

"ನೋಡ್ಯ ನಾವು ಇಲ್ಲಿ ಕುಂತಗಂಡು ಮಾತಾಡದ್ಯಲ್ಲ, ಅವುರಿವುರು ಅಂದಿದ್ದು ಪೇಪ್ರಲ್ಲಿ ಬಂದಿದ್ದ ನೋಡ್ಯಲವೆ ನಾವು ಮಾತಾಡದು. ಅಂಗೆ ದ್ಯಾವೇಗೌಡನ ಕೈಯ್ಯ ನಾವು ನೋಡಿದ್ದವೆ."

"ನೀನು ನೋಡದೆಯಿದ್ರು ಅವುನೆ ಹೇಳಿಬುಟ್ಟವುನೆ ನಾನಿಲ್ಲಿಗಂಟ ಲಂಚ ಮುಟ್ಟಲ್ಲ ಅಂತ" ಎಂದ ಉಗ್ರಿ.

"ಅವುನ್ನಾರ ನೋಡಿ ಈ ಬದ್ವೆತ್ತುದ್ದು ಕಲ್ತಗಬೇಕಾಗಿತ್ತು ಕಂಡ್ಯ" ಎಂದ ಸೀರ.

"ಯಾರು ಕಲ್ತಗಬೇಕಾಗಿತ್ತೊ?"

"ಅದೆ ಇದಾನ ಸಭೆವಳಗಡೆ ಲಂಚ ತಗಂಡನಲ್ಲ ಅವುನು."

"ಅವುನು ಸಂಪಂಗಿ ಅಂತ ಕಣೊ. ಕೋಲಾರದ ಕಡಿಯೋನು. ಇಡೀ ಬಜೆಪಿ ಜನಗಳು ಆಡುಹಗಲೆ ಬೇಕಾದಂಗೆ ದುಡುಮಾಡ್ತಯಿರುವಾಗ ನಾನು ಎಲ್ಲಿ ತಗಂಡ್ರೇನು ಅಂತ ಶಾಸಕರ ಭವನಕ್ಕೇ ಕರದಿದ್ನಂತೆ ಲಂಚ ಕೋಡೋರ. ಕೋಡೋ ಆಸಾಮಿ ಬಂದು ಕೊಟ್ಟು ಪೊಲೀಸ್‌ನೋರಿಗೆ ಪೋನ್ ಮಾಡಿದ. ಅವುರು ಬಂದತ್ತಗೆ ಬೇಡಿ ಹಾಕಿದ್ರು."

"ಬೇಡಿ ಹಾಕಿದ್ರೆ!" ಎಂದ ಕಾಳಮಾವ.

"ಕೈಲಿ ಕೈಯಿಡ ಕಂಡ್ರೆ ಅದೆ ಅಲವೆ ಮಾವ. ಹಿಡಕಂಡು ತಗಂಡೋದರಂತೆ. ಅವುನ್ನ ಬುಡಿಸಿಗಂಡು ಬರಕ್ಕೆ ರೇಣುಕಾಚಾರಿ ಹೋಗಿದ್ನಂತೆ."

"ಅವುನ್ಯಾರು?"

"ಅವುನೂ ಸಂಪಂಗಿ ಅಂಥೋನೆಯ. ಲಂಚ ತಗಂಡಿದ್ದ ಯಮ್ಮೆಲ್ಲೆ ಬುಡಸಕ್ಕೋಗಿ ಬೈಸಿಗಂಡು ಬಂದನಂತೆ."

"ಅವುನೋಗಿದ್ದೆ ಬ್ಯಾರೆದಕಂತೆ ಕಂಡ್ಯ" ಎಂದ ಸೀರ.

"ಅದ್ಯಾವುದಕಪ್ಪ ಹೋಗಿದ್ದವುನು?"

"ಆ ಯಮ್ಮೆಲ್ಲೆ ಲಂಚ ತಗಂಡಿದ್ದನಲ್ಲಾ, ಆ ದುಡ್ಡ ಯಪ್ಪೇಸ್ ಮಾಡಿಬುಟ್ರೆ ಕೇಸೆ ಎಗಿರೋಯ್ತದೆ ಅಂತ



ಪ್ಲ್ಯಾನ್ ಮಾಡಿಕಂಡು ಹೋಗಿದ್ನಂತೆ ಈ ಆಚಾರಿ."

"ಏ, ಅದಾಗ್ಲೆ ಪೊಲೀಸ್‌ನೋರ ಕೈಲಿತ್ತು ಕಣೊ ಮಾವ. ಪೊಲೀಸ್‌ನೋರ ಕೈಗೋದ್ದುಡ್ಡ ರೇಣುಕಾಚಾರಿ ಕಿತಗಳಕ್ಯಾದತೆ? ಅದೂ ಆ ದುಡ್ಡಿಗೆ ಬಣ್ಣ ಹಾಕಿರತರೆ. ನೀರಾಕಿದೇಟಿಗೆ ಕೈಯಲ್ಲ ಬಣ್ಣಾಯ್ತದೆ. ಆಗ ರೇಣುಕಾಚಾರಿನೂ ಸಂಪಂಗಿ ಜ್ವತೆಲೆ ಹಿಡಕಂಡೋಯ್ತರೆ."

"ಅಂಗರೆ ಆ ದುಡ್ಡು ಮುಟ್ಟದೇಟಿಗೆ ಕೈ ಬಣ್ಣಾಯ್ತದೆ ಅನ್ನು?" ಎಂದ ಕಾಳಮಾವ.

"ಊ ಕಣಮಾವ. ಅದು ಮಾತ್ರ ಕಣ್ಣಿಗೆ ಕಾಣದಿಲ್ಲ. ಮುಟ್ಟದೋರಿಗೆ ನೀರು ತಗುಲ್ಸಿದ್ರೆ ಸಾಕು. ಕೈಯೆಲ್ಲ ಬಣ್ಣಾಯ್ತದೆ."

"ಅಂಗರೂಸಿ ತಗಂಬಾರ್ಲ ಅದ."

"ನಿನಿಗ್ಯಾಕ್ ಮಾವ ಆ ಬಣ್ಣ?" ಎಂದು ಜುಮ್ಮಿ ನಕ್ಕಳು.

"ನಮ್ಮನೆಲೂ ವಸಿ ಕೈ ಕಸುಬು ನ್ಯದಿತಾ ಅವೆ ಕಂಡ್ಯೆ."

"ಇನ್ಯಾರು, ನಿನ್ನ ಸ್ವಸೆನೆ ಇರಬೇಕು."

"ಯಾರಾರ ಆಗ್ಲಿ, ಅಂತು ಸಿಗಾಯ್ಕತ್ತರೊ?"

"ಅಂತು ನೀನು ಸಂತೋಸ್ಪಗ್ಗಡೆ ಆಗಕ್ಕೆ ವಂಟದ್ದಿ" ಎಂದ ಉಗ್ರಿ.

"ಅವುನ್ಯಾರು?"

"ಅವುನೆ ಈಗ ಯವ್ಮೆಲ್ಲಿ ಹಿಡದಿರೋನು. ಅಲ್ಲ ಇನ್ನೂರ ಇಪ್ಪತ್ತು ನಾಕು ಜನ ಯವ್ಮೆಲ್ಲೆಗಳಿಗೂ ಯಂಗೊ ಲಂಚ ಬಂದು ಬೀಳ್ತದೆ. ಅಂತದ್ರಲ್ಲಿ ಈ ಬಡ್ಡೆತ್ತದ್ದು ಸಿಗಾಯ್ಕಂಡು ಬಜೆಪಿ ಮಾನ ಹರಾಜಾಯ್ತಲ್ಲ ಹೇಳು" ಎಂದ ಉಗ್ರಿ.

"ಬಜೆಪಿ ಮಾನ ಇವತ್ತರಾಜಾಯ್ತೇನೊ ಉಗ್ರಿ. ಅದು ಪ್ರತಿ ದಿನನೂ ಮಾನ ಕಳಕತ್ತಾ ಅದೆ" ಎಂದುಕೊಂಡು ವಾಟಿಸ್ಸೆ ಬಂದ.

"ನಿಜ ಕಣೊ. ಉಡುಪಿ ಎಮ್ಮೆಲ್ಲೆ ಹೆಡತಿ ಸತ್ತಾಗಲಿಂದ ಈ ಸರ್ಕಾರದ ಮಾನ ಹರಾಜಾಯ್ತಲೇ ಅದೆ. ಆದ್ರು ಮಾತಾಡ್ತರಲ್ಲ ಹೇಳು."


"ಆದಿರ್ಲಿ ಕಣೊ ಉಗ್ರಿ. ನಾನೊಂದು ಕ್ಯಲಸ ಮಾಡನ ಅಂತ ಇದ್ದಿನಿ. ಸಪೋರ್ಟು ಮಾಡ್ತಿಯಾ?"

"ಅದೇನೇಳಪ್ಪ?"

'ಉದ್ದೇಶ' ತಿಳ್ಕಳಿ ಮಾರಾಯರಾ!

ಸಾಧನೆ, ಸಾಧನೆ. ಪಾಪ ಯಡ್ಯೂರಪ್ಪನವರಿಗೆ ಬರೀ ಅದರದ್ದೇ ಕನಸು. ಅದನ್ನು ಸಹಿಸಲಾರದ ವಿಪಕ್ಷಗಳಿಗೆ ಹೊಟ್ಟೆ ಉರಿ. ಕ್ಷುಲ್ಲಕ ಕಾರಣಗಳನ್ನ ತೋರಿಸಿ 'ಸರ್ಕಾರದ ವೈಫಲ್ಯ' ಅಂತ ಕೂಗಾಡ್ತವೆ. ಹಾವೇರಿಯಲ್ಲಿ ರೈತರ ಮೇಲೆ ಗೋಲಿಬಾರ್ ಆಯಿತು. ಕೇಂದ್ರ ಸರ್ಕಾರ ಮಲತಾಯಿ ಧೋರಣೆ ತೋರಿಸದೆ ಇದ್ದರೆ ಇವರೂ ಅದನ್ನು ಸಮರ್ಪಕವಾಗಿ ಹಂಚುತ್ತಿದ್ದರು. ಹಂಚುವುದಕ್ಕೆ ಆಗಲಿಲ್ಲ, ಕೇಂದ್ರ ಸರ್ಕಾರದ ಸಂಚು ಇದಕ್ಕೆ ಕಾರಣ ಆಗಿದ್ದರೂ ಇವರ ಮೇಲೆ ಗೂಬೆ ಕೂರಿಸುತ್ತಾ ಕುಂತವೆ. ಚರ್ಚುಗಳ ಮೇಲೆ ದಾಳಿ ನಡೀತು. ನಿಜ. ಮುತಾಲಿಕ್ ಹೇಳುವಂತೆ ಇದರ 'ಉದ್ದೇಶ' ಹುಡುಕಬೇಕಾಗಿತ್ತು, ಅದನ್ನ ಮಾಡದೆ ಇವರ ಮೇಲೆ ಮಾತಿನ ಕತ್ತಿ ಹರುಸ್ತಾ ಬದ್ದವೆ. ಮೊನ್ನೆ ಮೊನ್ನೆ ಮಂಗಳೂರಿನ ಪಬ್ ಮೇಲೆ ಹಿಂದೂ ಸಂಸ್ಕೃತಿ ಅವನತಿಗಿಳಿಯುತ್ತಿರುವುದನ್ನು ಕಂಡೂ 'ಮಾರಲ್ ಪೊಲೀಸ್' ಪಡೆ ಕಾಣದವರ ಹಾಗೆ ಇರುವುದಕ್ಕೆ ಆಗುತ್ತಾ, ಅದರ ಮೇಲೆ ದಾಳಿ ಮಾಡಿದರು. ಇದರ 'ಉದ್ದೇಶ' ತಿಳಿಯದ ಅವು ಕಾನೂನು ಸುವ್ಯಮಸ್ತೆ ಕುಸಿದಿದೆ ಎಂದೆಲ್ಲ ಕೂಗಾಡ್ತಿವೆ. ತಮ್ಮ ಸಾಧನೆಯನ್ನು, ಅಭಿವೃದ್ಧಿ ಕಾರ್ಯಗಳನ್ನು ಕಂಡರಾಗದ ಜನರ ಬುದ್ಧಿ ಸ್ತಿಮಿತ ಇರುತ್ತೆ ಅನ್ನಿಸಲಿಲ್ಲ, ಅದನ್ನು ಆದಿಯೇ ತೋರಿಸಿದರು. 'ಅವರಿಗೆ ತಲೆ ಕೆಟ್ಟದೆ' ಅಂದರು. ಒಬ್ಬ ಮುಖ್ಯಮಂತ್ರಿಯಾಗಿ ಇಂತಹ ಪದಗಳನ್ನು ಬಳಸಬಾರದು ಅನ್ನುವವರೂ ಇದ್ದಾರೆ. ಏನು ಮಾಡ್ತೀರಿ ಹಾಗೆ ಆಗುವಂತೆ ಮಾಡ್ತಾರಲ್ಲಾ... ಅವರ ಉದ್ದೇಶ ಅರ್ಥವಾಗಿರಬೇಕಲ್ಲ. ಸುಸಂಸ್ಕೃತ ಪಕ್ಷದ ದಕ್ಷ ಮುಖ್ಯಸ್ಥನ ಬಾಯಿಂದ ಇಂತಹ ಮಂಡ್ಯದ ಭಾಷೆ (ಅದೂ ಮಾಸ್ಟರದ್ದೇ ನುಡಿಗಟ್ಟು!)ಯನ್ನು ಬಳಸುವಂತೆ ಮಾಡಿ ಅವರಿಗೆ ಕೆಟ್ಟ ಹೆಸರು ಬರುವಂತೆ ಮಾಡುವುದೇ ಅದರ ಹಿನ್ನೆಲೆ!

ಮೇಲಿನ ದಾಳಿ ಒಂದು ಸಣ್ಣ ವಿಷಯ. ಇಂತಹವು ಕರಾವಳಿಯಲ್ಲಿ ನಡೀತಾನೆ ಇರ್ತವೆ. ಇದನ್ನ ರಾಷ್ಟ್ರೀಯ, ಅಂತರರಾಷ್ಟ್ರೀಯ ಸುದ್ದಿಯನ್ನಾಗಿ ಮಾಡಲು ಪ್ರಯತ್ನಿಸುತ್ತಿರೋದಕ್ಕೆ ಕಾರಣ ತಿಳೀತಲ್ಲ, ಹಿಂದೂ ಸಂಘಟನೆಗಳಿಗೆ, ಭಾರತೀಯ ಜನತಾ ಪಕ್ಷಕ್ಕೆ ಕೆಟ್ಟ ಹೆಸರು ತರುವ ಉದ್ದೇಶ ಅವುಗಳಿಗಿದೆ ಎಂದು ಮುತಾಲಿಕ್ ಅವರೇ ಬಹಿರಂಗಪಡಿಸಿದ್ದಾರೆ. ಈ ದಾಳಿಯನ್ನೇ ನಡೆಸದಿದ್ದರೆ ಇಂತಹವಕ್ಕೆ ಅವಕಾಶನೇ ಇರ್ತಿರ್ಲಿಲ್ವಲ್ಲ ಅಂದರೆ ಹಿಂದೂ ಸಂಸ್ಕೃತಿ ನಾಶ ಆಗುತ್ತಾ ಇದ್ದರೂ ಸುಮ್ಮನಿರಲು ಶ್ರೀರಾಮ ಸೇನೆ ಮನಸ್ಸಿಗೆ ಆಗಿರುವ ಒತ್ತಡ ಎಷ್ಟಿತ್ತೆಂಬುದನ್ನು ಕಲ್ಪಿಸಿಕೊಳ್ಳಿ. ದಾರಿ ತಪ್ಪುತ್ತಿರುವ ಮಕ್ಕಳನ್ನು



ಸರಿಪಡಿಸಲು ಪ್ರಯತ್ನಿಸಿದ್ದನ್ನೇ ಘನಘೋರ ಅಪರಾಧ ಎಂದು ಬಿಂಬಿಸುವುದಾದರೆ ಈ ದೇಶ ಎಂತಹ ಅಧೋಗತಿಗೆ ಇಳಿಯುತ್ತಿದೆ ಎಂದು ಊಹಿಸಿಕೊಂಡರೇ ಭಯಾನಕವಾಗಿ ತೋರುತ್ತಿದೆ!

ಅಲ್ಲ, ಹೆಣ್ಣುಮಕ್ಕಳನ್ನು ಹೀಗೆ ಹೊಡೆಯಲು ಅವರಿಗೆ ಅಧಿಕಾರ ನೀಡಿದವರಾರು ಅಂತ ಕೇಳ್ತಿದಾರಲ್ಲ, ಇವರಿಗೇನಾದರೂ ತಲೆ ಸಮ ಇದೆಯಾ ಅಂತ. ಹಿಂದೂತ್ವವಾದಿಗಳಿಗೆ ಅಧಿಕಾರ ಅಂತ ಯಾರಾದರೂ ನೀಡಬೇಕಾ, ಅದೂ ಹಿಂದೂ ದೇಶದಲ್ಲಿ! 'ಸಂಘ ಪರಿವಾರ' ಅಂದರೆ ಇಂತಹವಕ್ಕೆಲ್ಲ ರಹದಾರಿ ಪಡೆದಿದೆ ಎಂದೇ ಅರ್ಥ ಅಲ್ಲವಾ! ಜಿಲ್ಲಾ ಮಂತ್ರಿ ಕೃಷ್ಣ ಪಾಲೇಮಾರ್ ಅವರೇ 'ಅಶ್ಲೀಲ ವೇಷದಲ್ಲಿ ಓಡಾಡಿದ್ದಕ್ಕೆ ಶಿಕ್ಷೆ' ಅಂತ ಹೇಳಿದ್ದಾರಲ್ಲ, ಎಂತಹ ಮುತ್ತಿನಂತಹ ಹಿಂದೂತ್ವ ರಕ್ಷಣೆಯ ಮಾತು! ಮಂತ್ರಿಯಾದ ಮಂತ್ರಿಗಳೇ ಹೀಗಿರುವಾಗ ಇನ್ನು ಯಾರ ಪರವಾನಗಿ ಬೇಕು?

ದಾಳಿಯ ದೃಶ್ಯಾವಳಿಯನ್ನು ದೃಶ್ಯ ಮಾಧ್ಯಮಗಳಲ್ಲಿ ಕಂಡ ಕೆಲವು ಹುಸಿಮಹಿಳಾವಾದಿಗಳು ದಾಳಿಗೊಳಗಾದ ಹೆಣ್ಣುಮಕ್ಕಳು ಧರಿಸಿದ್ದ ಉಡುಪು ಅಶ್ಲೀಲವಾಗಿ ಏನೂ ಇರಲಿಲ್ಲ ಎನ್ನುತ್ತಿದ್ದಾರೆ. ಇಂತಹ ಹುಸಿ ಮಹಿಳಾವಾದಿಗಳ ಕಾಮಾಲೆ ಕಣ್ಣುಗಳಿಗೆ ಪ್ರಚೋದನಕಾರಿಯಾಗಿದ್ದ ಉಡುಪೂ ಮರ್ಯಾದಸ್ಥರ ಉಡುಪಿನಂತೆಯೇ ತೋರಿರುವುದು ಚೋದ್ಯವಾಗಿದೆ. ಪಂಚಮಹಾಪತಿವ್ರತೆಯರಿಗೆ ಜನ್ಮ ನೀಡಿದ ಭಾರತಾಂಬೆ ಇಂತಹ ಕ್ಷುದ್ರ ಜೀವಿಗಳಿಗೂ ಮಾತೃವಾಗಿರುವುದು ದೌರ್ಭಾಗ್ಯವೇ ಸರಿ!

ಇಷ್ಟಕ್ಕೆ, ಆವಾಪಂದಿಗಳ ವಾದ ನಿಂತಿಲ್ಲ, ಭಾರತೀಯ ಮಹಿಳೆಯರು ಸೀರೆ ಉಡಬೇಕು ಅನ್ನುವುದಾದರೆ ದಾಳಿಯಲ್ಲಿ ಭಾಗವಹಿಸಿದ್ದ ಗೂಂಡಾಗಳು ಪ್ಯಾಂಟು ಧರಿಸಿದ್ದರಲ್ಲಾ, ಅದು ಹಿಂದೂ ಸಂಸ್ಕೃತಿಯೇ ಎಂದು ಪ್ರಶ್ನಿಸುತ್ತಾರೆ. ನಿಮ್ಮ ಮಗಳೇ ಈ ರೀತಿ ಪಬ್ಬಿಗೆ ಹೋಗಿದ್ದರೆ ನೀವೇನು ಮಾಡುತ್ತಿದ್ದಿರಿ ಎಂದರೆ ನಿಮಗೆ ತಂದೆ ಸ್ಥಾನ ನೀಡಿದವರಾರು ಅಂತ ಮರುಪ್ರಶ್ನೆ ಹಾಕ್ತಾರೆ. ಹೆಂಗಸರು ಪಬ್ಬಿಗೆ ಹೋಗುವುದು ತಪ್ಪಲ್ಲವಾ ಅಂದರೆ ಗಂಡಸರು ಹೋಗುವುದು ಸರಿಯಾ ಅಂತ ಕೇಳ್ತಾರೆ. ಇಂತಹ ವಿತಂಡ ವಾದಕ್ಕೆ ಏನೆನ್ನೋಣ. ಇಷ್ಟು ಮಾತ್ರ ಅಲ್ಲ 'ಶ್ರೀರಾಮ ಸೇನೆ' ಅನ್ನೊ ಹೆಸರಿನಲ್ಲಿ ಮಹಿಳೆಯರ ಮೇಲೆ ಈ ರೀತಿ ದಾಳಿ ನಡೆಸುತ್ತಾ ಇದ್ದರೆ ಮಹಿಳೆಯರು 'ಸೀತಾ ಸೇನೆ' ಅಂತ ಮಾಡಿಕೊಂಡು ಪ್ರತಿದಾಳಿ ನಡೆಸಬೇಕಾಗುತ್ತೆ ಅಂತ ಧಮಕಿ ಹಾಕುತ್ತಾರಲ್ಲ, ಏನು ಗಂಡುಬೀರಿಗಳು ಇವರು ಅಂತೀನಿ!

ಅಣಕ

ಎಚ್.ಎಲ್. ಕೇಶವಮೂರ್ತಿ

ಬಡತನ, ದೌರ್ಜನ್ಯ, ಧಾರ್ಮಿಕ ಕಾರಣಗಳಿಗಾಗಿ ಪ್ರತಿ ವರ್ಷ ಸಾವಿರಾರು ಮುಗ್ಧ ಹೆಣ್ಣುಮಕ್ಕಳು ದೇಹ ಮಾರಾಟಕ್ಕೆ ಬಲಿಯಾಗ್ತಿದಾರಲ್ಲ, ನಿಮ್ಮ ಹಿಂದೂ ಧರ್ಮ ಅಲ್ಲಿ ಮಾರಾಟದ ಸರಕಾಗಿದೆಯಲ್ಲ ಎಂದೆಲ್ಲ ಪ್ರಶ್ನೆಗಳನ್ನು ಎಸೆತಿರುವ ಮಂದಿ ಗೊತ್ತುಂಟು. ಅಂತಹ ಕೆಲವು ಹಿಂದೂ ಕಂಟಕರು ಶಿಕ್ಷಣ ಕ್ಷೇತ್ರದಲ್ಲೂ ನುಸುಳಿಕೊಂಡಿದ್ದಾರೆ. ಹಿಂದೂ ಧರ್ಮ ಕುರಿತು ಅವಹೇಳನಕಾರಿ ವಿಷಯಗಳನ್ನು ವಿದ್ಯಾರ್ಥಿಗಳಿಗೆ ಬೋಧಿಸಿ ಅವರ ನಿಷ್ಕಲ್ಮಷ ಹೃದಯಗಳನ್ನು ಕೆಡಿಸುತ್ತಿದ್ದಾರೆ. ಅಂತಹವರಿಗೆ ಸಮಾಪಾಠ ಕಲಿಸಲು ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಸಿದ್ಧತೆ ನಡೆಸಿಕೊಳ್ಳುತ್ತಿದೆ.

ಎಬಿವಿಪಿ ಎಂದಾಗ ನೆನಪಾಯಿತು. ಪಬ್ ಮೇಲಿನ ದಾಳಿ ಖಂಡಿಸಿ ರಾಜ್ಯದ ವಿವಿಧೆಡೆ ವಿದ್ಯಾರ್ಥಿ ಸಂಘಟನೆಗಳು ಪ್ರತಿಭಟನೆ ನಡೆಸಿದವಲ್ಲ, ಅವೆಲ್ಲ ರಾಜಕೀಯಪ್ರೇರಿತ ಪ್ರತಿಭಟನೆಗಳು! ಎಬಿವಿಪಿ ನೋಡಿ. ಎಂತಹ ದೇಶಭಕ್ತಿ, ಸಂಸ್ಕೃತಿ ರಕ್ಷಣೆ ಅವರ ರಕ್ತದಲ್ಲಿ ಹರಿಯುತ್ತಿದೆ! ಈ ಸಂಘಟನೆಯ ಒಬ್ಬಳೇ ಒಬ್ಬಳು ವಿದ್ಯಾರ್ಥಿನಿಯೂ ಇದರಲ್ಲಿ ಭಾಗವಹಿಸಿರಲಿಲ್ಲ! ಯಾಕೆಂದರೆ ಅವರಿಗೆ ದಾಳಿಯ ಉದ್ದೇಶ ತಿಳಿದಿತ್ತು, ಇದು ಸಂಸ್ಕೃತಿಯ ಉಳಿಸಲು ನಡೆದ ದಾಳಿ ಎಂದು!

ಇಷ್ಟೆಲ್ಲ ಸಾಕ್ಷ್ಯಾಧಾರಗಳಿದ್ದರೂ ಹಿಂದೂತ್ವವಾದಿಗಳ ಮೇಲೆ ತಪ್ಪು ಹೊರಿಸುವ ಪ್ರಯತ್ನ ನಡೆಯುತ್ತಿದೆ. ಅಶ್ಲೀಲ ನಡತೆಯನ್ನು ಕಂಡಿದ್ದರೆ ಪೊಲೀಸರಿಗೆ ವಿಷಯ ತಲುಪಿಸಬೇಕಾಗಿತ್ತು ಎಂದು ಬುದ್ಧಿ ಹೇಳುತ್ತಾರೆ. ಒಂದು ವೇಳೆ ಹಾಗೆ ಮಾಡಿದ್ದವು ಅನ್ನಿ, ಆಮೇಲೇನು ಮಾಡುತ್ತಿದ್ದರು?

ರಾಮಸೇನೆ ಎದ್ರಿಗೆ ರಾವಣಸೇನೆ ಕಟ್ಟನಾ ಅಂತ ..."

ಆಹಹ ಮಕಾ ನೋಡು" ಎಂದಳು ಜುಮ್ಮಿ.

ರಾವಣಸೇನೆ ಕಟ್ಟಬೇಕಾದ್ರೆ ಜೋರಾಗಿರಬೇಕು ಕಣೊ. ತೆಳ್ಳಿದ್ರೆ ಉಂಟಿಗಳಂಗಿದ್ದಿ. ರಾಮಸೇನೆ ವಿರುದ್ಧ ಮಾಡಿಯಾ?" ಎಂದು ಉಗ್ರಿ ನಕ್ಕ.

ನಾನು ಹೋರಾಡದಿಲ್ಲ ಕಣೊ. ಈಗ ಬ್ಯಾಟೆ ಮಾಡಕ್ಕೆ ನಾಯ ಹಿಡಕಂಡೋಯ್ತರೆ. ವೊಲದಿಂದೆ, ವಿಯಿಂದೆ ಇವುರೆ ಓಡ್ತರೋ ಅಥವ ಬುಡ್ತರೊ?"

ಓಹೊಹೋ ಅಂಗೆ. ಈಗ ಪ್ರಮೋದ್ ಮುತಾಲಿಕ್ ... ಅವುನೆ, ರಾಮಸೇನೆ ಜನ ಹೆಂಗಸರ ಓಡಿಸ್ಯಾಡಿ ವಡಿತರಲ್ಲ, ಅಂಗೆ ಅನ್ನು."

ಎಸ್. ಆದೇತರ ರಾಮಸೇನೆ ಜನ ಏನೇ ಮಾಡಿದ್ರು ರಾವಣಸೇನೆ ಹುಡುಗ್ರು, ಅವನ್ಯಾಲೋಗಿ ...ಸಿಗತ್ತರೆ."

"ಅಲ್ಲಾ, ಆ ರಾಮಸೇನೆವುಕೆ ಏನು ಬಂದದ್ದಾ?" ...ಳು ಜುಮ್ಮಿ.

"ಅವುಕೆ ವಟ್ಟೆಕಿಚ್ಚು ಕಣೆ. ಪ್ರಾಯದುಡುಗ್ರ ಹುಡುಗೀರ ಮಾತಾಡಿಕಂಡು ಬೀರು ಕುಡಕಂಡು ಕುಂತಿರದ ...ಡಿ ಸಯಿಸಕ್ಕಾಗದಿಲ್ಲ" ಎಂದ ಉಗ್ರಿ.

"ಮದ್ಲ ರಾಮಸೇನೆ ಬದ್ದೆತ್ತವಲವೇನೊ ಉಗ್ರಿ. ರಾಮ ...ನೂ ನ್ಯಟ್ಟಗೆ ಇಟಗಂದಿರಲಿಲ್ಲ, ನೆಗ್ಲೆಟ್ ಮಾಡಿದ್ದ. ...ಮ್ಯಾಲೆ ಆ ಸೂರುಪನಕ್ಕಿ ಬಂದು ಮದಿವಾಯ್ತಿಯ ಕೇಳಿದಾಗ ಅವುಳ ಬೆನ್ನ ಮ್ಯಾಲೆ ಇವುಳ ಮೂಗು ...ದಲೆ ಕೂದೂ ಕಳುಸು ಲಕ್ಷ್ಮಣ ಅಂತ ಬರದು ...ದ್ದ. ಆ ಲಕ್ಷ್ಮಣ ಹೆಡತಿ ಬುಟ್ಟು ಕಾದಲ್ಲಿದ್ದೊನು. ...ದ ಸೂರುಪನಕ್ಯಿಯು ವಸಿದಿನ ಇಟಗಂಡು ...ಸಬವುದಿತ್ತು. ಅಂತ ಚಾನ್ಸನೂ ಮಿಸ್ ಮಾದಿಕಂಡ. ...ಗು ಮುಂದಲೆ ಕೂದು ಕಳಿಸಿದ್ದ. ಅಂತ ಜನಗಳ ...ಲೋಯರ್‌ಗಳು ಇನ್ನೇನು ಮಾಡ್ತರೂ?" ಎಂದ ...ಟಿಸ್ಸೆ.

"ಅಂತ ಮುಂಡೆಮಕ್ಕಳ ಮನೆಲಿ ಹೆಂಗುಸ್ರ ಗಿರ್ತರ್ಲ?"

"ಯಂಗೊ ಇರತರೆ ಕಣಕ್ಕ. ಪರೆಗ್‌ಜಾಂಪಲ್ ರಾಮನ್ನ ಸೀತೆ ಮದಿವಾದ್ಲು ಇರಲಿಲ್ವೆ. ಊರುಮಿಳೆ ಇರಲಿಲ್ವೆ. ಅಂಗಿರತರೆ. ಅದ್ಯಲ್ಲ ಬ್ಯಾಡವ್ವ ನೀನೆ ಇಲವೆ?" ಎಂದ ವಾಟಿಸ್ಸೆ.

"ಯಾಕೆ, ನನಿಗೇನಾಗ್ಯದ್ಲ?"

"ಅಂಗಲ್ಲ ಕಣಕ್ಕ. ನಿನ್ನ ಲೈವೆಲ್ಲಿಗ ನಿನ್ನ ಗಂಡ ಅಲ್ಲ, ನಿನ್ನನ್ನ ಎಲ್ಯೂ ಕರಕಂಡೋಗಲಿಲ್ಲ. ಒಂದು ಸಿನುಮ ತೋರಲಿಲ್ಲ. ಒಂದು ಮಸಾಲೆ ದ್ವಾಸೆ ಕೊಡುಸಲಿಲ್ಲ ನಮ್ಮ ಬ್ರದರಿನ್‌ಲಾ. ಆದ್ರು ನೀನು ಇರಲಿಲ್ವೆ?"

"ಆದನ್ಯಲ್ಲ ಉಗ್ರಿ ಮಾಡಿದನಲ್ಲ ತಗೊ" ಎಂದ ಸೀರ.

"ರಾಮಸೇನೆ ಜನಗಳ ಸಮಸ್ಯೆ ಏನು ಗೊತ್ತೇನೊ ವಾಟಿಸ್ಸೆ?"

"ಏನು ಸಮಸ್ಯೆನೊ ಅವುಕೆ?"

"ಅವುಕೆ ಗಂಡುಸ್ತನ ಕದಮೆ. ಆದಕ್ಕೆ ಗಂಡುಸ್ತನ ಇರೊ ಹುಡುಗರ ಜ್ವತೆ ಹುಡುಗಿರಿದ್ರೆ ಯಂಗೆ ಸಯಿಸ್ತರೆ ಹೇಳು? ಅದ್ಕೆ ಮಂಗಳೂರಲ್ಲಿ ದಾಳಿ ಮಾಡಿರದು."

"ಅಂದ್ರೆ ಏನೊ ಉಗ್ರಿ ನೀನೇಳದು? ಹುಡುಗೀರ ಜ್ವತೆ ಇರೊ ಹುಡುಗರು ನಮ್ಮ ಜ್ವತೆಲೆ ಇರ್ಲಿ ಅಂತ ರಾಮಸೇನೆ ಹುಡುಗ್ರು ದಾಳಿ ಮಾಡಿದ್ವರೆ?"

"ಅವ್ರುರ ನಡವಳಿಕೆ ನೋಡಿದ್ರೆ ಅಂಗೆ ಕಾಣದಿಲವೆನೊ?"

"ಸಮಸ್ಯೆನ ಡೀಟೈಲಾಗಿ ನೋಡಿದ್ರೆ ಗಂಡುಸ್ತನ, ವಟ್ಟೆಕಿಚ್ಚು ಮತೀಯತೆ, ಮಂದ ಮತೀಯತೆ, ಹಿಂಗೆ ಏನೇನೊ ಕಾಣ್ತ ಅದೆ ಕಣೊ ಉಗ್ರಿ" ಎಂದ ವಾಟಿಸ್ಸೆ.

"ಏನಾರ ಕಾಣ್ಲಿ, ಹೆಣ್ಣುದ್ರು ಎಲ್ಲಿ ಅಂದ್ರಲ್ಲಿ ಕುಣಿಬಾರದು, ಕುಡಿಬಾರದು ಕಂಡ್ರ, ಒಂದೀಟದ್ದುಬಸ್ತಲಿರಬೇಕು" ಎಂದ ಕಾಳಮಾವ.

"ಇದೇನ್ ದ್ವಡಪ್ಪ ಎಡೂರಪ್ಪನಂಗೆ ಮಾತಾಡ್ತಿ?"

"ಎಡೂರಪ್ಪನೆ ಆಗ್ಲಿ, ಸಿದ್ಲಿಂಗಪ್ಪನೆ ಆಗ್ಲಿ ಯಲ್ಲಾರು ಹೇಳದದೆಯಾ."

" !?" ■

...ಧಿಸಿ ವಿಚಾರಣೆ ನಡೆಸುತ್ತಿದ್ದರು-ಹೆಚ್ಚೆಂದರೆ ಕಾನೂನು ...ಕ್ರಮ ತೆಗೆದುಕೊಳ್ಳುತ್ತಿದ್ದರು. ಇದೆಲ್ಲದರ ಉದ್ದೇಶ ...ಗಿರುತ್ತಿತ್ತು? ಅದೇ ಅಶ್ಲೀಲ ನಡತೆಯ ತಡೆ ತಾನೆ? ...ಪ್ರು ಮಾಡಿದ್ದೂ ಅದನ್ನೇ ಅಲ್ಲವೆ? ನಮ್ಮ ನಾಯಕ ...ಮೋದ್ ಮುತಾಲಿಕ್ ಅವರು ಸ್ಪಷ್ಟವಾಗಿ ನುಡಿದಿರುವಂತೆ ...ರ್ಕಾರಕ್ಕೆ ಪೂರಕವಾಗಿತ್ತು ಈ ದಾಳಿ' ಅಲ್ಲವಾ!

ಇನ್ನೂ ಒಂದು ಇದೆ. ದಾಳಿ ಸಂದರ್ಭದಲ್ಲಿ ಶ್ರೀರಾಮ ...ಯವರು 'ಹುಡುಗಿಯರಿಗೆ ಹೊಡೆಯಬೇಡಿ' ಎಂದು ...ವಿನಲ್ಲಿ ಹೇಳಿದ್ದನ್ನು ನೀವು ಮಾಧ್ಯಮಗಳಲ್ಲಿ ...ಸಿಕೊಂಡಿರಬಹುದು. ಅಂದರೆ ನಮಗೆ ಮಹಿಳೆಯರ ... ಅಪಾರ ಗೌರವ ಇದೆ ಎಂದಾಯಿತಲ್ಲಾ, ಕೆಲವು ...ಡುಗಿಯರಿಗೆ ಅಟ್ಟಾಡಿಸಿಕೊಂಡು ಹೊಡೆಯುತ್ತಿರು ...ವನ್ನು, ಕೆಳಗೆ ಬಿದ್ದರೂ ಥಳಿಸುತ್ತಿರುವುದನ್ನು ನೀವು ...ನೋಡಿರಬಹುದು. ಯುವತಿಯರು ಓಡಿ ಹೋಗುವ ...ದಲ್ಲಿ ಬಿದ್ದಿರಬಹುದು. ನಮ್ಮ ಸೇನೆ ಕೆಡವಿದ್ದಲ್ಲ. ...ದಿಬ್ಬರು ಅತಿರೇಕವಾಗಿ ವರ್ತಿಸಿರಬಹುದು. ಅದಕ್ಕಾಗಿ ...ಮ್ಮ ನಾಯಕರು ಕ್ಷಮೆ ಕೋರಿದ್ದಾರಲ್ಲ, ಕಾನೂನಿನಂತೆ ...ವಿಧಿಸಲಿ ಅಂದಿದ್ದಾರಲ್ಲ. ಅಲ್ಲಿಗೆ ಮುಗಿಯಿತು!

ಪೊಲೀಸರು ದಕ್ಷರಾಗೇ ಕಾರ್ಯ ನಿರ್ವಹಿಸಿದರು ...ದಿಟ್ಟುಕೊಳ್ಳೋಣ. ಆಪಾದಿತರ ಮೇಲೆ ಮೊಕದ್ದಮೆ ...ಖಲಿಸಿದರು ಎಂದಿಟ್ಟುಕೊಳ್ಳೋಣ. ಆನಂತರದಲ್ಲಿ ಘನ ...ರ್ಕಾರ ಇವರ ಮೇಲಿನ ಎಲ್ಲ ಮೊಕದ್ದಮೆಗಳನ್ನು ...ಂತೆಗೆದುಕೊಳ್ಳುತ್ತೆ! ಇಂತಹ ಆರೋಪ ಮಾಡುವವರೂ ...ರಬಹುದು. ನ್ಯಾಯಸಮ್ಮತವಾಗಿ ಯಾವುದನ್ನು ...ಂತೆಗೆದುಕೊಳ್ಳಬೇಕಾಗುತ್ತದೋ ಅಂತಹವನ್ನೆಲ್ಲ ...ಂತೆಗೆದುಕೊಳ್ಳುವುದು ಹಿಂದೂ ಸಂಸ್ಕೃತಿ ತಾನೆ!

ಯಾರು ಎಷ್ಟೇ ಕೂಗಾಡಿದರೂ ನಮ್ಮ ಒಂದು ...ರೋಮವನ್ನು ಅಲ್ಲಾಡಿಸಲು ಆಗುವುದಿಲ್ಲ. ವಿರೋಧ ...ಕ್ಷಗಳು ಬೀದಿಗಿಳಿಯಲು ಅವಕ್ಕೆ ಉಸಿರೇ ಇಲ್ಲ. ...ಮೀಟ್ ಕರೀತಾರೆ. ಬಾಯಿಗೆ ಬಂದದ್ದು ಬೊಗಳ್ತಾರೆ. ...ಮೇಲೆ ಐಷಾರಾಮಿ ಕಾರುಗಳಲ್ಲಿ ಮನೆಗೆ ಹೋಗಿ ...ಬರಕೆ ಹೊಡೀತಾರೆ. ಅಲ್ಲಿಗೆ ಮುಗಿಯಿತು ಅವರ ...ತಿಭಟನಾಶ್ರಾದ್ಧ!

ಕಳೆದ ವಿಧಾನಸಭೆ ಅಧಿವೇಶನದಲ್ಲಿ ನಡೆದದ್ದು ನೋಡಿ. ...ಮೋತ್ಪಾದನಾ ವಿರೋಧಿ ವಿದ್ಯಾರ್ಥಿ ಜಾಗೃತ ಸಮಾವೇಶ ...ರ್ಚೆಗೆ ಬಂತು. ಶಿಕ್ಷಣದ ಕೇಸರೀಕರಣ ...ಮಾಡುತ್ತಿರುವುದನ್ನು ಮಲ್ಲಿಕಾರ್ಜುನ ಖರ್ಗೆ ಖಂಡಿಸಿದ್ದರು. ...ದಕ್ಕೆ ಹಣ ಎಷ್ಟು ಖರ್ಚಾಗಿದೆ? ಹಣ ಎಲ್ಲಿಂದ ...ಬಂತು? ಯಾವ ಹೆಡ್ಡಿನಲ್ಲಿ ಇದನ್ನು ಖರ್ಚು ಮಾಡಲಾಗಿದೆ ಎಂದೆಲ್ಲ ಪ್ರಶ್ನೆಗಳ ಸುರಿಮಳೆ ಸುರಿಸಿದರು. ಇದಕ್ಕೆ ಉತ್ತರ ನೀಡಿದ್ದು ಅರವಿಂದ ಲಿಂಬಾವಳಿ ಅಲ್ಲ! ಬದಲು ಸುರೇಶ್‌ಕುಮಾರ್ ಅವರು! ಈ ದಲಿತನನ್ನು ಬಲೆಗೆ ಬೀಳಿಸಲು ಆ ದಲಿತನ ಕೈಲಿ ಆಗಲ್ಲ ಅಂತಾನೋ ಏನೋ! ಖರ್ಗೆ ಕೇಳಿದ ಪ್ರಶ್ನೆಗಳಿಗೆ ಉತ್ತರ ಹೇಳಲಿಲ್ಲ, ಬುದ್ಧ ವಿಹಾರ ತಗೊಂಡರು. ಅದಕ್ಕೆ ಸರ್ಕಾರದಿಂದ ಏಳು ಕೋಟಿ ನೀಡಿದೆಯಲ್ಲ ಸರ್ಕಾರ ಅದೆಲ್ಲಿಂದ ಕೊಟ್ಟಿದ್ದು ಅಂತ ಕೇಳಕ್ಕೆ ಬರುತ್ತಾ ಅಂದರು. ಇಷ್ಟು ಸಾಲದಾ. ಖರ್ಗೆಗೆ ಉರಿ ಹತ್ತುಂತು. ನಿಮ್ಮ ಹಣ ನೀವೇ ಹಿಂದಕ್ಕೆ ಪಡೀರಿ, ನಾನೇ ಭಿಕ್ಷೆ ಬೇಡಿ ಕಾಮಗಾರಿ ಪೂರೈಸ್ತೀನಿ ಹಾಗೆ ಹೀಗೆ ಅಂತ ಹಾರಾಡಿದರು. ಅವರಿಗೆ ಕೋಪ ಬಂದಷ್ಟು ಸುರೇಶ್‌ಕುಮಾರ್ ಒಳೊಳಗೇ ಖುಷಿಪಟ್ಟಿರಬೇಕು. ನಂತರ ಮುಖ್ಯಮಂತ್ರಿಗಳು ಮಧ್ಯೆ ಪ್ರವೇಶಿಸಿದರು. ಸುರೇಶ್‌ಕುಮಾರ್ ಹೀಗೆಲ್ಲ ಮಾತನಾಡುವುದು ತಪ್ಪು ಅಂದರು. ಮಾನ್ಯ ಮಂತ್ರಿವರ್ಯರು ಸನ್ಮಾನ್ಯ ವಿರೋಧ ಪಕ್ಷದ ನಾಯಕರ ಕ್ಷಮೆ ಯಾಚಿಸಿದರು. ಅಲ್ಲಿಗೆ ಇಡೀ ಪ್ರಕರಣ ಸುಖಾಂತ್ಯವಾಯಿತು! ಸಮಾವೇಶದ ಸಂಗತಿ ಮಾರುವಾಯಿತು. ಖರ್ಗೆ ಎತ್ತಿದ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯಿತು!

ಯಾರ ಸಂಬಂಧ?

'ಶ್ರೀರಾಮ ಸೇನೆ' ಏನು?

ಹಿಂದೂ ಸಂಸ್ಕೃತಿ ರಕ್ಷಕರು!

ಭಾಜಪ ಏನು?

ಅವರೂ ಅದೇ!

ಇಬ್ಬರಿಗೂ ಅನ್ಯೋನ್ಯ

ಸಂಬಂಧ!

ಇದು ಎಲ್ಲಿಯವರೆಗಿತ್ತು?

ಈ ಹಿಂದೂ ಸಂಸ್ಕೃತಿ ರಕ್ಷಣೆ ರಾದ್ಧಾಂತವಾಗುವ ತನಕ!

ಪಬ್ ಮೇಲಿನ ದಾಳಿ ಪ್ರಜ್ಞಾವಂತರೆಲ್ಲರ ದೂಷಣೆಗೆ ಗುರಿಯಾಗಿದೆ.

ಈಗ ಭಾಜಪ ಸಾರುತ್ತಿದೆ-ನಮಗೂ ಶ್ರೀರಾಮ ಸೇನೆಗೂ ಯಾವುದೇ ಸಂಬಂಧ ಇಲ್ಲ!

ಹಾ ಶ್ರೀರಾಮ!

ನೀತಿ: ಕೆಟ್ಟ ಕೆಲಸ ಮಾಡು. ಸಿಕ್ಕಿಕೊಳ್ಳದಂತೆ ಮಾಡು! ■

ಮರೆಯುವ ಮುನ್ನ



ಪಿ. ಲಂಕೇಶ್ — ಏಪ್ರಿಲ್ 21, 1991

ಕೊಡಗು

ಕೊಡಗು ಎಂಥ ಪ್ರದೇಶ ಎಂದು ಮತ್ತೆ ಹೇಳಬೇಕಾಗಿಲ್ಲ. ಇವತ್ತಿಗೂ ಈ ಕೊಡಗಿನ ಮೂರು ತಾಲ್ಲೂಕುಗಳಲ್ಲಿ ಒಂದೂವರೆಯಷ್ಟು ತಾಲ್ಲೂಕುಗಳು ನಿತ್ಯಹರಿದ್ವರ್ಣದ, ತೇವ ಚಿಮ್ಮುವ, ಕಾರಂಜಿಗಳ, ಕಣ್ಣೋಡುವವರೆಗೆ ಮರಗಿಡಗಳನ್ನುಳ್ಳ ಪ್ರದೇಶ. ಇನ್ನೂರು ವರ್ಷ ಬ್ರಿಟಿಷರು ಇಲ್ಲಿ ಕಾಫಿ ತೋಟಗಳನ್ನು ಮಾಡಿ ಹೋದರು. ಇಲ್ಲಿಯ ತೋಟಗಳಿಗೆ ಚಿಕ್ಕಮಗಳೂರಿನ ತೋಟಗಳನ್ನು ಹೋಲಿಸಿದರೆ ಕೊಡಗಿನ ಅಚ್ಚುಕಟ್ಟು, ಸೌಂದರ್ಯಪ್ರಜ್ಞೆ ತಿಳಿಯುತ್ತದೆ.


ಇದಕ್ಕಿಂತ ಹೆಚ್ಚಾಗಿ ಇಲ್ಲಿಯ ಮೂಲನಿವಾಸಿಗಳಾದ ಕೊಡವರು ಗಟ್ಟಿ ದೇಹದ, ದಿಟ್ಟ ಮನಸ್ಸಿನ ಜನ; ಭಾರತಕ್ಕೆ ಇಬ್ಬರು ದಂಡನಾಯಕರನ್ನು ನೀಡಿದ ಕೊಡಗಿನ ದೈಹಿಕ ಶ್ರೇಷ್ಠತೆಯ ಬಗ್ಗೆ ಮತ್ತೆ ಹೇಳಬೇಕಿಲ್ಲ. ಒಮ್ಮೆ ನಾನು ಈ ಕೊಡಗಿನಲ್ಲಿ ಕಾಫಿ ತೋಟದ ಮೇಲೆ ಸಾಕ್ಷ್ಯಚಿತ್ರ ಮಾಡಲು ಹೋಗಿದ್ದೆ. ಅದು ಹೇಗೋ ಅಲ್ಲಿಯ ಜನಕ್ಕೆ ನಾವೆಲ್ಲ ಚಿತ್ರ ತೆಗೆಯಲು ಬಂದಿರುವುದು ಗೊತ್ತಾಯಿತು. ಅಲ್ಲಿಯ ಮದುವೆಯೊಂದಕ್ಕೆ ಆಹ್ವಾನಿಸಿ ಒತ್ತಾಯಿಸಿದ್ದು ಮಾತ್ರವಲ್ಲ, ಮದುವೆಗೆ ಬಂದಿದ್ದ ಬೀಗರೊಬ್ಬರು ತಮ್ಮ ಮನೆಗೆ ನಮ್ಮ ತಂಡವನ್ನು ಆಹ್ವಾನಿಸಿ ರಮ್, ಊಟ ನೀಡಿ ಸತ್ಕರಿಸಿದರು. ಕುತೂಹಲಕರವೆಂದರೆ, ಒಂಟಿಯಾಗಿದ್ದ ಅವರ ದೊಡ್ಡ ಮನೆಗೆ ವಿದ್ಯುತ್ ಇರಲಿಲ್ಲ. ನಿರ್ಲಕ್ಷ್ಯಕ್ಕೊಳಗಾದ ಮನೆಯಂತಿತ್ತು. ಇನ್ನೊಂದು ವಿಚಿತ್ರವೆಂದರೆ, ಈ ಕೊಡಗಿನ ಹೆಣ್ಣುಮಕ್ಕಳು ಗಂಡಸರಂತೆಯೇ ಸ್ವಲ್ಪ ಗಟ್ಟಿಗರಿರಬೇಕು, ಗಂಡುಬೀರಿಯರಿರಬೇಕು ಎಂದು ತಿಳಿದಿದ್ದ ನಾನು ಅವರ ಸೌಂದರ್ಯದಿಂದ ಚಕಿತನಾದೆ. ಮದುವೆಯಲ್ಲಿ ನೆರೆದಿದ್ದ ಸುಮಾರು ಇನ್ನೂರು ಜನ ಹುಡುಗಿಯರು, ನಡುವಯಸ್ಸಿನವರಲ್ಲಿ ಶೇಕಡ ತೊಂಭತ್ತು ಭಾಗ ಸುಂದರಿಯರು. ಹಾಗೆಯೇ ಹಸಿರು ಕಣಿವೆಯ ಪುಟ್ಟ ದಾರಿಗಳಲ್ಲಿ ಬರುವ ಈ ಚೆಲುವೆಯರನ್ನು ನೋಡಬೇಕು-ಹಸಿರು ಹಿನ್ನೆಲೆಗೆ ಇವರ ಬಣ್ಣಬಣ್ಣದ ಕೊಡೆಗಳ ಅಲಂಕಾರ. ನಾವಿದ್ದ ಎರಡು ದಿನವೂ ಮಳೆ; ಈ ಕಾಡಿನ ನಡುವೆ ಇರುವ ಚಟ್ಟೇಹಳ್ಳಿಯಲ್ಲಂತೂ ಮಳೆಯ ಭೀಕರ ಆರ್ಭಟ.



ಈ ಕೊಡಗಿಗೆ ಏನಾಗಿದೆ ನೋಡಿ. ಕೊಡವರು ತಮ್ಮ ತೋಟ ಮಾರಿಕೊಂಡು ಬೆಂಗಳೂರು, ಮೈಸೂರಿನ ಮಸಾಲೆ ದೋಸೆ, ಸ್ಕಾಚ್ ವಿಸ್ಕಿಗಳಿಗೆ ಶರಣಾಗಿ ಜಾಗ ಖಾಲಿ ಮಾಡುತ್ತಿದ್ದಾರೆ. ಇವರಲ್ಲನೇಕರಿಗೆ ಕಾಡು, ಸಂಪ್ರದಾಯ, ಬೇಟೆ, ಹಬ್ಬ, ನೃತ್ಯ-ಎಲ್ಲದರಲ್ಲಿ ಆಸಕ್ತಿ ಕಮ್ಮಿಯಾಗುತ್ತಿದೆ. ಎಲ್ಲರ ನಿರ್ಲಕ್ಷ್ಯದಿಂದಾಗಿ ಕೊಡಗಿನ ಕ್ರೀಡೆ ಕೂಡ ತಲೆಯೆತ್ತುತ್ತಿಲ್ಲ. ವಿಶಿಷ್ಟ ಜೀವನಕ್ರಮದ ಕೊಡಗನ್ನು ಪ್ರತ್ಯೇಕ ಲೋಕಸಭಾ ಕ್ಷೇತ್ರವನ್ನಾಗಿಸಲು ಮೂರ್ಖ ಚುನಾವಣಾ ಆಯೋಗ ನಿರಾಕರಿಸುತ್ತಿದೆ. ಕೊಡಗಿನ ಜಿಲ್ಲಾ ಪರಿಷತ್ತಾದರೂ ಸರಿಯಾಗಿ ಕೆಲಸ ಮಾಡಿ ಇನ್ನಷ್ಟು ಆರ್ಥಿಕ ಬೆಂಬಲ ಪಡೆದರೆ ಕೊಡಗಿಗೆ ಅನುಕೂಲವಾಗಬಹುದು. ಅದು ಕೂಡ ಆಗುತ್ತಿಲ್ಲ.

ಚಿಕ್ಕವೀರ ರಾಜನ ಹೊಣೆಗೇಡಿತನ ಕೊಡಗಿನ ಜನಕ್ಕೂ ಬಂದರೆ-ಈ ಚೇತೋಹಾರಿ ಪ್ರದೇಶ ನಾಶವಾಗುತ್ತದೆ.

ಮೂಗು!



ಇತ್ತೀಚೆಗೆ ವಿದೇಶಗಳಲ್ಲಿ ಮನುಷ್ಯನ ಮೂಗಿನ ಬಗ್ಗೆ ವಿಶೇಷ ಅಧ್ಯಯನ ನಡೆಸಲಾಗಿದೆ.

ಸಂಪಿಗೆ ಮೂಗು, ಉದ್ದನೆಯ ಮೂಗು, ಮೋಹಕ ಮೊಂಡುಮೂಗು, ಚೇತೋಹಾರಿ ಮೂಗು, ಸಿಂಬಳ ಸೀಟುವುದಕ್ಕೂ ಆಗದಂತ ಮೂಗುಬೊಟ್ಟು ಇಟ್ಟ ಮೂಗು... ಅದೆಲ್ಲ ಇರಲಿ. ಮೂಗು ಮನುಷ್ಯ ತುಂಬ ನಿರ್ಲಕ್ಷಿಸಿರುವ ಇಂದ್ರಿಯ; ಅತ್ಯಂತ ಪ್ರಬಲ, ಉಪಯುಕ್ತ ಇಂದ್ರಿಯ. ಮನುಷ್ಯ ಕಣ್ಣಿಗೇ ಪ್ರಾಮುಖ್ಯ ಕೊಟ್ಟು ಇನ್ನಿತರ ಇಂದ್ರಿಯಗಳನ್ನು ಮರೆತಿದ್ದಾನೆ. ಮೂಗು, ಕಿವಿ, ನಾಲಗೆ ತುಂಬ ನಿಕಟವೆನ್ನುವುದನ್ನು ಮರೆತಿದ್ದಾನೆ. ಅತ್ಯಂತ ಸೂಕ್ಷ್ಮವಾದ, ಶಕ್ತಿಯುತವಾದ, ಇಡೀ ದೇಹಕ್ಕೆ ಚೈತನ್ಯ ಒದಗಿಸುವ ಮೂಗಿನ ಬಗ್ಗೆ ಇತ್ತೀಚೆಗೆ ನಡೆದ ಸಂಶೋಧನೆಗಳ ಪ್ರಕಾರ ಮೂಗು ಕಣ್ಣಿನ ನಾಲ್ಕರಷ್ಟು ಶಕ್ತಿಯುತವಾದದ್ದು, ತನ್ನದೇ ಆದ ಗ್ರಹಿಕೆಯ ಉಪಕರಣವುಳ್ಳ ಏಕಮಾತ್ರ ಇಂದ್ರಿಯ. ಮಿದುಳಿಗಿಂತ ಮುಂಚೆಯೇ ವಾಸನೆಯನ್ನು ಕಂಡುಹಿಡಿದು, ವಿಶ್ಲೇಷಿಸಿ ಮಿದುಳಿಗೆ ತಿಳಿಸುವ ಇಂದ್ರಿಯ.

ಸಂಶೋಧನಾಕಾರರಿಗಿಂತ ಹಿಂದೆಯೇ ನಮಗೆಲ್ಲ ಗೊತ್ತಿರುವುದು, ವಾಸನೆ ಪ್ರಾಣಿಯ ವೈಶಿಷ್ಟ್ಯಗಳಲ್ಲೊಂದು. ವಾತಾವರಣದ ವಾಸನೆ, ಹೂವಿನ ವಾಸನೆ, ಬೆಳ್ಳುಳ್ಳಿ, ಇಂಗಿನ ವಾಸನೆ, ವಿವಿಧ ವ್ಯಕ್ತಿಗಳ ವೈವಿಧ್ಯಮಯ ಬೆವರಿನ ವಾಸನೆ. ಒಮ್ಮೆ ಒಬ್ಬಳು ಸುಂದರಿಯನ್ನು ಕೇಳಿದರು, "ಎಚ್.ಜಿ. ವೆಲ್ಸ್ ತುಂಬ ದಪ್ಪ, ಕುರೂಪಿ ಮತ್ತು ತಲೆಹರಟೆ.... ಅವನನ್ನು ಹೆಂಗಸರೆಲ್ಲ ಯಾಕೆ ಇಷ್ಟಪಡುತ್ತೀರಿ?" ಆಕೆ ಯೋಚಿಸದೆ ಹೇಳಿದಳು, "ಅವನ ಚರ್ಮದ ವಾಸನೆ ಜೇನಿಗಿಂತ ಮಧುರ."

ವಾಸನೆ ಜೀವಕ್ಕೆ ಎಷ್ಟು ಹತ್ತಿರವೆಂದರೆ, ನಮ್ಮ ಚಿಕ್ಕಂದಿನ ಮನೆಯ, ಕೊಟ್ಟಿಗೆಯ, ಅಪ್ಪನ, ತಮ್ಮನ ವಾಸನೆ ಮರೆಯುವುದೇ ಇಲ್ಲ. ನಾಯಿಗಳು ನೋಡುವುದಕ್ಕಿಂತ ಮುಂಚೆ ವಾಸನೆಯಿಂದ ತಿಳಿಯುತ್ತವೆ. ಧರ್ಮರಾಯನ ಜೊತೆಗೆ ಕೊನೆಯಲ್ಲಿದ್ದದ್ದು ನಾಯಿ. ಆದ್ದರಿಂದಲೇ ನಾವು ಪೂರ್ವಜನ್ಮದ ವಾಸನೆಯ ಬಗ್ಗೆ ಮಾತಾಡಿದಾಗ ಅದು ಅಸಹಜವೆನ್ನಿಸುವುದಿಲ್ಲ.

ಅಂದರೆ, ಮೂಗನ್ನು ಕಂಡು ಮೂಗು ಮುರಿಯುವುದು ಸಾಧ್ಯವೆ? ■

ನಮ್ಮ ದೇಶಾಭಿಮಾನವನ್ನು ಪ್ರಶ್ನಿಸುವ ಹಕ್ಕು ನಿಮಗಿಲ್ಲ

ಹಿಂದೂ ಜಾಗರಣ ವೇದಿಕೆಯು 'ಹಿಂದೂ ಜಾಗೃತಿ ಅಭಿಯಾನ' ನಡೆಸುತ್ತಿದೆ. ಅವರು ಹಂಚಿದ ಕರಪತ್ರಗಳನ್ನು ನೋಡಿದರೆ ಇದು ಹಿಂಸೆಯನ್ನು ಜಾಗೃತ ಮಾಡುವ ಅಭಿಯಾನವೆಂದು ಅನಿಸುತ್ತದೆ. ಅವರ ಈ ಕರಪತ್ರಗಳನ್ನು ಓದಿದ ನನ್ನ ತಲೆಯಲ್ಲಿ ಕೆಲವು ಪ್ರಶ್ನೆ-ವಿಚಾರಗಳು ಎದ್ದಿವೆ. ಬಹುಶಃ ಇವುಗಳಿಗೆ ಹಿಂದೂ ಜಾಗರಣ ವೇದಿಕೆಯ ಸಹೋದರರು ಉತ್ತರಿಸುತ್ತಾರೆಂದು ನಂಬಿದ್ದೇನೆ.

"ಭಯೋತ್ಪಾದನೆ ಎಂಬುದು ಕೆಲವೇ ಕೆಲವು ಕಿಡಿಗೇಡಿಗಳು ನಡೆಸಿರುವ ಕಿಡಿಗೇಡಿ ಕೃತ್ಯವಲ್ಲ, ಭಾರತವನ್ನು 'ಇಸ್ಲಾಂ ರಾಜ್ಯ'ವನ್ನಾಗಿ ಪರಿವರ್ತಿಸುವುದಕ್ಕಾಗಿ ನಡೆದಿರುವ ಮತೀಯ ಯುದ್ಧ. ಇಂಡಿಯನ್ ಮುಜಾಹಿದ್ದೀನ್ ಹುಟ್ಟಿಗೆ ಭಟ್ಕಳದ ರಿಯಾಜನೇ ಕಾರಣ. ಭಟ್ಕಳ ದಿಂದಲೇ ದೇಶಕ್ಕೆ ಅಕ್ರಮ ಶಸ್ತ್ರಾಸ್ತ್ರಗಳ ಪೂರೈಕೆಯಾಗುತ್ತಿದೆ" ಎಂದು ಕರಪತ್ರದಲ್ಲಿ ಹೇಳಲಾಗಿದೆ. ಇಲ್ಲಿ ಒಂದು ವಿಚಾರ! ಭಯೋತ್ಪಾದನೆಗೂ 'ಇಸ್ಲಾಂ ಧರ್ಮ'ಕ್ಕೂ ಹೋಲಿಸುವುದು ಸರಿಯಲ್ಲ. ಶಂಕರಾಚಾರ್ಯರು ಲಕ್ಷಾಂತರ ಬೌದ್ಧರ ರುಂಡ ಕಡಿಸಿದಾಗ ಅದನ್ನು ಯಾರು ಹಿಂದೂ ಭಯೋತ್ಪಾದನೆಯೆಂದು ಕರೆಯಲಿಲ್ಲ. ಲಕ್ಷಾಂತರ ಯಹೂದಿಗಳ ಹತ್ಯೆಗೆ ಹಿಟ್ಲರನನ್ನು ಮಾತ್ರ ಕಾರಣ ಮಾಡಬೇಕೇ ವಿನಃ ಅವನ ಧರ್ಮವನ್ನಲ್ಲ. ಹುಬ್ಬಳ್ಳಿ ನ್ಯಾಯಾಲಯದಲ್ಲಿ ಬಾಂಬ್ ಸ್ಫೋಟ ಮಾಡಿದವರು ಚೆಡ್ಡಿ ಮುತಾಲಿಕನ ಶಿಷ್ಯರೇ ಹೊರತು ಇಡೀ ಹಿಂದೂ ಸಮುದಾಯವಲ್ಲ. 'ಇಂಡಿಯನ್ ಮುಜಾಹಿದ್ದೀನ್' ಸಂಘಟನೆಯ ಬಗ್ಗೆ ತನಿಖೆಯಾಗಲಿ, ಅದರಲ್ಲಿ ಇರುವಂಥ ಸದಸ್ಯರು ದೇಶದ್ರೋಹದ ಕೆಲಸ ಮಾಡಿದ್ದರೆ ಖಂಡಿತ ಅವರಿಗೆಲ್ಲ ಶಿಕ್ಷೆಯಾಗಬೇಕು. ಇದನ್ನು ಯಾರೂ ವಿರೋಧಿಸಲಾರರು. ಅದೇ ರೀತಿ ತಮಿಳುನಾಡಿನ ತೆಂಕಾಶಿಯ RSS ಕಛೇರಿಯಲ್ಲಿ ಬಾಂಬ್ ಇಟ್ಟ ಚೆಡ್ಡಿಗಳ ಬಗೆಗೂ ವಿಚಾರಣೆ ನಡೆದು ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು.

ಇದೇ ಕರಪತ್ರದಲ್ಲಿ ಮತಾಂತರದ ಬಗ್ಗೆಯೂ ವಿಷಬೀಜ ಬಿತ್ತಲಾಗಿದೆ. ಸಂವಿಧಾನದಲ್ಲಿ 1975 ರವರೆಗೆ 'ಸೆಕ್ಯುಲರಿಸಂ' ಪದ ಇರಲಿಲ್ಲವೆಂದು ವಾದಿಸುವ ಇವರು, ಸಂವಿಧಾನ ಜಾರಿಗೆ ಬಂದಾಗಿನಿಂದ ಈ ದೇಶದ ಪ್ರಜೆಗೆ ತನಗಿಷ್ಟ ಬಂದ ಧರ್ಮ ಸ್ವಿಕಾರ ಮಾಡುವ ಹಕ್ಕನ್ನು ಬಾಬಾಸಾಹೇಬ್ ಅಂಬೇಡ್ಕರ್ ನೀಡಿದ್ದರು ಎಂಬ ವಿಚಾರವನ್ನು ಮರೆಮಾಚಿದ್ದಾರೆ. ಶಿಕ್ಷಣ ಪಡೆದರು ಎಂಬ ಕಾರಣಕ್ಕೆ ದಲಿತರನ್ನು ಖೈರ್ಲಾಂಜಿ ಮತ್ತು ಕಂಬಾಲಪಳ್ಳಿಯಲ್ಲಿ ಜೀವಂತ ಸುಡುವಾಗ, ದಲಿತ ಮಂತ್ರಿಗಳಿಗೆ ದೇವಸ್ಥಾನಗಳಿಗೆ ಪ್ರವೇಶ ನೀಡದಾಗ ದಲಿತರು ತಮಗೆ ಸಮಾನ ಅವಕಾಶ ನೀಡುವ ಧರ್ಮಕ್ಕೆ ಸೇರುವುದು ತಪ್ಪೆ?

ಭಾರತಮಾತೆಯನ್ನು ಅವಮಾನಿಸಿದ ಎಂ.ಎಫ್. ಹುಸೇನ್‌ಗೆ ಭಾರತರತ್ನ ನೀಡಬಾರದು ಎಂಬ ವಿಚಾರ ಹಾಸ್ಯಾಸ್ಪದ. ಮೊದಲಿಗೆ ನಾನೊಬ್ಬ ಮುಸ್ಲಿಂನಾಗಿ ಹೇಳಬೇಕೆಂದರೆ ಹುಸೇನ್ ಒಬ್ಬ ಮುಸಲ್ಮಾನನೆಂದು ಕರೆದುಕೊಳ್ಳುವ ಹಕ್ಕು ಅವನಿಗಿಲ್ಲ, ಯಾಕೆಂದರೆ ಇಸ್ಲಾಂ ಧರ್ಮ ಬೇರೆ ಧರ್ಮವನ್ನು ಟೀಕಿಸುವುದನ್ನು, ಅಶ್ಲೀಲ ಚಿತ್ರಕಲೆಯನ್ನು ನಿಷೇಧಿಸಿದೆ. ಆದರೆ ಬ್ರಿಟಿಷರಿಗೆ ಪತ್ರ ಬರೆದು ತನಗೆ ಕ್ಷಮೆ ನೀಡಬೇಕೆಂದು ಕೋರಿದ್ದ ವಾಜಪೇಯಿಗೆ ಭಾರತರತ್ನ ನೀಡಬೇಕೆನ್ನುವುದಾದರೆ ಎಂ.ಎಫ್. ಹುಸೇನ್‌ಗೆ ಏಕೆ ಬೇಡ?

ಬಾಂಗ್ಲಾ ದೇಶಿಯರು ಈ ದೇಶಕ್ಕೆ ನುಸುಳಿದ್ದಾರೆ ಎಂದರೆ ಅದಕ್ಕೆ ಕಾರಣ ಇಲ್ಲಿಯ ಮುಸ್ಲಿಂ, ಬುದ್ಧಿಜೀವಿ ಮತ್ತು ಸೆಕ್ಯುಲರ್ ವಾದಿಗಳಲ್ಲ, ಈ ದೇಶದ ರಕ್ಷಣಾ ವ್ಯವಸ್ಥೆ ಕಾರಣ. ಸಮಾನ ನಾಗರಿಕ ಕಾನೂನು ಜಾರಿಗೆ ಆಗ್ರಹಿಸುವ ಹಿಂದೂ ಜಾಗರಣ ವೇದಿಕೆ ಮುಸ್ಲಿಂರನ್ನು ಗುರಿಯಾಗಿಸಿರುವುದು ತಪ್ಪು, ಸಮಾನ ನಾಗರಿಕ ಕಾನೂನನ್ನು ಸ್ವತಃ ಗೋಳ್ವಾಲ್ಕರ್ ವಿರೋಧಿಸಿದ್ದರು (ಆರ್ಗನೈಜರ್ 26.8.1972). ಏಕೆಂದರೆ ಇದು ಹಿಂದೂಗಳಲ್ಲಿ ಮೊದಲು ಸಾಧ್ಯವಿಲ್ಲ! ಸಾವಿರಾರು ಪಂಗಡಗಳು, ಸಾವಿರಾರು ಸಂಸ್ಕೃತಿಯ ರಿವಾಜು, ಮದುವೆಗಳು ವ್ಯತ್ಯಾಸ, ದೇವನಂಬಿಕೆಗಳ ವಿರೋಧಾಭಾಸವಿರುವಾಗ ಸಮಾನ ನಾಗರಿಕ ಕಾನೂನು ಕನಸಿನ ಮಾತು ಹಾಗು ಸಂವಿಧಾನ ವಿರೋಧಿಯಾಗಿದೆ.

ಮುಸ್ಲಿಮರಲ್ಲಿ ಬಹುಪತ್ನಿತ್ವ ಇದೆ. ಅದು ಹಿಂದೂಗಳಲ್ಲಿಯೂ ಇದೆ. ಕಮಿಟಿ ಆಫ್ ಸ್ಟೇಟಸ್ ಆಫ್ ವುಮೆನ್ ಇನ್ ಇಸ್ಲಾಂ 1975 ರಲ್ಲಿ ಸಲ್ಲಿಸಿದ ವರದಿಯಲ್ಲಿ (ಪುಟಸಂಖ್ಯೆ 66 ಮತ್ತು 67) 1951ರಿಂದ 1961 ರ ಮಧ್ಯೆ ಬಹುಪತ್ನಿತ್ವ ಹಿಂದೂಗಳಲ್ಲಿ 5.06% ಮುಸ್ಲಿಮ ರಲ್ಲಿ 4.31% ಇದೆಯೆಂದು ಹೇಳಿದೆ. ಅದಲ್ಲದೆ ಹಿಂದೂಗಳಿಗೆ ಯಾವ ಧಾರ್ಮಿಕ ಗ್ರಂಥವು ಬಹುಪತ್ನಿತ್ವ ನಿಷೇಧಿಸಿಲ್ಲ, ಬದಲಾಗಿ 1954 ರ ಹಿಂದೂ ಮ್ಯಾರೇಜ್ ಆಕ್ಟ್ ಎಂಬ ಶಾಸನ ಈ ಕೆಲಸ ಮಾಡಿದೆ.

ಕೊನೆಯ ವಿಚಾರ: ನಾವು ಭಾರತೀಯ ಮುಸ್ಲಿಮರು, ನಾವು ದೇಶಭಕ್ತರು ಎನ್ನುವುದಕ್ಕಿಂತ ದೇಶ ರಕ್ಷಕರಾಗಿದ್ದೇವೆ. ಈ ದೇಶದ ಸ್ವಾತಂತ್ರ್ಯಕ್ಕಾಗಿ ನಾವು ಪ್ರಾಣ ನೀಡಿದ್ದೇವೆ. ನಾವು ಈ ದೇಶದ ಮೂಲನಿವಾಸಿಗಳು. ನಮ್ಮ ದೇಶಾಭಿಮಾನದ ಬಗ್ಗೆ ಪ್ರಶ್ನೆ ಮಾಡುವ ಹಕ್ಕು ಯಾರಿಗೂ ಇಲ್ಲ, ನಮ್ಮ ಮೇಲೆ ಗೂಬೆ ಕೂರಿಸುವವರು ಮೊದಲು ತಾವು ಸ್ತ್ರೀಯರೊಂದಿಗೆ ಮತ್ತು ಅಸ್ಪೃಶ್ಯರೊಂದಿಗೆ ಮಾನವೀಯತೆ ದೃಷ್ಟಿಯಿಂದ ನಡೆದುಕೊಂಡು ಗಾಂಧೀಜಿಯನ್ನು ಕೊಂದಿದ್ದಕ್ಕೆ ಪಾಪ ಪರಿಹಾರ ಮಾಡಿಕೊಳ್ಳಲಿ.

-ಅಬ್ದುಲರಂಝಾರ ದಿ. ಟಿಪಾಲ, ಕೆರೂರ

ಭ್ರಷ್ಟಾಚಾರವೂ ಭಯೋತ್ಪಾದನೆಯೇ ಅಲ್ಲವೇ?

ರಾ.ಪೋ. ಅವರ 'ಭಯೋತ್ಪಾದನೆ ಅಳಿಸಿ ದೇಶ ಉಳಿಸಿ' ಲೇಖನ ಕುರಿತು.

ಉಗ್ರಗಾಮಿಗಳ ಭಯೋತ್ಪಾದನೆಯಿಂದ ದೇಶವೇ ತತ್ತರ ನಡುಗುತ್ತಿದೆ. ಭಯೋತ್ಪಾದನೆ ಎಂದರೇನು? ಭಯವನ್ನು ಉತ್ಪಾದಿಸುವವರು ಯಾರು? ಭಯೋತ್ಪಾದಕರಿಂದ ದೇಶ ರಕ್ಷಣೆ ಯಾರ ಹೊಣೆ? ಈ ದೇಶದ ಪ್ರತಿಯೊಬ್ಬ ಪ್ರಜೆಯ ಹೊಣೆ ಇದು.

ಹೊರಗಿನ ಭಯೋತ್ಪಾದಕರಿಂದ ಮುಂಬೈ ಮತ್ತು ಜನತೆಗಾದ ನಷ್ಟ ಹಲವಾರು ಕೋಟಿಗಳು. ಭಯೋತ್ಪಾದಕರಿಂದ ಸಾರ್ವಜನಿಕ ಹಾಗೂ ಖಾಸಗಿ ಆಸ್ತಿಗಳಿಗೆ ಸಾಕಷ್ಟು ನಷ್ಟ ಮತ್ತು ನಾಗರಿಕರ ಪ್ರಾಣಹಾನಿ ಆಗಿದೆ. ಖಂಡಿತ ಇವರನ್ನು ಪತ್ತೆಹಚ್ಚಿ ಕೊನೆಗಾಣಿಸಬೇಕು ಮತ್ತು ಇವರ ಬಗ್ಗೆ ಗುಮಾನಿ-ಅನುಮಾನ ಬಂದರೆ ಪೊಲೀಸರಿಗೆ ತಿಳಿಸಬೇಕು. ಇದೆಲ್ಲ ಓ.ಕೆ.

ಆದರೆ ದೇಶದ ಒಳಗೇ ಇರುವ ಭಯೋತ್ಪಾದಕರ ವಿರುದ್ಧದ ಹೋರಾಟವಿಲ್ಲವೆ? ಭ್ರಷ್ಟಾಚಾರದ ವಿರುದ್ಧ ಹೋರಾಡುವುದು ಬೇಡವೆ? ಸರ್ಕಾರಿ ಕಚೇರಿಗಳಲ್ಲಿ, ಆಸ್ಪತ್ರೆಗಳಲ್ಲಿ ಲಂಚದ ಹಣವಿಲ್ಲದೆ ಯಾವುದೇ ಕೆಲಸವಾಗುವುದಿಲ್ಲ, ನಾವು ಲಂಚ ಕೊಟ್ಟು ಕೆಲಸ ಆಗುವವರೆಗೂ ಭಯದಿಂದ ಕಾಯುತ್ತಿರಬೇಕು. ಪೊಲೀಸ್ ಠಾಣೆಗೆ ಹೋಗಬೇಕಾದರೂ ಭಯದಿಂದ ಹೋಗಬೇಕಾದ ವಾತಾವರಣವಿದೆ. ಗೂಂಡಾಗಳನ್ನು ಕಟ್ಟಿಕೊಂಡು ವರ್ತಕರಿಂದ, ಜನಸಾಮಾನ್ಯರಿಂದ ರೋಲ್‌ಕಾಲ್ ಮಾಡುವವರು ಭಯೋತ್ಪಾದಕರಲ್ಲವೇ? ಕಳಪೆ ಕಾಮಗಾರಿಗಳಿಂದ ಸೇತುವೆ ಕುಸಿತ, ಕಟ್ಟಡಗಳ ಕುಸಿತದಿಂದ ಹಲವಾರು ಅಮಾಯಕ ಬಡ ಕಾರ್ಮಿಕರ ಪ್ರಾಣ ತೆಗೆಯುವ ಇವರು ಭಯೋತ್ಪಾದಕರಲ್ಲವೆ? ಸತ್ಯಂ ಎಂಬ ಕಂಪನಿಯ ಮಾಲೀಕನಿಂದ ಸಹಸ್ರಾರು ಕೋಟಿ ರೂ.ಗಳಿಗೆ ಜನಕ್ಕೆ ವಂಚನೆ, ಸರ್ಕಾರಕ್ಕೆ ವಂಚನೆ, ನೌಕರರ ಕೆಲಸಕ್ಕೆ ಪಂಗನಾಮ, ಹಣ, ಕೆಲಸ ಕಳೆದುಕೊಂಡವರ ಆತ್ಮಹತ್ಯೆ.... ಇದೆಲ್ಲ ಒಂದು ರೀತಿಯಲ್ಲಿ ಭಯೋತ್ಪಾದನೆಯಲ್ಲವೆ?

ಈಗ ಹೇಳಿ ನಾವು ಯಾವ ಯಾವ ರೀತಿ ಭಯೋತ್ಪಾದನೆಯನ್ನು ಅಳಿಸಿಹಾಕಬೇಕಾಗಿದೆ?

-ಎಂ. ಸದಾಶಿವ, ತುಮಕೂರು

ಮೂರು ವರ್ಷಗಳ ಹಿಂದೆ ಕುದುರೆಮುಖದಲ್ಲಿ ನೆಲದ ಒಡಲು ಬಗೆದು ಕಬ್ಬಿಣದ ಅದಿರು ತೆಗೆಯುತ್ತಿದ್ದ ಕಂಪನಿ ಅಲ್ಲಿನ ರೈತರಿಗೆ ಸೇರಿದ್ದ ಅಪಾರ ಪ್ರಮಾಣದ ಆಸ್ತಿಯನ್ನು ಇಂಚಿಂಚೂ ಬಿಡದೆ ಕಬಳಿಸುವ ಹಂತಕ್ಕೆ ತಲುಪಿತ್ತು. ಆಗ ರೈತರು, ಜನಪರ ಹೋರಾಟಗಾರರು, ಪರಿಸರವಾದಿಗಳು ನಿರಂತರ ಪ್ರತಿರೋಧ ವ್ಯಕ್ತಪಡಿಸುತ್ತ ಬಂದಿದ್ದರಿಂದ ಕಂಪನಿಯವರು ಗಣಿಗಾರಿಕೆಯನ್ನೇ ಸ್ಥಗಿತಗೊಳಿಸಬೇಕಾಯಿತು.

ಆದರೀಗ ಮತ್ತೆ ಅದೇ ಸ್ಥಳದಲ್ಲಿ ಗಣಿಗಾರಿಕೆಯನ್ನು ಮುಂದುವರೆಸಲಿರುವ ಎಲ್ಲಾ ಲಕ್ಷಣಗಳೂ ಕಂಡುಬರು ತ್ತಿವೆ. ಆಸ್ಟ್ರೇಲಿಯನ್ ಮೂಲದ ಕಂಪನಿಗಳು ಕುದುರೆ ಮುಖ ಕಬ್ಬಿಣ ಅದಿರು ಕಂಪನಿಯೊಂದಿಗೆ ಮಾತಾಡಿ ಕೊಂಡಿವೆ. ಪರಿಸರಕ್ಕೆ ಹಾನಿಯಾಗುವ ರೀತಿಯಲ್ಲಿ ಗಣಿಗಾರಿಕೆ ನಡೆಸಲಾಗುವುದೆಂದು ಕುದುರೆಮುಖ ಕಬ್ಬಿಣ ಅದಿರು ಕಂಪನಿ ನಿಗಮ ಹೇಳಿದೆ.

ಪರಿಸರಕ್ಕೆ ಹಾನಿಯಾಗದ ರೀತಿಯಲ್ಲಿ ಗಣಿಗಾರಿಕೆ ನಡೆಸುವುದು ಎಂದರೇನು? ಏನೂ ಅಲ್ಲ. ಈಗಾಗಲೇ ಜನರ ಪ್ರತಿರೋಧವೆದ್ದು ಮುಚ್ಚಲ್ಪಟ್ಟಿರುವ ಕಂಪನಿಯ ಬಾಗಿಲನ್ನು ಮತ್ತೆ ತೆರೆಯಬೇಕು.

ಹೋರಾಟಗಾರರಿಂದ ತಪ್ಪಿಸಿಕೊಳ್ಳಲು ಯಾವ್ಯಾವ ಮಾರ್ಗಗಳಿವೆ ಎಂಬುದನ್ನು ಕಂಡುಕೊಳ್ಳಲು ತಂತ್ರಗಳನ್ನು ಹೆಣೆಯುತ್ತಿದ್ದಾರೆಯೇ ಹೊರತು ತಂತ್ರಜ್ಞಾನವನ್ನಲ್ಲ. ವಾಸ್ತವವಾಗಿ ಪರಿಸರಕ್ಕೆ ಹಾನಿಯಾಗಬಾರದು ಎಂಬ ಕಾಳಜಿಯಿದ್ದಿದ್ದರೆ ಕಂಪನಿಗಳು ಗಣಿಗಾರಿಕೆಯನ್ನು ಮುಂದುವರೆ ಸುವ ಪ್ರಯತ್ನವನ್ನೇ ಕೈಬಿಟ್ಟಿರುತ್ತಿದ್ದವು.

-ಕಿರುಗುಂದ ರಫೀಕ್

ಜಿ.ಪಿ. ಬಸವರಾಜುರವರು ಬರೆದ ವಿಶೇಷ ಲೇಖನ 'ಸಾಹಿತ್ಯ ಸಮ್ಮೇಳನ, ಕುಸಿಯುತ್ತಿರುವ ತಾತ್ವಿಕ ನೆಲೆಗಳು' ಸಂದರ್ಭಕ್ಕೆ ಪ್ರಸ್ತುತವಾದದ್ದು, ಮೌಲಿಕವಾದದ್ದಾಗಿದೆ. ಈ ರೀತಿಯ ಲೇಖನಗಳು ಸಾಹಿತಿಗಳನ್ನು, ಲೇಖಕರುಗಳನ್ನು ಎಚ್ಚರಿಸುತ್ತವೆ. ಹಾಗೆಯೇ ಬಂಡಾಯದ ಪರಂಪರೆಯನ್ನು ಮುಂದುವರೆಸಿ ಹಾದಿತಪ್ಪುವ ಸಾಹಿತ್ಯ ಪರಿಷತ್ತಿನ ನಾಯಕಮಣಿಗಳಿಗೆ ಛಡಿ ಏಟು ನೀಡುತ್ತವೆ.

ನಿಜವಾದ ಸಾಹಿತ್ಯ ಸಮ್ಮೇಳನಗಳು "ಶ್ರೀ", "ಶ್ರೀ"-"ಶ್ರೀ"ಗಳಿಂದ ಮತ್ತು ರಾಜಕೀಯ ನಾಯಕರುಗಳಿಂದ ಮುಕ್ತವಾಗಿರಲಿ. ಜನಸಾಮಾನ್ಯರ ಸಮಸ್ಯೆಗಳು, ಸಾಹಿತ್ಯ ವಿಚಾರಗಳು, ರಾಜ್ಯದ ದೇಶದ ಭವಿಷ್ಯಕ್ಕಾಗಿ ಸಾಹಿತ್ಯ ಸಮ್ಮೇಳನಗಳು ಮಿಡಿಯಬೇಕೆಂಬ ಲೇಖನದ ಆಶಯಕ್ಕೆ ನನ್ನ ಸಹಮತ, ಬೆಂಬಲ ಇದೆ.

- ಕುಮಾರ್ ಸಮತಳ, ಬೆಂಗಳೂರು

ಜಿ.ಪಿ. ಬಸವರಾಜು ಅವರ ವಿಶೇಷ ಲೇಖನ (ಫೆಬ್ರವರಿ 1, 2008): ಸಮ್ಮೇಳನದ ಆರಂಭ ಮತ್ತು ಕೊನೆಯಲ್ಲಿ ಸ್ವಾಮೀಜಿಗಳ 'ದಿವ್ಯ ಸಾನ್ನಿಧ್ಯ'ದಿಂದ ಕಂಗೊಳಿಸುವಂತೆ ಕಾರ್ಯಕರ್ತರು ಬಹಳ ಜಾಗರೂಕತೆಯಿಂದ ನೋಡಿಕೊಂಡಿದ್ದಾರೆ. ಲೇಖಕರು ಅಂದಂತೆ ಈ 'ದಿವ್ಯ ಸಾನ್ನಿಧ್ಯ' ಮತ್ತು 'ಶ್ರೀ ಶ್ರೀ'ಗಳ ಅರ್ಥವನ್ನು ಸಮ್ಮೇಳನದ ಸಂಘಟಕರು ಜನಗಳಿಗೆ ಸ್ಪಷ್ಟಪಡಿಸಬೇಕಾಗಿದೆ. ಈಗೀಗ ಸಮ್ಮೇಳನಗಳಲ್ಲಿ ರಾಜಕಾರಣಿಗಳ ಮತ್ತು ಸ್ವಾಮೀಜಿಗಳ ಮೂಗು ತೂರಿಸುವಿಕೆ ಮತ್ತು ಅವರನ್ನು ಔಚಿತ್ಯವಿಲ್ಲದೆ ಆಹ್ವಾನಿಸುವ ಚಾಳಿ ತುಂಬ ಹೆಚ್ಚಾಗಿದೆ. ಇದು ಖಂಡನೀಯ.

-ಕೇಶವ ಪೆರಾಜೆ, ಮಡಿಕೇರಿ



ರಾಮನಿಗೆ ತಕ್ಕ ರಾಮಸೇನೆ

ರಾಮಸೇನೆ ಅಂದರೆ ಕೋತಿಗಳು ಎಂಬ ಅರ್ಥವಿದೆ. ರಾಮಾಯಣ ಕತೆಯ ಆಧಾರದಲ್ಲೇ ಹುಟ್ಟಿಕೊಂಡ 'ಅಂಕೆಯಿಲ್ಲದ ಮಂಗ ಲಂಕೆ ಸುಟ್ಟಿತು' ಎಂಬ ಗಾದೆಯಂತೆ ಮೊನ್ನಿನ ಪಬ್ ದಾಳಿ ನೆಪದಲ್ಲಿ ಈ ಕೋತಿಗಳು ನಡೆಸಿದ ಮಹಿಳೆಯರ ಮೇಲಿನ ಪೈಶಾಚಿಕ ಕೃತ್ಯ ನಾಗರಿಕ ಸಮಾಜವನ್ನೇ ತಲೆತಗ್ಗಿಸುವಂತೆ ಮಾಡಿದೆ.

ಒಂದು ಕಾಲವಿತ್ತು, ಮಂಗಳೂರು ಜಿಲ್ಲೆಯವರೆಂದರೆ ತಾವಾಯ್ತು ತಮ್ಮ ಕೆಲಸವಾಯ್ತು ವಿನಃ ಆತ ಏನ್ಮಾಡಿದ? ಈತ ಏನ್ಮಾಡಿದ? ಅಂತ ತಲೆ ಕೆಡಿಸಿಕೊಳ್ಳದೇ ತಮ್ಮಷ್ಟಕ್ಕೇ ತಾವಿರುತ್ತಿದ್ದರು. ಆದರೆ ಪರಿಸ್ಥಿತಿ ಈಗ ಬದಲಾಗಿದೆ. ಇಡೀ ದೇಶವೇ ಈಗ ಮಂಗಳೂರಿಗರೆಂದರೆ ತಾಲಿಬಾನ್ ಸಂಸ್ಕೃತಿಯನ್ನು ಮೈಗೂಡಿಸಿಕೊಂಡ ಅನಾಗರಿಕರು ವಾಸಿಸುತ್ತಿರುವ ಸ್ಥಳ ಎಂಬ ಕುಖ್ಯಾತಿಯನ್ನು ಪಡೆದುಕೊಳ್ಳತೊಡಗಿದೆ. ಬಿಜೆಪಿ ಸರ್ಕಾರ ಅಧಿಕಾರಕ್ಕೇರಿದ ಬಳಿಕ ನಡೆದ ಚರ್ಚ್ ಮೇಲಿನ ದಾಳಿಯಿಂದ ಹಿಡಿದು ಇವತ್ತಿನ ಮಹಿಳೆಯರ ಮೈಮೇಲೆ ಕೈಹಾಕಿ ನಡೆಸಿದ ದೌರ್ಜನ್ಯದವರೆಗಿನ ಘಟನೆಗಳೆಲ್ಲ ಇದಕ್ಕೆ ಪೂರಕವಾಗಿವೆ. ಚೋದ್ಯದ ಸಂಗತಿಯೆಂದರೆ, ಈ ಎಲ್ಲಾ ಅಪಖ್ಯಾತಿಗಳಿಗೆ ಇದೇ ಜಿಲ್ಲೆಯ (ಅವಿಭಜಿತ) ಗೃಹಮಂತ್ರಿಯೇ ಸಾಕ್ಷಿಯಾಗಿ ನಿಲ್ಲುತ್ತಿರುವುದು.

ಪದ್ಮಪ್ರಿಯ ಎಂಬ ಅಮಾಯಕ ಹೆಣ್ಣಿನ ಸಾವಿನ ಪ್ರತ್ಯಕ್ಷದರ್ಶಿಯಾದ ತನ್ನ ಪಕ್ಷದ ಸುನಿಲ್ ಕುಮಾರ್ ಹಾಗು ಶಾಸಕ ರಘುಪತಿ ಭಟ್ಟರ ತಂಟೆಗೆ ಹೋಗದೆ ಇಡೀ ಕೇಸನ್ನು ಅಡ್ಡದಾರಿಯಲ್ಲಿ ಕೊಂಡೊಯ್ದು ಗೃಹಮಂತ್ರಿ ವಿ.ಎಸ್. ಆಚಾರ್ಯ ಅವರು ತಮ್ಮ ಆಪ್ತಮಿತ್ರರನ್ನು ರಕ್ಷಿಸುವಲ್ಲಿ ನಾಟಕವಾಡಿ ಯಶಸ್ವಿಯೂ ಆದರು. ನಂತರ ಬಂದ ಚರ್ಚ್ ದಾಳಿ ಪ್ರಕರಣ, ಪತ್ರಕರ್ತ ಬಿವಿಸಿ ಬಂಧನ ಪ್ರಕರಣ ಹಾಗು ಇವತ್ತಿನ ರಾಮಸೇನೆಯ ಘನಂದಾರಿ ಕೆಲಸಗಳೆಲ್ಲ ಇವರ 'ದಕ್ಷತೆ'ಗೆ ಸಾಕ್ಷಿಯಾಗಿದೆ.

ಪತ್ರಕರ್ತ ಬಿವಿಸಿಯನ್ನು ಗುರುಪುರದ ಗಡವನೆಂದೇ ಕುಖ್ಯಾತನಾದ ಸ್ವಾಮಿಯ ಸೂಚನೆಯಂತೆ ಬಂಧಿಸಲ್ಪಟ್ಟರೂ ಆತನ ಹೆಸರು ಎಲ್ಲೂ ಬಾರದಂತೆ ಯಾವುದೋ ಅರ್ಥಹೀನ ಕೇಸ್‌ನ ನೆಪದಲ್ಲಿ ಪ್ಲಾನ್ ಹೆಣೆದು ಕೈಕೋಳ ತೊಡಿಸಿ ಬಂಧಿಸಿ ನಂತರ ಅದನ್ನು ಸಮರ್ಥಿಸಿಕೊಂಡರು. ಚರ್ಚ್ ಮೇಲಿನ ದಾಳಿ ನಂತರ "ಯಾರೂ ಸತ್ತಿಲ್ಲವಲ್ಲಾ" ಎಂಬ ಬೇಜವಾಬ್ದಾರಿ ಹೇಳಿಕೆ ನೀಡಿದರು. ಇವತ್ತಿನ ಮಹಿಳೆಯರ ಮೇಲಿನ ದಾಳಿಯ ಕುರಿತು-ಮಾಧ್ಯಮಗಳ ಕ್ಯಾಮರಾಗಳು ಕಿಡಿಗೇಡಿಗಳ ಮುಖಗಳನ್ನು ಸ್ಪಷ್ಟವಾಗಿ ಅವರ ಕಾರ್ಯಗಳ ಸಮೇತ ಸೆರೆಹಿಡಿದಿದ್ದರೂ ಅವರನ್ನು ಬಂಧಿಸದೆ ಮಾಧ್ಯಮಗಳ ಮೇಲೆ ನೋಟೀಸ್ ಜಾರಿ ಮಾಡಿದರು.

ಚರ್ಚ್ ದಾಳಿ ಪ್ರಕರಣದ ಬಳಿಕ ನಾಡಿನಾದ್ಯಂತ ವ್ಯಕ್ತವಾದ ಖಂಡನೆಗೆ ಪ್ರತಿಯಾಗಿ ಅದರ ಹೊಣೆಗಾರನಾದ ಭಜರಂಗಿ ಮಹೇಂದ್ರಕುಮಾರ್‌ನನ್ನು ಸರ್ಕಾರ ಬಂಧಿಸುವ ನಾಟಕ (ಆ ಬಂಧನ ಕೇವಲ ಹೆಸರಿಗಷ್ಟೇ ಇತ್ತು) ನಡೆಸಿ ನಂತರ ಮಾಮೂಲಿನಂತೆ ಈ ಸಂಗತಿ ಜನಮಾನಸದಿಂದ ಮರೆಯಾಗುವ ಸೂಚನೆ ಬಂದಾಗ ಆತನನ್ನು ಬಿಡುಗಡೆಗೊಳಿಸಿತ್ತು. ಇವತ್ತಿನ ರಾಮಸೇನೆಯ ಕೃತ್ಯದ ಹಣೆಬರಹದಲ್ಲೂ ಕೂಡ ಇದಕ್ಕಿಂತ ಖಂಡಿತ ಭಿನ್ನವಾಗಿರದೆಂದು ಈಗಲೇ ಊಹಿಸಬಹುದು.

ಘಟನೆಗೆ ಸಂಬಂಧಿಸಿ ಟೀವಿ 9 ನ ಕಾರ್ಯಕ್ರಮದಲ್ಲಿ ಭವಾನಿ ಎಂಬ ಹೆಂಗಸಿನ ಹೆಸರು ಹೊತ್ತ ರಾಮಸೇನೆಯವನೊಬ್ಬ ತಾನು ಹೆಣ್ಣಿಗೆ ಗೌರವ ತರುವ ಸಂಸ್ಕೃತಿಯನ್ನು ಕಾಪಾಡುವಂತ ಗುತ್ತಿಗೆಯನ್ನು ಹಿಡಿದುಕೊಂಡವನೆಂಬಂತೆ ತನ್ನ ಅಪದ್ಧ ವಾದವನ್ನು ತನ್ನದೇ ದಾಟಿಯಲ್ಲಿ (ಚರ್ಚೆಗೆ ಕುಳಿತ ಮಹಿಳೆಯರ ಮಾತಿನ ನಡುವೆ ಬಾಯಿ ಹಾಕಿ ಅವರನ್ನ ಮಾತಾಡಲು ಬಿಡದೇ "ಮಹಿಳೆಯರು ನಿರ್ಧಾರ ತೆಗೆದುಕೊಳ್ಳುವ ಸ್ವತಂತ್ರವನ್ನು ಹೊಂದಿದ್ದಾರೆ ಅವರ ಸ್ವಾತಂತ್ರ್ಯವನ್ನು ಪ್ರಶ್ನಿಸುವ ಹಕ್ಕು ನಿಮಗೆ ಕೊಟ್ಟವರು ಯಾರು?" ಎಂಬ ಇವರ ಪ್ರಶ್ನೆಯನ್ನೇ ತಿರುಚಿ-ನೀವೆಲ್ಲ ಮಹಿಳೆಯರು ಪಬ್‌ಗೆ ಹೋಗಲೇಬೇಕು ಎಂಬ ವಾದವನ್ನು ಮಂಡಿಸುವವರು ಎಂದು ಚರ್ಚೆಯ ಹಳಿಯನ್ನೇ ತಪ್ಪಿಸಿದ ಈತ) ಸಮರ್ಥಿಸುತ್ತಿದ್ದ.

ಆದರೆ ಈತನ ಬಿಜೆಪಿ (ಮುತಾಲಿಕ್‌ನಂಥವರು ಬಿಜೆಪಿಗೂ ನಮಗೂ ಸಂಬಂಧವಿಲ್ಲ ಎಂದೂ ಹೇಳುತ್ತಾರೆ. ಜೊತೆಗೆ ಇದು ಸರ್ಕಾರದ ಮೇಲೆ ನಡೆಸಲಾಗುತ್ತಿರುವ ವ್ಯವಸ್ಥಿತ ಪಿತೂರಿ ಎಂದೂ ಹೇಳಿಕೊಳ್ಳುತ್ತಾರೆ)ಯ ಮಹಿಳಾರತ್ನ ಪ್ರಮೀಳಾ ನೇಸರ್ಗಿ ಮಹಿಳಾ ಆಯೋಗದ ಅಧ್ಯಕ್ಷೆಯಾಗಿದ್ದಾಗ (ಈಗ ಅದು ಅನಾಥ) ದಾಖಲಾದ ನೂರಕ್ಕೂ ಅಧಿಕ ಕೇಸುಗಳ ಮುಕ್ಕಾಲು ಪಾಲು ದಾಖಲೆಗಳೇ ಈಗ ಕಣ್ಮರೆಯಾಗಿದೆಯಂತೆ (ರೇಣುಕಾಚಾರ್ಯನ ಕೇಸನ್ನೂ ಸೇರಿ) ಇದೇ ಮಹಿಳೆಯರ ಮೇಲಿರುವ ಸರ್ಕಾರದ ಕಾಳಜಿಯನ್ನು ತೋರಿಸುತ್ತದೆ. ಸಂಬಂಧಪಟ್ಟ ಅನೇಕರು ತಮ್ಮ ಮೂಲ ದಾಖಲೆಗಳನ್ನೇ ಕಳೆದುಕೊಂಡು ಈಗ ಪರಿತಪಿಸುತ್ತಿದ್ದಾರೆ. ಮಹಿಳೆಯರು ಪಬ್‌ಗಳಿಗೆ ಹೋಗಿ ನೋಡಿ ಮನಕರಗಿ ಹೋರಾಡುತ್ತಿರುವ ರಾಮಸೇನೆ ಇದ್ದ ಮೇಲೆ ಮಹಿಳಾ ಆಯೋಗಗಳೇಕೆ? ಬಿಡಿ.

ಯಾವನೋ ತಲೆ ಕೆಟ್ಟವನು ಹೇಳಿದ ಅಪವಾದಕ್ಕಾಗಿ ರಾಜನಾದ ತನ್ನನ್ನು ತಾನೇ ಶಿಕ್ಷಿಸಿಕೊಳ್ಳುವುದರ ಬದಲು ತನ್ನ ಮಕ್ಕಳನ್ನು ಬಸಿರಲ್ಲಿ ಹೊತ್ತಿರುವ ಹೆಂಡತಿ ಎಂಬ ಹೆಣ್ಣನ್ನು ಕೊಲ್ಲಲು ಕಾಡಿಗಟ್ಟಿದ; ಪ್ರೀತಿಯನ್ನು ಯಾಚಿಸಿ ಬಂದವಳೆಂಬ ಕಾರಣಕ್ಕೆ ಆ ಹೆಣ್ಣಿನ ಸೌಂದರ್ಯವನ್ನೇ ಕುರೂಪಗೊಳಿಸಲು ಆಕೆಯ ಕಿವಿ, ಮೂಗು, ಸ್ತನಗಳನ್ನು ಕೊಯ್ಸಿದ ಘನಂದಾರಿ ರಾಮನ ಹೆಸರಲ್ಲಿ ಕಾರ್ಯಾಚರಿಸುತ್ತಿರುವ ಈ ರಾಮಸೇನೆ ರಾಮನಿಗೊಪ್ಪುವಂತ ಕೆಲಸವನ್ನೇ ಮಾಡಿದೆ ಬಿಡಿ. ನಮ್ಮ ಗಾಂಧಿಯನ್ನ ಕ್ಷಮೆಕೋರಿ ಹೇಳೋದಾದ್ರೆ 'ರಾಮರಾಜ್ಯ' ಎಂದರೆ ಬಹುಶಃ ಇದೇ ಇರಬೇಕು ಅಲ್ವಾ?

-ಶಶಿ ಪುತ್ತೂರು, ದಕ್ಷಿಣ ಕನ್ನಡ




ಇತ್ತೀಚೆಗೆ 'ಉಲ್ಲಾಸ' ಮತ್ತು 'ಉಲ್ಲಾಸ ಉತ್ಸಾಹ' ಎಂಬ ಎರಡು ಚಿತ್ರಗಳು ಒಂದೇ ಸಮಯದಲ್ಲಿ ಪ್ರಾರಂಭವಾಗಿದ್ದರಿಂದ ಎಲ್ಲರಿಗೂ ಗೊಂದಲವುಂಟಾಗುತ್ತಿತ್ತು. ಆದರೆ ಇನ್ನು ಮುಂದೆ ಅಂತಹ ಗೊಂದಲಕ್ಕೆ ಅವಕಾಶವೇ ಇಲ್ಲ. ಏಕೆಂದರೆ 'ಉಲ್ಲಾಸ' ಚಿತ್ರ ಅರ್ಧಕ್ಕೆ ನಿಂತು ಹೋಗಿದೆ!

'ಉಲ್ಲಾಸ' ಚಿತ್ರ ಆಸ್ಟ್ರೇಲಿಯಾ ನ್ಯೂಜಿಲ್ಯಾಂಡ್ ಮತ್ತು ಇತರೆ ವಿದೇಶಿ ತಾಣಗಳಲ್ಲಿ ಚಿತ್ರೀಕರಣವಾಗಲಿದೆ ಎಂದು ಭಾರೀ ಪ್ರಚಾರ ಪಡೆದಿತ್ತು. ಅಷ್ಟೇ ಅಲ್ಲ ಚಿತ್ರದ ಮುಹೂರ್ತವೂ ಬಹಳ ಅದ್ದೂರಿಯಾಗಿಯೇ ನಡೆದಿತ್ತು. ಈ ಚಿತ್ರದ ಮುಖಾಂತರ ಬೈಕ್ ರೇಸ್‌ನಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ ವಿಜಯ್‌ಕುಮಾರ್ ಎಂಬ ಹುಡುಗ ನಾಯಕನಾಗಲು ಹೊರಟಿದ್ದ. ಈತನ ನಾಯಕಿಯಾಗಿ ರಮ್ಯಾ ಆಯ್ಕೆಯಾಗಿದ್ದಳು.


ಆದರೆ ಈಗ ಈ ಚಿತ್ರ ಅರ್ಧಕ್ಕೆ ನಿಂತು ಹೋಗಿದೆ ಎಂಬ ಸುದ್ದಿ ಬಂದಿದೆ. ಯಾಕೆ ಹೀಗಾಯಿತು ಎಂಬುದರ ಬಗ್ಗೆ ನಾನಕ್ಕೊಂದು ಕಥೆಗಳು ಕೇಳಿ ಬರುತ್ತಿವೆ. ಈ ಮಧ್ಯೆ ಗೋಲ್ಡನ್ ಸ್ಟಾರ್ ಗಣೇಶ್ ನಟಿಸುತ್ತಿರುವ 'ಉಲ್ಲಾಸ ಉತ್ಸಾಹ' ಚಿತ್ರ ಮಾತ್ರ ಭರದಿಂದ ಸಾಗುತ್ತಿದೆ.

ಜಂಬದ ಹುಡುಗಿಗೆ ಪ್ರಶಸ್ತಿ ಬೇಕಂತೆ!



'ಜಂಬದ ಹುಡುಗಿ' ಖ್ಯಾತಿಯ ಪ್ರಿಯಾ ಹಾಸನ್ ಈಗ 'ಬಿಂದಾಸ್ ಹುಡುಗಿ' ಎಂಬ ಚಿತ್ರದಲ್ಲೂ, ಅದಕ್ಕೂ ಮುನ್ನ 'ಹುಬ್ಬಳ್ಳಿ ಹುಡುಗಿ' ಎಂಬ ಚಿತ್ರದಲ್ಲೂ ನಟಿಸಲಿದ್ದಾಳೆ. ಎಂದಿನಂತೆ ಈ ಚಿತ್ರಕ್ಕೂ ಆಕೆಯೇ ನಾಯಕಿ, ನಿರ್ಮಾಪಕಿ, ನಿರ್ದೇಶಕಿ ಎಲ್ಲಾವೂ ಆಗಿದ್ದಾಳೆ.

ಮೊನ್ನೆ ಪತ್ರಿಕಾಗೋಷ್ಠಿಯಲ್ಲಿ ಪ್ರಿಯಾ ಹಾಸನ್ ತಮ್ಮ ಚಿತ್ರಕ್ಕೆ ಪ್ರಶಸ್ತಿ ದೊರೆಯದ ಬಗ್ಗೆ ಬೇಸರ ವ್ಯಕ್ತಪಡಿಸಿದರು. "ನನ್ನ ಚಿತ್ರಕ್ಕೆ ಮೊದಲ ಪ್ರಶಸ್ತಿ ಅಥವಾ ದ್ವಿತೀಯ ಪ್ರಶಸ್ತಿ ಬರಬೇಕೆಂದು ನಾನೇನೂ ಹೇಳುತ್ತಿಲ್ಲ. ಆದರೆ ಹುಡುಗಿಯೊಬ್ಬಳು ಮೊದಲ ಬಾರಿ ನಿರ್ಮಾಪಕಿ, ನಿರ್ದೇಶಕಿ, ನಾಯಕಿ ಹೀಗೆ ಹಲವಾರು ವಿಭಾಗಗಳಲ್ಲಿ ಕೆಲಸ ಮಾಡುವಾಗ, ಅಟ್‌ಲೀಸ್ಟ್ ಪ್ರೋತ್ಸಾಹಕ ಬಹುಮಾನವನ್ನಾದರೂ ನೀಡಬಹುದಿತ್ತು ಅಥವಾ ಕೇಂದ್ರ ಸರ್ಕಾರದ ತರಹ ಮೊದಲ ನಿರ್ದೇಶನ ಮಾಡಿದವರಿಗೆ ನೀಡುವ ಪ್ರಶಸ್ತಿಗಳನ್ನು ಇಲ್ಲೂ ಅನುಷ್ಠಾನಕ್ಕೆ ತರಬಹುದಿತ್ತು" ಎಂದು ಆಕೆ ಹೇಳಿದಳು.



ಸಿನಿಮಾ ಪತ್ರಕರ್ತರು ಆರಂಭಿಸಿದ 'ಅಮೃತ ಮಾತು-ಮಂಥನ' ಕಾರ್ಯಕ್ರಮದಲ್ಲಿ ನಿರ್ಮಾಪಕ ಕೆ.ಮಂಜು ಒಂದು ಗಂಟೆ ಕಾಲ ಮಾತನಾಡಿ ಎಲ್ಲರನ್ನೂ ಚಕಿತರನ್ನಾಗಿಸಿದರು.

ಸದ್ಯಕ್ಕೆ ಐದು ಚಿತ್ರಗಳನ್ನು ಏಕಕಾಲದಲ್ಲಿ ನಿರ್ಮಿಸಿ ಅದನ್ನು ಬಿಡುಗಡೆ ಮಾಡುವ ಗಡಿಬಿಡಿಯಲ್ಲಿರುವ ಕೆ.ಮಂಜು ಚಿತ್ರ ನಿರ್ಮಾಣದ ಅನೇಕ ಸಂಕಷ್ಟಗಳನ್ನು ಪತ್ರಕರ್ತರ ಮುಂದೆ ತೋಡಿಕೊಂಡರು. ಮುಖ್ಯವಾಗಿ ಗಗನಕ್ಕೇರುತ್ತಿರುವ ನಾಯಕ-ನಾಯಕಿಯರ ಸಂಭಾವನೆ ಹಾಗೂ ಇತರ ತಂತ್ರಜ್ಞರ ಸಂಭಾವನೆ ಬಗ್ಗೆ ಮಂಜು ಆಕ್ರೋಶ ವ್ಯಕ್ತಪಡಿಸಿದರು.

ಇತ್ತೀಚೆಗೆ ಅತ್ಯಂತ ಹೆಚ್ಚು ಸಂಖ್ಯೆಯಲ್ಲಿ ಚಿತ್ರಗಳನ್ನು ನಿರ್ಮಾಣ ಮಾಡುತ್ತಿರುವ ಖ್ಯಾತಿಗೆ ಮಂಜು ಒಳಗಾಗಿದ್ದಾರೆ. ಹನ್ನೆರಡು ವರ್ಷಗಳ ಅವಧಿಯಲ್ಲಿ ಸುಮಾರು 24 ಚಿತ್ರಗಳನ್ನು ನಿರ್ಮಾಣ ಮಾಡಿರುವುದು ಇವರ ಟ್ರ್ಯಾಕ್ ರೆಕಾರ್ಡ್. ಬಹುಶಃ ಇಷ್ಟು ಅಲ್ಪಾವಧಿಯಲ್ಲಿ ಇಷ್ಟೊಂದು ಚಿತ್ರ ನಿರ್ಮಾಣ ಮಾಡಿದ ಮತ್ತೊಬ್ಬ ನಿರ್ಮಾಪಕ ನಮ್ಮ ನಡುವೆ ಇಲ್ಲವೆನ್ನಬಹುದು. ಕೊಬ್ಬರಿ ವ್ಯಾಪಾರಿಯಾಗಿದ್ದ ಮಂಜು ಆನಂತರ ಆಟೋಚಾಲಕರಾಗಿದ್ದರು. ಆದರೀಗ ಮಾಯಾಲೋಕದ ಪ್ರಮುಖ ನಿರ್ಮಾಪಕರಾಗಿ ಬೆಳೆದಿದ್ದಾರೆ. ಅಂದಹಾಗೆ, ಅವರಿಗೆ ನಟನಾಗಬೇಕೆಂಬ ಆಸೆ ಇದೆಯಂತೆ; ಆದರೆ ಅವರ ಪತ್ನಿ ಅನುಮತಿ ನೀಡುತ್ತಿಲ್ಲವೆಂದು ಬೇಸರ ವ್ಯಕ್ತಪಡಿಸಿದರು. ಪಾಪ ಮಂಜು!



ದರ್ಶನ್ ಅವರ ಆಪ್ತಮಿತ್ರ ಅಣಜಿ ನಾಗರಾಜ್ ಮತ್ತು ದರ್ಶನ್ ಅವರ ಅದೃಷ್ಟದ ಹಂಚಿಕೆದಾರ ಜಯಣ್ಣ ಈಗ ದರ್ಶನ್ ಕ್ಯಾಂಪ್‌ನಿಂದ ದೂರವಿರುವುದು ಎಲ್ಲರಿಗೂ ಗೊತ್ತಿರುವ ವಿಷಯ.

'ತಾಜ್‌ಮಹಲ್' ಚಿತ್ರದಿಂದ ತಾರಾವರ್ಚಸ್ಸು ಪಡೆದುಕೊಂಡ ಅಜಯ್ ಇವರ ನಿರ್ಮಾಣದ 'ಜಾಜಿಮಲ್ಲಿಗೆ' ಚಿತ್ರದ ನಾಯಕ. ಈಗಾಗಲೇ 'ಜಾಜಿಮಲ್ಲಿಗೆ'ಯ ಚಿತ್ರೀಕರಣ ಮುಗಿಸಿರುವ ಅಣಜಿ ಮತ್ತು ಜಯಣ್ಣ ಇದರ ಬಿಡುಗಡೆಗೆ ತಯಾರಿ ನಡೆಸುತ್ತಿದ್ದಾರೆ. ಎಂದಿನಂತೆ ಈ ಚಿತ್ರವೂ ರಿಮೇಕ್. ಕಳೆದೆರಡು ಚಿತ್ರಗಳಲ್ಲಿ ಕೈ ಸುಟ್ಟುಕೊಂಡ ಈ ಜೋಡಿ ಈ ಚಿತ್ರ ಖಂಡಿತ ಗೆದ್ದೇ ಗೆಲ್ಲುತ್ತದೆಂಬ ವಿಶ್ವಾಸದಲ್ಲಿದೆ. ಯಾಕೆಂದರೆ ಈ ಚಿತ್ರ ತಮಿಳಿನಲ್ಲಿ ಬಾಕ್ಸಾಫೀಸ್ ಕೊಳ್ಳೆ ಹೊಡೆದಿದೆಯಂತೆ.

ಮತ್ತೊಂದೆಡೆ 'ತಾಜ್‌ಮಹಲ್' ನಿರ್ದೇಶಕ ಇದೇ ಅಜಯ್‌ನನ್ನು ಹಾಕಿಕೊಂಡು 'ಪ್ರೇಮ್ ಕೀ ಕಹಾನಿ' ಮುಗಿಸಿದ್ದಾರೆ. ಇವೆರಡು ಚಿತ್ರಗಳು ಹಿಟ್ ಆದರೆ ಅಜಯ್ ಬಹಳಷ್ಟು ಎತ್ತರಕ್ಕೆ ತಲುಪುವ ಸಾಧ್ಯತೆ ಇದೆ. ಹೀಗಾಗಿ 'ಜಾಜಿಮಲ್ಲಿಗೆ'ಯ ಸೋಲು ಅಥವಾ ಗೆಲುವು ಅಜಯ್ ಮತ್ತು ಅಣಜಿ ಇಬ್ಬರ ಭವಿಷ್ಯ ನಿರ್ಧರಿಸಲಿದೆ.



ಪರಭಾಷೆಯ ಜನಪ್ರಿಯ ಮತ್ತು ಯಶಸ್ವಿ ಚಿತ್ರಗಳನ್ನು ಕನ್ನಡಕ್ಕೆ ಭಟ್ಟಿ ಇಳಿಸಿದರೆ ಚಿತ್ರ ಗೆದ್ದೇ ಗೆಲ್ಲುತ್ತದೆ ಎಂಬ ನಮ್ಮವರ ನಂಬಿಕೆ ಮತ್ತೊಮ್ಮೆ ಸುಳ್ಳಾಗಿದೆ.

ಶೇಖರ್‌ಕಮ್ಮುಲ ನಿರ್ದೇಶನದ 'ಹ್ಯಾಪಿ ಡೇಸ್' ಚಿತ್ರವನ್ನು ಯಥಾವತ್ತಾಗಿ ಕನ್ನಡಕ್ಕೆ ಭಟ್ಟಿ ಇಳಿಸಿದ ಎಂ.ಡಿ.ಶ್ರೀಧರ್ ಈಗ ಚಿಂತಾಕ್ರಾಂತರಾಗಿದ್ದಾರೆ. ಯಾಕೆಂದರೆ 'ಜಾಲಿಡೇಸ್' ನೋಡಲು ಥಿಯೇಟರ್ ಕಡೆಗೆ ಯಾರೂ ಬರುತ್ತಿಲ್ಲವಂತೆ! ಅದಕ್ಕೆ ಈಗ "ಪತ್ರಿಕೆಯವರು ನಮಗೆ ಸಹಾಯ ಮಾಡಿ ಚಿತ್ರ ಗೆಲ್ಲುವಂತೆ ಮಾಡಿ" ಎಂದು ನಿರ್ಮಾಪಕ, ನಿರ್ದೇಶಕ, ಕಲಾವಿದರು ಪತ್ರಿಕಾಗೋಷ್ಠಿಯಲ್ಲಿ ಕೇಳಿಕೊಂಡರು. ಆದರೆ ಪತ್ರಿಕೆಯವರು ಥಿಯೇಟರ್‌ಗೆ ಜನರನ್ನು ಹೇಗೆ ಕರೆತರಬೇಕು? ಎಂದು ಕೇಳಿದರೆ ಅವರ ಬಳಿ ಉತ್ತರವಿರಲಿಲ್ಲ.

ಅಂತೂ ತೆಲುಗಿನಲ್ಲಿ ಸೂಪರ್‌ಹಿಟ್ ಆದ ಈ ಚಿತ್ರ ಕನ್ನಡದಲ್ಲಿ ಮುಗ್ಗರಿಸಿದ್ದೇ ತಡ, ಅನೇಕ ನಿರ್ಮಾಪಕರು ಈಗ ರೀಮೇಕ್ ಚಿತ್ರ ಮಾಡಲು ಹಿಂಜರಿಯುತ್ತಿದ್ದಾರೆ. ಇದೊಂದು ಶುಭಸೂಚನೆ ಎನ್ನೋಣವೇ?

ಕದ್ದ ಕತೆಯ ಎರಡು ಚಿತ್ರಗಳು

ನಾಗೇಂದ್ರಪ್ರಸಾದ್ ನಿರ್ದೇಶನದ 'ಮೇಘವೇ ಮೇಘವೇ' ಮತ್ತು ಯೋಗೇಶ್ ನಟಿಸಿರುವ 'ಅಂಬಾರಿ' ಈ ವಾರ ತೆರೆಕಂಡಿರುವ ಚಿತ್ರಗಳು. ಇವೆರಡರ ವಿಶೇಷತೆಯೆಂದರೆ ಕನ್ನಡದ ಚಿತ್ರಗಳ ರೀಮೇಕ್ ಆಗಿರುವುದು.

ನಾಗೇಂದ್ರಪ್ರಸಾದ್ ಸ್ವತಃ ಕಥೆಗಾರನಾಗಿದ್ದರೂ 'ಮುಂಗಾರು ಮಳೆ'ಯ ಕಥೆಯ ಎಳೆಯನ್ನೇ ಅಲ್ಪಸ್ವಲ್ಪ ಬದಲಾಯಿಸಿದ್ದಾರೆ. ಆದರೆ ಈ ಚಿತ್ರ ಎಷ್ಟು ಕೆಟ್ಟದಾಗಿದೆ ಎಂದರೆ ಇದು ಇನ್ನೊಂದು 'ಮುಂಗಾರು ಮಳೆ'ಯಾಗಲು ಸಾಧ್ಯವೇ ಇಲ್ಲ.


ಎ.ಪಿ.ಅರ್ಜುನ್ ಕೂಡ ತನ್ನ ಚೊಚ್ಚಲ ನಿರ್ದೇಶನದ 'ಅಂಬಾರಿ' ಚಿತ್ರದಲ್ಲಿ ಇನ್ನೊಂದು ರೀತಿ ಕೃತಿ ಚೌರ್ಯ ಮಾಡಿದ್ದಾರೆ. ಇದು ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಅಮೃತಧಾರೆ' ಚಿತ್ರದ ಕಥಾವಸ್ತುವಿನ ಮತ್ತೊಂದು ರೂಪ. ಅಲ್ಲಿ ನಾಯಕ ನಾಯಕಿ ಕ್ಲೈಮ್ಯಾಕ್ಸ್‌ನಲ್ಲಿ ತಾಜ್‌ಮಹಲ್ ತಲುಪುತ್ತಾರೆ; ನಾಯಕಿ ಕೊನೆಯುಸಿರೆಳೆಯುತ್ತಾಳೆ. ಇಲ್ಲಿ ಸೈಕಲ್‌ನಲ್ಲಿ ತಾಜ್‌ಮಹಲ್ ತಲುಪುವ ನಾಯಕ ನಾಯಕಿಯರಲ್ಲಿ ಕೊನೆಗೆ ನಾಯಕ ಸಾಯುತ್ತಾನೆ. ಈ ಮಧ್ಯೆ ಈ ಚಿತ್ರದ ಮೇಲೆ 'ದುನಿಯಾ' ಚಿತ್ರದ ಪ್ರಭಾವವೂ ಅಲ್ಲಲ್ಲಿ ಕಾಣಿಸಿಕೊಳ್ಳುತ್ತದೆ.




ತಮಿಳು ಅಥವಾ ತೆಲುಗು ಚಿತ್ರಗಳನ್ನು ರಿಮೇಕು ಮಾಡುವ ಬದಲು ನಮ್ಮ ಯುವ ನಿರ್ದೇಶಕರು ಕನ್ನಡದ ಕಥೆಗಳನ್ನೇ ರೀ-ರೈಟ್ ಮಾಡುತ್ತಿದ್ದಾರಲ್ಲಾ ಎಂದಷ್ಟೇ ಸಂತೋಷಪಡಬೇಕಾಗಿದೆ.

ನಾಗೇಂದ್ರಪ್ರಸಾದ್ ಎಂಬ ಗೀತರಚನಕಾರನ ಮೂರನೇ ನಿರ್ದೇಶನದ ಚಿತ್ರ 'ಮೇಘವೇ ಮೇಘವೇ'. ಹಿಂದಿಯ 'ಲಗಾನ್' ಚಿತ್ರದ ನಾಯಕಿ ಗ್ರೇಸಿ ಸಿಂಗ್ ಈ ಚಿತ್ರದ ನಾಯಕಿ. ಈಗಾಗಲೇ ಒಂದೆರಡು ಚಿತ್ರಗಳಲ್ಲಿ ನಾಯಕನಾಗಿ ನಟಿಸಿರುವ ರಾಮ್ ಈಕೆಗೆ ಜೋಡಿ. ಈ ಮಧ್ಯೆ ಸುದೀಪ್ ಈ ಚಿತ್ರದಲ್ಲಿ ಅತಿಥಿ ನಟನಾಗಿ ಕೂಡಾ ಕಾಣಿಸಿಕೊಂಡಿದ್ದಾರೆ. ಇಷ್ಟಾದರೂ ಈ ಚಿತ್ರದ ಜಾಹೀರಾತಿನಲ್ಲಿ ಎಲ್ಲೂ ನಾಯಕ-ನಾಯಕಿಯರ ಫೋಟೊಗಳಿಲ್ಲ, ಬದಲಿಗೆ ನಾಗೇಂದ್ರಪ್ರಸಾದ್ ದೊಡ್ಡ ಕ್ಯಾಮೆರಾ ಹಿಡಿದುಕೊಂಡಿರುವ ಚಿತ್ರ ಆ ಜಾಹೀರಾತಿನಲ್ಲಿದೆ.

ಬಹುಶಃ ನಾಗೇಂದ್ರಪ್ರಸಾದ್ ಅಂದುಕೊಂಡಿರಬೇಕು: ನನ್ನ ಮುಖ ನೋಡಿಯೇ ಜನ ಥಿಯೇಟರ್‌ಗೆ ಬರುತ್ತಾರೆಂದು! ಈ ನಾಗೇಂದ್ರಪ್ರಸಾದ್ ನಿರ್ದೇಶಕನಾಗಿ ಕೂಡಾ ಅಂತಹ ತಾರಾವರ್ಚಸ್ಸು ಪಡೆದಿಲ್ಲ. ಮಾತ್ರವಲ್ಲ ಈತ ನಿರ್ದೇಶಿಸಿದ ಎರಡೂ ಚಿತ್ರಗಳು ಗಬ್ಬೆದ್ದು ನಿರ್ಮಾಪಕರಿಗೆ ನಷ್ಟವೂ ಆಗಿತ್ತು. ಆದರೂ ಜಾಹೀರಾತಿನಲ್ಲಿ ತನ್ನ ಫೋಟೋ ಮಾತ್ರ ಹಾಕುವ ಈ ಮನುಷ್ಯನ ಹುಂಬತನ ನೋಡಿ ಆಶ್ಚರ್ಯವಾಗುತ್ತದೆ. ವಾಸ್ತವವಾಗಿ ಈತನ ಫೋಟೋವನ್ನು ನೋಡಿಯೇ ಪ್ರೇಕ್ಷಕ ಥಿಯೇಟರ್ ಕಡೆಗೆ ಹೋಗುತ್ತಿಲ್ಲ ಎಂಬ ವಿಷಯ ನಾಗೇಂದ್ರಪ್ರಸಾದ್‌ಗೆ ಇನ್ನೂ ಗೊತ್ತಾಗಿಲ್ಲದಿರುವುದು ವಿಪರ್ಯಾಸ.





ನಮ್ಮ 'ಲಂಕೇಶ್' ಬಳಗದ ಹಿರಿಯ ಸಿನಿಮಾ ವರದಿಗಾರ ಸದಾಶಿವ ಶೆಣೈ ಮೊದಲಿಗೆ ಓದಿದ್ದು ಎಲ್‌ಎಲ್‌ಬಿ. ಆದರೆ ವಕೀಲಿ ವೃತ್ತಿಗಿಂತ ಹೆಚ್ಚು ಇವರನ್ನು ಸೆಳೆದಿದ್ದು ಪತ್ರಿಕೋದ್ಯಮ. ಆಗ ಅವರು ಸೇರಿದ್ದು 'ಲಂಕೇಶ್ ಪತ್ರಿಕೆ'ಯನ್ನು.

ಅಂದಿನಿಂದ ಹದಿನೆಂಟೂವರೆ ವರ್ಷ ಪತ್ರಕರ್ತರಾಗಿಯೇ ಕೆಲಸ ಮಾಡಿರುವ ಶೆಣೈ ಈಗ ಪತ್ರಿಕೋದ್ಯಮದ ಜೊತೆಗೆ ಹೊಸದಾಗಿ ವಕೀಲಿಕೆಯನ್ನೂ ಆರಂಭಿಸಿದ್ದಾರೆ!

ಇದೇನಿದು? ಎಂದು ಹುಬ್ಬೇರಿಸಬೇಡಿ!

ಪತ್ರಕರ್ತ ಜೋಗಿ ಚಿತ್ರಕತೆ, ಸಂಭಾಷಣೆ ಬರೆಯುವ 'ಮನೆಯೊಂದು ಮೂರು ಬಾಗಿಲು' ಧಾರಾವಾಹಿಯಲ್ಲಿ ಶೆಣೈ ಲಾಯರ್ ಪಾತ್ರ ನಿರ್ವಹಿಸುತ್ತಿದ್ದಾರೆ. ಇತ್ತೀಚೆಗಷ್ಟೇ ಸಿನಿಮಾ ನಿರ್ದೇಶನದ ಸಾಧ್ಯತೆಯ ಬಗ್ಗೆ ಗಮನಹರಿಸುತ್ತಿರುವ ಶೆಣೈ ಈಗ ಕಿರುತೆರೆ ನಟನೆಯತ್ತಲೂ ಆಕರ್ಷಿತರಾಗಿರುವುದು ವಿಶೇಷ.



ನೋಡಲು ಹ್ಯಾಂಡ್‌ಸಮ್ ಆಗಿರುವ ಶೆಣೈ ಅವರಿಗೆ ಈ ಹಿಂದೆ ಹಲವಾರು ಬಾರಿ ಹಿರಿತೆರೆಯಲ್ಲೇ ನಟಿಸುವುದಕ್ಕೆ ಸಾಕಷ್ಟು ಅವಕಾಶಗಳು ಬಂದಿದ್ದವು. ಆದರೆ ಶೆಣೈ ಮಾತ್ರ ಅವುಗಳಿಗೆ ಒಪ್ಪಿರಲಿಲ್ಲ. ಈಗ ಸ್ನೇಹಿತ ಜೋಗಿ ಅವರ ಒತ್ತಾಸೆಗೆ ಶೆಣೈ ಮಣಿದಿದ್ದಾರೆ.

ಇದನ್ನು ಸ್ನೇಹದ ತಾಕತ್ತು ಎನ್ನೋಣವೇ?

TV TIPS



ಮದುವೆಯಾಗಿ ಅತ್ತೆ ಜಯಂತಿ ಮನೆ ಸೇರಿದ್ದ ಅನು ಪ್ರಭಾಕರ್ ಈಗ ಮತ್ತೆ ಮುಖಕ್ಕೆ ಬಣ್ಣ ಹಚ್ಚಿದ್ದಾರೆ. ಹಾಗಂತ ಈಕೆ ಸಿನಿಮಾದಲ್ಲೇನೂ ಕಾಣಿಸಿಕೊಳ್ಳುತ್ತಿಲ್ಲ, ಬದಲಿಗೆ ಕಿರುತೆರೆಯತ್ತ ಮುಖ ಮಾಡಿದ್ದಾರೆ.

ಸಿನಿಮಾ ಅವಕಾಶಗಳು ಕಡಿಮೆಯಾದಾಗ ಟಿವಿ ನಿರೂಪಣೆಯನ್ನೂ ಮಾಡುತ್ತಿದ್ದ ಅನು ಈಗ ಎಲ್ಲ 'ನಿವೃತ್ತ' ನಾಯಕಿಯರಂತೆ ಸೀರಿಯಲ್‌ಗೆ ಇಳಿದಿದ್ದಾರೆ.

ಕಣ್ಣನ್ ಪರಮೇಶ್ವರ್ ನಿರ್ದೇಶನದ 'ನೂರು ದಿನಗಳು' ಧಾರಾವಾಹಿಯ ಪ್ರಮುಖ ಪಾತ್ರ ಈಗ ಅನು ಕೃಷ್ಣಕುಮಾರ್ ಪಾಲಾಗಿದೆ. ಅಷ್ಟೇ ಅಲ್ಲ ಅನು ಜೊತೆ ದ್ವಾರಕೀಶ್, ಎಡಕಲ್ಲು ಗುಡ್ಡದ ಚಂದ್ರಶೇಖರ್‌ರಂಥ ಸಿನಿಮಾ ದಿಗ್ಗಜರೂ ಈ ಧಾರಾವಾಹಿಯಲ್ಲಿದ್ದಾರೆ.

R B P LANKESH, Kannada Weekly Price Rs. 12/- 11-02-2009 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4





ನಾನು-ನೀನು ಒಂದಾದ ಮೇಲೆ....!

80ರ ದಶಕದ ಯಶಸ್ವೀ ಜೋಡಿ ಅನಂತ್‌ನಾಗ್-ಲಕ್ಷ್ಮಿ ಈಗ ಮತ್ತೆ ಒಂದಾಗಿದ್ದಾರೆ. ಆದರೆ ಅಂದು ನಾಯಕ-ನಾಯಕಿಯರಾಗಿ ಮರ ಸುತ್ತಿ, ಸೈಕಲ್ ಏರಿ, ಹಾದಿ ಕುಣಿಯುತ್ತಿದ್ದ ಈ ಫೇಮಸ್ ಕಾಂಬಿನೇಷನ್ ಈಗ ಮತ್ತೆ ಡ್ಯೂಯೆಟ್ ಹಾಡೋ ಸಾಧ್ಯತೆಯಾದರೂ ಎಲ್ಲಿ ಸಿಗಬೇಕು? ಹಾಗಾಗಿ ಈಗ ಇವರಿಬ್ಬರೂ ಮಕ್ಕಳನ್ನು ಹೆತ್ತ ಪೋಷಕರಾಗಿದ್ದಾರೆ!

'ಪಟ್ರೆ ಲವ್ ಪದ್ಮ' ಅನ್ನೋ ಕುಖ್ಯಾತ ಸಿನಿಮಾದ ಹೀರೋ ಅಜಿತ್ ನಟಿಸುತ್ತಿರುವ ಎರಡನೇ ಚಿತ್ರ 'ಶಿವಕಾಶಿ'ಯಲ್ಲಿ ಅನಂತ್-ಲಕ್ಷ್ಮಿ ಫಾದರ್-ಮದರ್ ಆಗಿ ಅವತಾರವೆತ್ತಿದ್ದಾರೆ.

ಏಳೆಂಟು ವರ್ಷಗಳ ಹಿಂದಷ್ಟೇ ಇದೇ ಜೋಡಿ 'ಅಮ್ಮ' ಅನ್ನೋ ಚಿತ್ರದಲ್ಲಿ ಕಾಣಿಸಿಕೊಂಡಿತ್ತು. ಆದರೆ 'ಅಮ್ಮ' ಬಂದಿದ್ದು, ವಾಪಸ್ ಹೋಗಿದ್ದು ಬಹುಶಃ ಯಾವ ಪ್ರೇಕ್ಷಕನಿಗೂ ಗೊತ್ತೇ ಆಗಲಿಲ್ಲ.

ಯಾಕೆಂದರೆ ಅದು ಡಿ. ರಾಜೇಂದ್ರ ಬಾಬು ನಿರ್ದೇಶಿಸಿದ್ದ ಸಿನಿಮಾ!!



ಸಿನಿಮಾ ಜೊತೆಗೆ ರಾಜಕೀಯದ ದೊಂಬರಾಟಕ್ಕಿಳಿದು ಎರಡೂ ಕಡೆ ಅರೆಬರೆಯಾಗಿ ಕಯ್ಯಾಕಯ್ಯಾ ಅಂತ ಕುಯ್‌ಗುಟ್ಟುತ್ತಿರುವ ನವರಸ ನಾಯಕ ಜಗ್ಗೇಶ್ ಮಗ ಗುರುರಾಜ್ ಹೀರೋ ಆಗುತ್ತಿದ್ದಾನೆ. ಈ ವಿಚಾರವನ್ನು 'ಲಂಕೇಶ್' ಈ ಹಿಂದೆಯೇ ತಿಳಿಸಿತ್ತು. ಈಗದು ಪಕ್ಕಾ ಆಗಿದೆ.

ಕೈಗೆ ಮೈಕು ಸಿಕ್ಕಾಕ್ಷಣ ಕನ್ನಡಮ್ಮನ ಬಗ್ಗೆ ಗಂಟೆಗಟ್ಟಲೇ ಕಣಿ ಪುಂಗುವ ಕನ್ನಡ 'ಹಾರಾಟಗಾರ' ಜಗ್ಗೇಶ್ ಸುಪುತ್ರನ ಮೊದಲ ಸಿನಿಮಾವೇ ತಮಿಳು ಚಿತ್ರದ ರಿಮೇಕ್ ಎಂಬುದನ್ನು ಕನ್ನಡಾಭಿಮಾನಿಗಳು ಗಮನಿಸಲೇಬೇಕಾದ ವಿಚಾರ.

ತಮಿಳಿನಲ್ಲಿ ನಿರ್ಮಾಣವಾಗಿ ಸೂಪರ್ ಹಿಟ್ ಆಗಿದ್ದ 'ನಂ. 7/ಜಿ. ರೇನ್‌ಬೋ ಕಾಲೋನಿ' ಚಿತ್ರವನ್ನೇ ಕನ್ನಡೀಕರಿಸಿ 'ಗಿಲ್ಲಿ' ಎಂದು ಹೆಸರಿಟ್ಟಿದ್ದಾರೆ. ಕೇವಲ ಒಂದೇ ತಿಂಗಳಲ್ಲಿ ಮಕ್ಕಾಮಕ್ಕಿ ಛಟ್ಟಿ ಇಳಿಸಲು ಉದ್ದೇಶಿಸಿರುವ ಈ ಚಿತ್ರದ ನಿರ್ದೇಶಕರಾಗಿ 'ಸತ್ಯ ಇನ್ ಲವ್' ಚಿತ್ರ ಖ್ಯಾತಿಯ ರಾಘವ್ ಲೋಕಿ ನಿಕ್ಕಿಯಾಗಿದ್ದಾರೆ. ಇನ್ನು ದರ್ಶನ್ ಗ್ಯಾಂಗ್‌ನಿಂದ ಹೊರಬಂದು ನಿರಾಶ್ರಿತರಾಗಿರುವ ಆತನ ಮಾಜಿ ದೋಸ್ತಿಗಳಾದ ಆಣಜಿ ನಾಗರಾಜ್ ಮತ್ತು ಜಯಣ್ಣ ಇಬ್ಬರೂ ಸೇರಿ ಈ ಚಿತ್ರಕ್ಕೆ ಬಂಡವಾಳ ಹಾಕುತ್ತಿದ್ದಾರೆ.

ಆದೇನೇ ಇದ್ದರೂ, ಈ ಮೂಲಕವಾದರೂ ಮೈಕ್‌ಸನ್ ಜಗ್ಗೇಶನ ಭಾಷಾಪ್ರೇಮ ಶುದ್ಧ ನಕಲು ಅನ್ನೋದು ಜಗಜ್ಜಾಹೀರಾಗಿದೆ.

ಇದೇನಾ ಕನ್ನಡ ಪ್ರೇಮ?

ಸೈಲೆಂಟಾಗಿ ಚೆಲ್ಲಿದ ಸಂಪಿಗೆ



ಎಸ್. ನಾರಾಯಣನಂಥ ಗ್ರೇಟ್ ನಿರ್ದೇಶಕನಿಗೆ ಇಂಥ ಗತಿ ಬರಬಾರದಿತ್ತು! ಕದ್ದಿದ್ದು, ಸುತ್ತಿದ್ದು... ಎಲ್ಲಾ ಸೇರಿದರೆ ನಾಲ್ಕು ಡಜನ್ ಸಿನಿಮಾಗಳನ್ನು ನಿರ್ದೇಶಿಸಿರುವ ನಾಣಿ ಈಗ ಸೈಲೆಂಟಾಗಿ ಸಂಪಿಗೆ ಚೆಲ್ಲಿದ್ದಾರೆ!

ಮೊದಲಿನಿಂದಲೂ ಫ್ಲವರ್ ಹೆಸರುಗಳನ್ನು ಕಾಂಟ್ರಾಕ್ಟ್ ಪಡೆದು ಕಳಪೆ ವ್ಯಾಪಾರ ಮಾಡುವ ನಾಣಿ 'ಚೆಲ್ಲಿದರೂ ಸಂಪಿಗೆಯಾ' ಅನ್ನೋ ಚಿತ್ರವನ್ನು ಚಿತ್ರರಂಗದಲ್ಲಿ ಯಾರೆಂದರೆ ಯಾರಿಗೂ ತಿಳಿಯದಂತೆ ಕದ್ದು ಮುಚ್ಚಿ ರಹಸ್ಯವಾಗಿ ಮುಗಿಸಿದ್ದಾರೆ.

U-2 ನಿರೂಪಕಿ ಸ್ಫೂರ್ತಿ ನಾಯಕಿಯಾಗಿರುವ ಈ ಚಿತ್ರದಲ್ಲಿ ನಾಣಿ ಮಗ ಪಂಕಜ್ ಮತ್ತೆ ನಾಯಕನಾಗಿದ್ದಾನೆ ಅನ್ನೋ ಆಘಾತಕಾರಿ ಗಾಳಿ ಸುದ್ದಿ ಹರಡಿತ್ತು. ಆದರೆ ಒರಟ ಪ್ರಶಾಂತ್ ಆ ಚಿತ್ರದ ಹೀರೋ ಅನ್ನೋದು ಈಗ ಗ್ಯಾರಂಟಿಯಾಗಿದೆ.

ಪಾಟೀಲರ 'ಸೆಲ್ಯೂಟ್'

ಬಿ.ಸಿ.ಪಾಟೀಲ್ ಎಂಬ ನಟನನ್ನು ಪ್ರೇಕ್ಷಕರು ಮರೆತಿರಬಹುದು. ಆದರೆ ತನ್ನನ್ನು ಜನ ಮರೆಯಬಾರದು ಎಂಬ ಕಾರಣಕ್ಕಾಗಿಯೋ ಏನೋ? ಬಿ.ಸಿ.ಪಾಟೀಲ್ ಮತ್ತೆ ತಮ್ಮ ಮುಖಕ್ಕೆ ಬಣ್ಣ ಹಚ್ಚಲು ನಿರ್ಧರಿಸಿದ್ದಾರೆ. ಅವರು ನಿರ್ದೇಶಿಸಿ ನಟಿಸಲಿರುವ 'ಸೆಲ್ಯೂಟ್' ಎಂಬ ಚಿತ್ರ ಸೆಟ್ಟೇರುತ್ತಿದೆ.

ಈ ಹಿಂದೆ ಪಾಟೀಲ್ ಅವರು ಪೊಲೀಸ್ ಇಲಾಖೆಯಲ್ಲಿದ್ದಾಗ ಅದಕ್ಕೆ ಸೆಲ್ಯೂಟ್' ಹೊಡೆದು ಸಿನಿಮಾಕ್ಕೆ ಎಂಟ್ರಿಯಾಗಿದ್ದರು. ನಂತರ ರಾಜಕಾರಣಿಯಾಗಿ ಮತದಾರರ ಮುಂದೆ ಕೈಜೋಡಿಸಿ ಶಾಸಕರಾದರು. ಅನಂತರ ತಮ್ಮ ನಾಯಕರಿಗೆ ಅವರು ಎಷ್ಟೇ ಸೆಲ್ಯೂಟ್ ಹೊಡೆದರೂ ಇವರನ್ನು ಮಂತ್ರಿ ಮಾಡಲೇ ಇಲ್ಲ. ಈಗ ವಿರೋಧ ಪಕ್ಷದ ಶಾಸಕರಾಗಿರುವುದರಿಂದ ಮಂತ್ರಿಯಾಗುವ ಸಾಧ್ಯತೆಯೂ ಇಲ್ಲ. ಈ ಕಾರಣಕ್ಕಾಗಿ ಹಳೇ ಗಂಡನ ಪಾದವೇ ಗತಿ ಎಂದು ಪಾಟೀಲರು ಮತ್ತೆ ಸಿನಿಮಾಕ್ಕೆ ಬಂದು 'ಸೆಲ್ಯೂಟ್' ಹೊಡೆಯಲು ನಿಂತಿದ್ದಾರೆ. ಇದು ಬಹುಶಃ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಬಿಡುಗಡೆಯಾಗುವುದರಿಂದ ಈ ಚಿತ್ರದಲ್ಲಿ ಸಾಕಷ್ಟು ರಾಜಕೀಯವೂ ಇರಬಹುದೇನೋ?





ರೇಖಾ ಪರಿಚಯ

ಅಲ್ಲಿ ಧನುಷ್ ಇಲ್ಲಿ ಯೋಗೀಶ್

'ದುನಿಯಾ' ಚಿತ್ರದ ಲೂಸ್‌ಮಾದ ಈಗ ಕನ್ನಡದ 'ಧನುಷ್'ಆಗುವ ಸಾಧ್ಯತೆ ಕಾಣಿಸುತ್ತಿದೆ. ಈ ಧನುಷ್ ಯಾರೆಂದು ನಿಮಗೆ ಗೊತ್ತು ತಾನೇ? ಈತ ತಮಿಳಿನಲ್ಲಿ ದೊಡ್ಡದೊಡ್ಡ ಹೀರೋಗಳ ಚಿತ್ರಗಳನ್ನು ಬದಿಗೊತ್ತಿ ಎದ್ದು ನಿಂತ ಹುಡುಗ. ಅನಂತರ ರಜನೀಕಾಂತ್ ಅವರ ಅಳಿಯನಾಗಿ ಚಿತ್ರರಂಗದಲ್ಲಿ ಮತ್ತೊಂದು ರೀತಿಯ ಸುದ್ದಿ ಮಾಡಿದವನು.

ಈತ ನಟಿಸಿದ 'ಕಾದಲ್ ಕೊಂಡೇನ್' ಚಿತ್ರ ತಮಿಳು ಚಿತ್ರರಂಗದ ಇತಿಹಾಸದಲ್ಲೇ ಒಂದು ಹೊಸ ಅಧ್ಯಾಯ ಸೃಷ್ಟಿಸಿತು. ಈಗ ಆ ಚಿತ್ರದ ಕನ್ನಡ ಆವತರಣಿಕೆ 'ರಾವಣ' ಚಿತ್ರದಲ್ಲಿ ಯೋಗೇಶ್ ಯಾನೆ ಲೂಸ್‌ಮಾದ ನಟಿಸುತ್ತಿದ್ದಾನೆ. ಯೋಗೇಶ್ ಕೂಡಾ ಒಂದು ರೀತಿಯಲ್ಲಿ ಧನುಷ್ ತರಹ ಬರೀ ಎಲುಬುಳ್ಳ 'ಅಸ್ಥಿಪಂಜರ' ನಾಯಕ.



ಈಗ 'ರಾವಣ' ಚಿತ್ರಕ್ಕಾಗಿ ಲೂಸ್‌ಮಾದ ತನ್ನ ಉದ್ದುದ್ದ ಕೂದಲಿಗೆ ಕತ್ತರಿ ಪ್ರಯೋಗ ಮಾಡಿ ಧನುಷ್ ಗೆಟಪ್‌ನಲ್ಲಿ ಕಾಣಿಸುತ್ತಿದ್ದಾನೆ. ಈ ಗೆಟಪ್ ನೋಡಿ ನಿರ್ಮಾಪಕ ಕುಪ್ಪುಸ್ವಾಮಿ ಮತ್ತೆ ಹತ್ತು ಲಕ್ಷ ರೂ. ಕೊಟ್ಟು ಧನುಷ್ ನಟಿಸಿದ್ದ ಮತ್ತೊಂದು 'ಪೊಲ್ಲಾದವನ್' ಚಿತ್ರ ಹಕ್ಕನ್ನು ತಂದಿದ್ದಾರೆ. ಆ ಚಿತ್ರಕ್ಕೆ ಲೂಸ್‌ಮಾದ ತನ್ನ ಕಾಲ್‌ಶೀಟ್ ಕೂಡಾ ಕೊಟ್ಟಿದ್ದಾನೆ. ಈ ಚಿತ್ರಕ್ಕೆ 'ಪುಂಡ' ಎಂದು ಹೆಸರಿಟ್ಟಿದ್ದಾರೆ. ಮೂಲ ತಮಿಳು ಚಿತ್ರದಲ್ಲಿ ಕನ್ನಡದ ರಮ್ಯಾ ನಟಿಸಿದ್ದು, 'ಪುಂಡ' ಚಿತ್ರಕ್ಕೂ ರಮ್ಯಾಳ ಕಾಲ್‌ಶೀಟ್‌ಗಾಗಿ ಕುಪ್ಪುಸ್ವಾಮಿ ಪ್ರಯತ್ನಿಸುತ್ತಿದ್ದಾರೆ.

ಈ ಮಧ್ಯೆ ಧನುಷ್‌ನ ಇನ್ನೆರಡು ಚಿತ್ರಗಳ ಹಕ್ಕುಗಳನ್ನು ಕನ್ನಡದ ನಿರ್ಮಾಪಕರು ತಂದಿದ್ದಾರೆ. ಇದಕ್ಕೂ ಯೋಗೇಶ್ ನಾಯಕನಾಗುವುದು ಗ್ಯಾರಂಟಿ. ಅಲ್ಲಿಗೆ 2009ನ್ನು ಲೂಸ್‌ಮಾದ ನಿಗೇ ಅರ್ಪಿಸಿದಂತಾಗುತ್ತದೆ.

ಈ 'ಅಸ್ಥಿಪಂಜರ' ನಾಯಕನಿಗಿರುವ ಬೇಡಿಕೆಯನ್ನು ನೋಡಿದರೆ ಈಗ ಕನ್ನಡದಲ್ಲೂ ನಾಯಕ ನಟನೆಂದರೆ ದಷ್ಟಪುಷ್ಟವಾಗಿರಬೇಕು ಎಂಬ ಮಿತ್ ಸುಳ್ಳಾದಂತಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main